ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 15

ಸೆಪ್ಟೆಂಬರ್ 9, 2007

ರೂ. 5/-

ಪೇಜ್ 8





ಅಧಿಕಾರ ಹಸ್ತಾಂತರ ರಾಜ್ಯಕ್ಕೆ ಗಂಡಾಂತರ

ಪೇಜ್ 9



'ಹಾಳು ಬಿದ್ದ' ತುಮಕೂರು ವಿ.ವಿ.

ಪೇಜ್ 13



ನೌಕಾಪಡೆ ಜಂಟಿ ಕವಾಯತು ದೇಶಕ್ಕೆ ಆಪತ್ತು

ಕೋಲಾರ : ಕೋಮುಗಲಭೆಗೆ ಕಿಡಿ ಹೊತ್ತಿಸುವವರು

ಒಂದು ಕನಸಿನ ಬೀಜಿಂಗ್ ಒಲಂಪಿಕ್ಸ್



ವಗ್ಗೈರೆಗಳು....

ಸಮನ್ವಯ ರಾಜಕಾರಣ

ಏನೇ ಆಗಲಿ ಎಲ್ಲವನ್ನು ಚರ್ಚಿಸಿಯೇ ಬಿಡೋಣ ಎಂದು ತೋಳೇರಿಸಿದ್ದರಾದರೂ ಬಿಜೆಪಿ - ಜೆಡಿ(ಎಸ್) ಸಮನ್ವಯ ಸಮಿತಿ ಸಭೆ ನಡೆಯಲೇ ಇಲ್ಲ. ಅದು ಗಂಟೆಗಂಟೆಗೂ ಮುಂದೂಡುತ್ತಲೇ ಹೋಗಿ ರದ್ದಾಗಿಹೋಯ್ತು. ಮುಖ್ಯಮಂತ್ರಿಗಳು 'ಯಾವ ಪುರುಷಾರ್ಥಕ್ಕೆ ಈ ಸಭೆ' ಎಂದೇಬಿಟ್ಟರು. ಬಿಜೆಪಿ ಅಧ್ಯಕ್ಷ ಸದಾನಂದ ಗೌಡರಿಗೆ ಇಷ್ಟೇ ಸಾಕಲ್ಲ, ಸಿಕ್ಕಿತಲ್ಲ ಪ್ರಸಾದ ಎಂದು ಅದನ್ನೇ ದಿನಕ್ಕೆ ನಾಲ್ಕು ನಡೆವ ಪತ್ರಿಕಾಗೋಷ್ಠಿಗಳಲ್ಲಿ ಹಂಚುತ್ತಾ ಹೋಗುತ್ತಿದ್ದಾರಲ್ಲ!

★

ಮಾಸಿದ ಮುಗುಳ್ನಗೆ

ಬೆಂಗಳೂರಿನಲ್ಲಿ ಬುಸುಗುಡುತ್ತಿದ್ದವರು ಮಂಗಳೂರಿನಲ್ಲಿ ಮುಗುಳ್ನಕ್ಕರು! ಕೈ ಮಿಲಾಯಿಸುತ್ತಿದ್ದವರು ಖುಲಾಯಿಸಿದರು! ಅದೇನಾಗಿತ್ತೋ ಏನೋ ಮುಖ್ಯಮಂತ್ರಿ ಸ್ವಾಮಿ, ಉ.ಮು.ಮಂ. ರಡಿಯೂರಪ್ಪನವರು ನೋಡಿದವರು ಬಾಯಲ್ಲಿ ಬೆರಳಿಡುವಂತೆ ಒಂದಾಗಿದ್ದರು. ದ.ಕ. ಉಸ್ತುವಾರಿ ಸಚಿವ, ಬಜರಂಗದಳದ ನಾಯಕ ನಾಗರಾಜಶೆಟ್ಟಿ ನಂಟು ಬೆಸೆದ ಅಂಟು ಎಂದು ಮಾಧ್ಯಮಗಳು ಊದಿದವು. ಆದರೆ ಈ ಕಡೆ ಬಂದ ಮೇಲೆ ಮುಗುಳುನಗೆಯೇ ಕಾಣುತ್ತಿಲ್ಲವಲ್ಲ. ಹೀಗಾಗಿ ರಡಿಯೂರಪ್ಪನವರು ಈಗ ಮಧ್ಯರಾತ್ರಿಯಲ್ಲಿ ಬೆಚ್ಚಿಬೀಳುತ್ತಿದ್ದಾರಂತೆ.

★

ಸತ್ಯ ಕಂಡ ಸಾಂಗ್ಲಿಯಾನ

ಸಂಘ ಪರಿವಾರ ಕ್ರಿಸ್ಚಿಯನ್ನರ ಮೇಲೆ ದೌರ್ಜನ್ಯ, ಧಾಳಿ ಮಾಡುತ್ತಿದೆ ಎಂದು ಪ್ರತಿಭಟಿಸಿ ಬೀದಿಗಿಳಿದವರ ಪಕ್ಕ ನಿಂತಿದ್ದಾರೆ ಬಿಜೆಪಿ ಸಂಸದ ಅರ್ಥಾತ್ 'ಟಫ್ ಕಾಫ್' ಸಾಂಗ್ಲಿಯಾನ! ಬಿಜೆಪಿ ಸೇರುವಾಗ ಇದು ಗೊತ್ತಿರಲಿಲ್ಲವೇ? ಗುಜರಾತ್ ಹತ್ಯಾಕಾಂಡ, ಪಾದ್ರಿ ಗ್ರಹಾಂ ಸ್ಟೈನ್ ಮತ್ತು ಮಗುವನ್ನು ದಹಿಸಿದ್ದನ್ನು ಸಮರ್ಥಿಸಿದ್ದ ವಾಜಪೇಯಿ ನಾಯಕತ್ವದಲ್ಲಿ ನಿಷ್ಠೆ, ನಂಬುಗೆ ಇರಿಸಿದವರಾಗಿ ಲೋಕಕ್ಕೆ ಸಾರಿದ್ದರಲ್ಲ. ಈಗಿನದು ಜ್ಞಾನೋದಯವೋ, ಮುಂದಿನ ಚುನಾವಣೆ ತಯಾರಿಯೋ. ಅದೇನೇ ಇದ್ದರೂ ಧ್ವನಿ ಎತ್ತಿದ್ದಕ್ಕೆ, ಸತ್ಯ ಮಾತನಾಡಿದ್ದಕ್ಕೆ ಸ್ವಾಗತ. ಅಲ್ಲಿಂದ ಹೊರಬಂದರೆ ಸುಸ್ವಾಗತ!

★

'ಕೈ' ಮಹಾತ್ಮೆ

ನಟ ಸಂಜಯದತ್ ಜಾಮೀನಿನ ಮೇಲೆ ಹೊರಬರುವಾಗ ಸಿನಿಮಾ ನಟನನ್ನು ಹತ್ತಿರದಿಂದ ನೋಡಿ ಪುಳುಕಿತನಾಗಿ ಕೈಕುಲುಕಿದ ಪೇದೆಯನ್ನು ಸಸ್ಪೆಂಡ್ ಮಾಡಿ ಕಾನೂನು ರಕ್ಷಿಸಲಾಗಿದೆ.

ಅದೇ ರೀತಿ ಭೂಗತ ಜಗತ್ತಿನೊಂದಿಗೆ, ಜೈಲಿನಲ್ಲಿರಬೇಕಾದ ಅತಿ ಗಣ್ಯರೊಂದಿಗೆ ಕೈಕುಲುಕುತ್ತಿರುವವರಿಗೆ ಕ್ರಮ ಕೈಗೊಳ್ಳಬಹುದೇ?

ವಾಸ್ತವ ಅನುಭವ

"ಜಾತಿ ವಿನಾಶದ ಕಾಳಜಿ ಈಗ ಕಾಣುತ್ತಿಲ್ಲ. ಜಾತಿವಾದಿ ಕ್ರೌರ್ಯ ಎಲ್ಲಾ ಜಾತಿಗಳಲ್ಲಿ ಬೆಳೆಯುತ್ತಿರುವುದು ಬರುವ ಅಪಾಯದ ಸೂಚನೆ"


ಡಾ. ಸಿ.ಎಸ್.ದ್ವಾರಕನಾಥ್, ಅಧ್ಯಕ್ಷರು, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ

★

"ಬೆಂಗಳೂರಿನಲ್ಲಿ ಭೂ ಕಬಳಿಕೆಯ ಆಳ ನಿಲುಕಲಾರದಷ್ಟು. ಈಗ ಪತ್ತೆ ಹಚ್ಚಿರುವುದು ಕೇವಲ ಒಂದು ಅಡಿಯಷ್ಟೇ ಆಗಬಹುದು".

- ಶಾಸಕ ಎ.ಟಿ.ರಾಮಸ್ವಾಮಿ
ಭೂ ಕಬಳಿಕೆ ತನಿಖೆಯ ಶಾಸಕಾಂಗ ಸಮಿತಿ ಅಧ್ಯಕ್ಷರು

ಇಎಂಎಸ್ ಭವನ ನಿಧಿ



ಈಗಾಗಲೇ ತಿಳಿಸಿದಂತೆ, ಇ.ಎಂ.ಎಸ್. ಭವನದ ಕಟ್ಟಡ ಕೆಲಸ ತೀವ್ರಗತಿಯಲ್ಲಿ ಸಾಗುತ್ತಿದೆ. ಉತ್ತರ ದಿಕ್ಕಿನ ಕೆಳ ಭಾಗದ ರಸ್ತೆಗೆ ಮುಖ ಮಾಡಿರುವ ಕಟ್ಟಡದ ಕೆಳ ಅಂತಸ್ತಿನ ಕಂಬ, ಗೋಡೆಗಳು ಈಗಾಗಲೇ ಮೇಲೆದ್ದಿದ್ದು ಆರ್.ಸಿ.ಸಿ. ಛಾವಣಿಯನ್ನು ಹಾಕಲಾಗಿದೆ.

ಮೇಲ್ಭಾಗದ ರಸ್ತೆಯ ಕಡೆಯಿಂದ 'ಪಿಲ್ಲರ್' ಕೆಲಸ ಆರಂಭವಾಗಿದೆ. ಕಲ್ಲು ಬಂಡೆಗಳನ್ನು ಒಡೆದು ಸುಸಜ್ಜಿತವಾದ ಭವನ ಕಟ್ಟಲು ಅಡಿಪಾಯ ಹಾಕಲಾಗುತ್ತಿದೆ. ಅಂತೆಯೇ ಕಟ್ಟಡ ನಿಧಿಗೆ ನೀಡಿದ ಕರೆಯಂತೆ ಮೆಲ್ಲಮೆಲ್ಲನೆ ಹಣ ಸಂಗ್ರಹವಾಗುತ್ತಿದೆ. ಇನ್ನಷ್ಟು ತೀವ್ರಗೊಳ್ಳಬೇಕಿದೆ. ಎರಡನೇ ಹಂತದ ನಿಧಿ ಸಂಗ್ರಹ ಕರೆಗೆ ಈ ಕೆಳಗಿನವರು ಓಗೊಟ್ಟಿದ್ದಾರೆ.

ಎರಡನೇ ಹಂತದ ನಿಧಿ ಸಂಗ್ರಹ

1. **ಹರಿಹರ ಪಾಲಿಫೈಬರ್ಸ್ ಎಂಪ್ಲಾಯಿಸ್ ಯೂನಿಯನ್**, ಕುಮಾರ ಪಟ್ಟಣ, ಹರಿಹರ	ರೂ. 50,000
2. **ಜಿ. ಸಬಿತಾಶೆಟ್ಟಿ**, ಬೆಂಗಳೂರು	ರೂ. 1,000
3. **ಪಿ. ಕರಿಬಸಪ್ಪ** (ಸಿಪಿಐ(ಎಂ) ರಾಜ್ಯ ಸಮಿತಿ ಕಛೇರಿ) ಮತ್ತು **ರೇಖಾ**	ರೂ. 500
4. **ಜಯಕುಮಾರ್**, ಬೆಂಗಳೂರು	ರೂ. 1,000
5. **ಸುರೇಂದ್ರ**, ಬೆಂಗಳೂರು	ರೂ. 2,000
ಒಟ್ಟು	ರೂ.54,500

ಚುಚ್ಚುಮದ್ದು

"ಮುಖ್ಯಮಂತ್ರಿಯಾಗಿ ಜನರೊಂದಿಗೆ ಬೆರೆತು ಹೇಗೆ ಕೆಲಸ ಮಾಡಬೇಕೆಂಬುದನ್ನು ಇಡೀ ದೇಶಕ್ಕೆ ಮಾದರಿಯಾಗುವಂತೆ ತೋರಿಸಿಕೊಟ್ಟಿದ್ದೇನೆ"

- ಹೆಚ್.ಡಿ. ಕುಮಾರಸ್ವಾಮಿ

➤ ಹೌದು ಸ್ವಾಮಿ, ಕೋಮುವಾದಿಗಳೊಂದಿಗೆ ಬೆರೆತು, ಗಲಭೆಕೋರರ ಮೇಲಿನ ಮೊಕದ್ದಮೆಗಳನ್ನು ವಾಪಸ್ ತೆಗೆದದ್ದನ್ನು ಜನ ನೋಡಿದರಲ್ಲಾ!!

★

"ಉಪಮುಖ್ಯಮಂತ್ರಿ ಅಸಮರ್ಥರು ಎನ್ನುತ್ತಿರುವ ಸಚಿವ ಡಿ.ಟಿ. ಜಯಕುಮಾರ್ ಅವರನ್ನು ತಾವು ಲೆಕ್ಕಕ್ಕೆ ತೆಗೆದುಕೊಂಡಿಲ್ಲ"

- ಕೆ.ಎಸ್. ಈಶ್ವರಪ್ಪ
ಬಿಜೆಪಿ ನಾಯಕ

➤ ಕುರ್ಚಿ ಆಸೆ, ಮತ್ತಿನ್ನೇನು ತಾನೇ ಮಾಡ್ತೀರಿ ನೀವು

★

"ಕರ್ನಾಟಕ ಸರ್ಕಾರ ಇಲ್ಲಿಯ 434 ಗಿರಿಜನ ಕುಟುಂಬಗಳಿಗೆ ತಲಾ ಎರಡು ಹೆಕ್ಟೇರ್ ಜಮೀನು ಮಾತ್ರ ನೀಡಿದೆ"

ರಾಜ್ಯಸಭೆಯಲ್ಲಿ ಕೇಂದ್ರ ಗಿರಿಜನ ವ್ಯವಹಾರ ಸಚಿವ **ಪಿ.ಆರ್. ಕಿಂಡಿಯಾ** ನೀಡಿದ ಮಾಹಿತಿ.

➤ ಪ್ರತಿಯೊಬ್ಬ ಗಿರಿಜನರ ಮನೆಯಲ್ಲಿ ಉಂಡು, ವಾಸ್ತವ್ಯ ಮಾಡಿ ಅವರಿಗೆ ಭೂಮಿ ಇಲ್ಲ ಅಂತ ತಿಳ್ಕೊಂಡು... ಭೂಮಿ ಕೊಡೋ ವಿಷಯ ಯೋಚ್ನೇ ಮಾಡೋದಕ್ಕೆ ಇನ್ನು ಒಂದು ಹತ್ತು ವರ್ಷನಾದ್ರೂ ಸಮಯ ಬೇಡ್ವ ನಮ್ಮ ಮುಖ್ಯಮಂತ್ರಿಗಳಿಗೆ.

★

"ಖ್ಯಾತ ಸಾಮಾಜಿಕ ಚಿಂತಕ ಹೊ.ವೆ. ಶೇಷಾದ್ರಿ ಜೀವನದ ಎಲ್ಲಾ ಕ್ಷೇತ್ರಗಳಿಗೂ ಸಂಬಂಧಿಸಿದಂತೆ ಅಸಾಧಾರಣ ಜ್ಞಾನ ಸಂಪತ್ತು ಹೊಂದಿದ್ದರು. ಉತ್ತಮ ಚಿಂತನಾಶೀಲರು, ವಿದ್ವಾಂಸರೂ ಆಗಿದ್ದ ಶೇಷಾದ್ರಿ ತತ್ವ ಜ್ಞಾನದ ಕ್ರಿಯಾಶೀಲತೆಗೆ ಜೀವಂತ ಉದಾಹರಣೆ. ಇಡೀ ನಾಡಿಗೆ ಹಿಂದುತ್ವದ ಬಗ್ಗೆ ತಿಳಿ ಹೇಳಿದ ಅವರು ನಿಜವಾದ ಅರ್ಥದಲ್ಲಿ ನಾಡೋಜ ಎಂದರೆ ತಪ್ಪಲ್ಲ"

- ಎಲ್.ಎಸ್. ಶೇಷಗಿರಿರಾವ್
ನಿಯೋಜಿತ ಅಧ್ಯಕ್ಷರು, ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ

➤ ಅಂದರೆ ಉಡುಪಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಕೇಶವಕೃಪದಲ್ಲಿ ತಯಾರಾಗ್ತಾ ಇದೆ ಅನ್ನೋದು ಖಾತ್ರಿ ಆಯ್ತು ಬಿಡಿ.

★

"ಹೊ.ವೆ. ಶೇಷಾದ್ರಿ ಒಬ್ಬ ಶಿಸ್ತಿನ ಮನುಷ್ಯ ಹಾಗೂ ಮಹಾನ್ ಹಿಂದೂವಾದಿಯಾಗಿದ್ದರು. ಬಹಳ ಹಿಂದೆಯೇ ಶೇಷಾದ್ರಿ ಪಾಶ್ಚಾತ್ಯ ಶಿಕ್ಷಣ ವ್ಯವಸ್ಥೆಯ ಕೆಡುಕುಗಳ ಬಗ್ಗೆ ಆಲೋಚನೆ ಮಾಡಿದ್ದರು

- ಡಾ: ಚಂದ್ರ ಶೇಖರ ಕಂಬಾರ

➤ ಇದೇನು? ಮೆದುಳಿನ ಮೇಲೆ ಅಧಿಕಾರ ಹಸ್ತಾಂತರದ ನೆರಳೇ?

★

"ವಿಶ್ವಾಸವನ್ನು ಸಂಶೋಧನೆಯ ಅಥವಾ ಚರಿತ್ರೆಯ ಮೂಲಕ ಸಾಧಿಸಲಾಗದು. ನಂಬಿಕೆ, ವಿಶ್ವಾಸಕ್ಕೆ ಒಂದು ಸ್ಪಷ್ಟವಾದ ಆಧಾರ ಇರಲೇ ಬೇಕೆಂದರೆ ವಿಶ್ವದ ಸೃಷ್ಟಿಕರ್ತ ದೇವರನ್ನು ಕೈ ಬಿಡ ಬೇಕಾಗುತ್ತದೆ."

- ಡಾ: ಮಮ್ತಾಜ್ ಅಲಿಖಾನ್
ಸಂಘ ಪರಿವಾರದ 'ರಾಮ ಸೇತು ರಕ್ಷಿಸಿ' ಬೊಬ್ಬೆಯ ಪರ ಬರೆದ ಪತ್ರದಲ್ಲಿ

➤ ಈ ಸಂಘಪರಿವಾರದ ಜನ ಇದೇ 'ನಂಬಿಕೆ' ಅಂತಾ ಹೇಳಿಕೊಂಡು ಬಾಬರಿ ಮಸೀದಿ ಒಡೆದರು ಅನ್ನೋದು ನೆನಪಿದೆಯೇ ಖಾನ್ ಸಾಹೇಬರೇ?

ಇದ್ದದ್ದು ಇದ್ಹಾಂಗ

"ಪರಮಾಣು ಒಪ್ಪಂದದಿಂದ ಅಮೇರಿಕಾದ ಯುದ್ಧ ತಂತ್ರ ನೀತಿಯಲ್ಲಿ ಭಾಗವಹಿಸಿದಂತಾಗಿದೆ. ಇದರಿಂದ ನಮ್ಮ ವಿದೇಶಾಂಗ ನೀತಿ ಮೇಲೆ ದುಷ್ಪರಿಣಾಮವಾಗಲಿದೆ..... ಪರಮಾಣು ಒಪ್ಪಂದದ ಬಗೆಗಿನ ಎಡಪಕ್ಷಗಳ ಒತ್ತಡ ತಂತ್ರ ಸಮರ್ಥನೀಯ"

- ಮೋಹನ ರು.ಹಣಗಿ, ಇಲಕಲ್ಲ
'ಪ್ರಜಾವಾಣಿ'ಯ ವಾಚಕರವಾಣಿ ಪತ್ರದಲ್ಲಿ

★

"ಕೇಂದ್ರ ಸರ್ಕಾರ ಅಣು ಒಪ್ಪಂದ ಮಾಡಿಕೊಂಡು ಶಕ್ತಿ ರಾಷ್ಟ್ರಕ್ಕೆ ಒತ್ತೆ ಇಡುವ ಹುನ್ನಾರ ಅಪಾಯಕಾರಿ. ದೊಡ್ಡಣ್ಣನಂತೆ ವರ್ತಿಸುವ ಅಮೇರಿಕಾ ಸ್ವಾರ್ಥಕ್ಕೆ ಬೇರೆ ರಾಷ್ಟ್ರಗಳ ಸಂಗ ಬಯಸಿ ಲಾಭ ಪಡೆಯುವ ತಂತ್ರಗಾರಿಕೆ ಎಲ್ಲರಿಗೂ ಅರ್ಥವಾಗುವಂತದ್ದು ಅಣು ಒಪ್ಪಂದದಲ್ಲಿ ಎಡಪಕ್ಷಗಳ ಒತ್ತಡ ಕ್ರಮ ಒಂದು ಪಾಠ ಕಲಿಸುವಂತಹದ್ದು'

- ಕೋ.ರಾಮ
'ಪ್ರಜಾವಾಣಿ'ಯ ವಾಚಕರವಾಣಿ ಪತ್ರದಲ್ಲಿ

ಅರೆ ! ಹೀಗೂ ಉಂಟೇ

'ಶಾಸಕರು ಕೂಡ ಜನರು ಪ್ರತಿನಿಧಿಗಳು. ನಿಮ್ಮ ಕೆಲಸವನ್ನು ಮಾಡುವಂತೆ ಅವರಿಗೆ ಒತ್ತಡ ಹೇರಿ. ಇಲ್ಲವೇ ಅವರು ಬರುವ ವಾಹನದ ಕೆಳಗೆ ಮಲಗುತ್ತೇವೆ ಎಂದು ಬೆದರಿಕೆ ಹಾಕಿ. ಹೈಕೋರ್ಟ್ ಎದುರು ಇರುವ ಕಟ್ಟಡ (ವಿಧಾನಸೌಧ) ನಿಮ್ಮ ಬೇಡಿಕೆ ಈಡೇರಿಕೆ ಸಲುವಾಗಿಯೇ ಇರುವುದು. ಅತ್ತ ನಿಮ್ಮಗಮನ ಇರಲಿ'

ಮುಖ್ಯ ನ್ಯಾಯಮೂರ್ತಿ ಸಿರಿಯಾಕ್ ಜೋಸೆಫ್ ನೇತೃತ್ವದ ವಿಭಾಗೀಯ ಪೀಠ.

- ರಾಜ್ಯದ ಜನತೆಗೆ ಹೈಕೋರ್ಟು ಸಲಹೆ (ಕೆಲಸ ಮಾಡಿಕೊಡಲು ಶಾಸಕರಿಗೆ ಒತ್ತಡ ಹೇರಿ ಎಂದು ಹೇಳುತ್ತಾ)

ಸಂಪಾದಕೀಯ

ಪ್ರಧಾನಿಗಳ ಪ್ರಮಾದ

ಅಮೇರಿಕಾ ಮತ್ತು ಭಾರತ ದೇಶಗಳ ನಡುವೆ ಅಣು ಸಹಕಾರಕ್ಕೆ ಸಂಬಂಧಿಸಿದ 123 ಒಪ್ಪಂದಗಳನ್ನು ಜಾರಿಗೊಳಿಸುವ ಮೊದಲು ಎಡಪಕ್ಷಗಳು ಎತ್ತಿರುವ ಅತ್ಯಂತ ಗಂಭೀರ ಆಕ್ಷೇಪಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಲು ಸಮಿತಿಯೊಂದನ್ನು ರಚಿಸುವ ಕೇಂದ್ರದ ನಿರ್ಧಾರ ಸ್ವಾಗತಾರ್ಹವಾದುದು. ಅಲ್ಲಿಯವರೆಗೂ ಒಪ್ಪಂದ ಸಂಬಂಧ ಮುನ್ನೆಜ್ಜೆ ಇಡದಿರಲು ಸಹಮತಕ್ಕೆ ಬಂದಿರುವುದು ಒಪ್ಪಂದದ ಅಂಶಗಳಿಂದ ಗೊತ್ತಾಗುತ್ತದೆ. ಮುಖ್ಯವಾಗಿ ಎಡಪಕ್ಷಗಳ ಹಾಗೂ ದೇಶದ ಬಹಳಷ್ಟು ವಿಜ್ಞಾನಿಗಳು, ತಜ್ಞರ ಆಗ್ರಹಗಳನ್ನು ಧಿಕ್ಕರಿಸುವ ಧಾಟಿಯಲ್ಲೇ ಕಾಂಗ್ರೆಸ್ ಪ್ರತಿಕ್ರಯಿಸುತ್ತಾ ಬಂದಿತ್ತು. ಯುಪಿಎ ಸರ್ಕಾರ ಕೊನೆಗೂ ಒಂದು ಹಂತದಲ್ಲಿ ಎಡಪಕ್ಷಗಳ ಆಗ್ರಹಗಳನ್ನು ಕೇಳಲೇಬೇಕಾಗಿ ಬಂದಿದೆ. ಇನ್ನು ಯುಪಿಎ ಮತ್ತು ಎಡಪಕ್ಷಗಳ ನಡುವಿನ ಈ ಒಪ್ಪಂದ ಜಾರಿಯಾಗಬೇಕಿದೆ.

ಆದರೆ ಇದೇ ಶುಕ್ರವಾರದಂದು ಪ್ರಧಾನಿ ಮನಮೋಹನ ಸಿಂಗ್‌ರವರು ಮುಂಬೈನ ತಾರಾಪುರದಲ್ಲಿ ಎರಡು ಪರಮಾಣು ರಿಯಾಕ್ಟರ್‌ಗಳನ್ನು ದೇಶಕ್ಕೆ ಸಮರ್ಪಿಸಿ ಮಾತನಾಡುತ್ತಾ, 'ನಾಗರೀಕ ಪರಮಾಣು ಒಪ್ಪಂದವು ಭಾರತದ ಹಿತಾಸಕ್ತಿಯನ್ನು ಒಳಗೊಂಡಿದ್ದು ರಾಷ್ಟ್ರವು ಪರಮಾಣು ಕ್ರಾಂತಿಯಿಂದ ತಪ್ಪಿಸಿಕೊಳ್ಳಬಾರದು' ಎಂದು ಹೇಳಿದ್ದಾರಲ್ಲದೇ 'ಈ ವಿಷಯದಲ್ಲಿ ಸರ್ಕಾರ ಯಾವ ಕಾರಣಕ್ಕೂ ಹಿಂದೇಟು ಹಾಕುವುದಿಲ್ಲ' ಎಂದು ಒತ್ತಿ ಹೇಳಿರುವುದು ಆಶ್ಚರ್ಯಕರವಾಗಿದೆ. ಒಂದು ಕಡೆಯಲ್ಲಿ ಆಕ್ಷೇಪ ಮತ್ತು ಆತಂಕಗಳನ್ನು ವಿವರವಾಗಿ ಪರಿಶೀಲಿಸಿ ಕ್ರಮವಹಿಸಲು ನಿರ್ಧರಿಸಿರುವಾಗಲೇ ಪ್ರಧಾನಿಯವರು ಇಂತಹ ಹೇಳಿಕೆ ನೀಡಿದ್ದಾರೆ. ಇದಲ್ಲದೇ ಯುಪಿಎ ಸರ್ಕಾರದ ವಾರ್ತಾ ಸಚಿವ ಪ್ರಿಯರಂಜನ್ ದಾಸ್ ಮುನ್ಷಿ ಸಹ 'ಎಡಪಕ್ಷಗಳೊಂದಿಗಿನ ಒಪ್ಪಂದದಲ್ಲಿ ಜಾರಿಯ ಮುಂದಿನ ಪ್ರಕ್ರಿಯೆಗಳನ್ನು ತಡೆ ಹಿಡಿಯಬೇಕೆಂದು ನಿರ್ಧಾರವಾಗಿಲ್ಲ' ಎಂದೂ ಹೇಳಿರುವುದು ಗಂಭೀರವಾದ ವಿಷಯವಾಗಿದೆ. ದೇಶ ಅಮೇರಿಕಾ ಸಾಮ್ರಾಜ್ಯಶಾಹಿಯ ಅಧಿಪತ್ಯಕ್ಕೆ ಒಳಗಾಗುವುದನ್ನು ತಪ್ಪಿಸುವ, ಸ್ವಾವಲಂಬನೆ, ಸಾರ್ವಭೌಮತ್ವ ಕಾಯಬೇಕೆಂಬ ದಿಕ್ಕಿನಲ್ಲಿ ಎಡಪಕ್ಷಗಳು ಎತ್ತಿರುವ ಪ್ರಶ್ನೆಗಳು ಹಾಗೂ ಒಂದು ಪರಿಹಾರ ರೂಪಿಸುವ ಪ್ರಯತ್ನಗಳಿಗಿರುವಾಗ ಜವಾಬ್ದಾರಿಯಿರುವ ಪ್ರಧಾನಿ ಹೇಳಿಕೆ ಪ್ರಮಾದಕರ. ಪ್ರಧಾನಿ, ಸರ್ಕಾರ ಅಥವಾ ಅಮೇರಿಕಾದ ಮನಸ್ಸಿನಲ್ಲಿ ಏನೇ ಇರಲಿ ಮಾರಕವಾದ ಈ ಒಪ್ಪಂದಗಳನ್ನು ಒಪ್ಪಲಾಗದು, ಒಪ್ಪಬಾರದು.

ಪ್ರಧಾನಿಯವರ ಹೇಳಿಕೆಗಳಿಗೆ ಸಿಪಿಐ(ಎಂ) ಪ್ರಧಾನಕಾರ್ಯದರ್ಶಿ ಪ್ರಕಾಶ್ ಕಾರಟ್‌ರವರು 'ರಚಿಸಲಾದ ಸಮಿತಿಯು ಏನು ಮಾಡಲಿದೆ ಹಾಗೂ ಅದರಿಂದ ಈ ಸರ್ಕಾರ ಪ್ರಕಟಿಸಿದ್ದ ಯೋಜನೆಗಳಲ್ಲಿ ಏನು ಹೊರ ಬರಲಿದೆ ಎಂಬುದನ್ನು ಕಾಯ್ದು ನೋಡುವುದಾಗಿ ಪ್ರತಿಕ್ರಿಯಿಸಿರುವುದು ಈಗ ಉದ್ಭವವಾಗಿರುವ ಪ್ರಶ್ನೆಗೆ ಪ್ರಾಮಾಣಿಕ ಪರಿಹಾರ ಸಿಗಬೇಕು ಎಂಬ ಕಳಕಳಿ, ಹೊಣೆಗಾರಿಕೆಯನ್ನೇ ಧ್ವನಿಸುತ್ತದೆ.


ಈ ಪರಮಾಣು ಒಪ್ಪಂದದ ಅಂಶಗಳನ್ನು ಏಕಮುಖವಾಗಿ ಮಾತ್ರ ನೋಡಲಾಗದು. ಅದನ್ನು ಜಾಗತಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಬಹುಮುಖ್ಯವಾಗಿ ಅಮೇರಿಕಾದ ಜಾಗತಿಕ ತಂತ್ರ ಏನು ಎಂಬುದರ ಹಿನ್ನೆಲೆಯಲ್ಲಿಯೂ ನೋಡಬೇಕು. ಹೈಡ್ ಆಕ್ಟ್‌ನ ಹಿನ್ನೆಲೆಯಲ್ಲಿ ಸಂಬಂಧಿತ ಸತ್ಯಗಳನ್ನು ಪರಿಶೀಲಿಸಬೇಕು. ಜಗತ್ತಿನ ಮೇಲೆ ಅಧಿಪತ್ಯ ಸ್ಥಾಪಿಸಲು ಅಮೇರಿಕಾ ಅಪಾಯಕಾರಿ ಬಲೆಯನ್ನು ಹೆಣೆದಿದೆ. ಅಣು ಒಪ್ಪಂದ ಕೇವಲ ವಿದ್ಯುಚ್ಛಕ್ತಿ ಉತ್ಪಾದನೆಯ ಇಂಧನಕ್ಕೆ ಮಾತ್ರ ಸೀಮಿತವಾಗದೇ ಇಡೀ ನಮ್ಮ ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯನ್ನೇ ನಿರ್ಬಂಧಿಸುತ್ತದೆ. ಸ್ವಾವಲಂಬನೆ ನಾಶವಾಗುತ್ತದೆ. ಅಮೇರಿಕಾದ ಮಿಲಿಟರಿ ಆಕ್ರಮಣ ಮತ್ತು ಅದು ಸಾರುವ ಯುದ್ಧಗಳಿಗೆ ಹಾಗೂ ಪಾತಕಗಳಿಗೆ ಹೆಗಲು ಕೊಟ್ಟು ಭಾಗಿಧಾರನಾಗಬೇಕಾಗುತ್ತದೆ. ನಮ್ಮ ರಕ್ಷಣಾ ವ್ಯವಸ್ಥೆ ಅಮೇರಿಕಾದ ಮುಷ್ಟಿಗೆ ಸಿಕ್ಕುತ್ತದೆ. ಸಾಮ್ರಾಜ್ಯಶಾಹಿ ಬಣಕ್ಕೆ ಸೇರಲು ನಿರಾಕರಿಸಿರುವ ಅಲಿಪ್ತ ವಿದೇಶಾಂಗ ನೀತಿಯೇ ಹಾನಿಗೀಡಾಗಿ ಅಮೇರಿಕಾದ ಬಾಲಂಗೋಚಿಯಾಗ ಬೇಕಾಗುತ್ತದೆ. ಒಟ್ಟಾರೆ ನಮ್ಮ ಕೃಷಿ, ಶಿಕ್ಷಣ, ಕೈಗಾರಿಕೆ, ಆರ್ಥಿಕತೆ ಮತ್ತು ರಾಜಕೀಯವೇ ತೀವ್ರ ಹಾನಿಗೀಡಲಾಗಲಿದೆ. ಇಂತಹ ಭಾರೀ ಅಪಾಯಗಳನ್ನು ತರುವ ಈ ಒಪ್ಪಂದದ ಅಗತ್ಯವೇನಿದೆ?

ಆದ್ದರಿಂದಲೇ ನಮ್ಮ ಆರ್ಥಿಕತೆ, ಸ್ವಾವಲಂಬನೆ, ಸಾರ್ವಭೌಮತ್ವ, ಸ್ವತಂತ್ರ ಅಲಿಪ್ತ ವಿದೇಶಾಂಗ ನೀತಿಯನ್ನು, ನಮ್ಮ ರಾಜಕೀಯ ಆಯ್ಕೆಗಳನ್ನು ಕಾಪಾಡಿಕೊಳ್ಳಲು, ನಮ್ಮ ಇಂಧನದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಾಗರೀಕ ಪರಮಾಣು ಸಹಕಾರವನ್ನು ಒಳಗೊಂಡು ನಮ್ಮ ಹಿತಕ್ಕೆ ಸಹಕಾರಿಯಾಗುವ ಸಹಕಾರ ಸಂಬಂಧಗಳನ್ನು ಇತರೆ ದೇಶಗಳಿಂದ ಪಡೆಯುವ ಪರ್ಯಾಯ ಹುಡುಕಾಟ ಅಗತ್ಯವಿದೆ. ಅದರ ಸಾಧ್ಯತೆಗಳೂ ಇವೆ.

ಇಂದು ಕೇಂದ್ರದಲ್ಲಿರುವ ಸರ್ಕಾರದಲ್ಲಿ ಕಾಂಗ್ರೆಸ್‌ಗೆ ಬಹುಮತವಿಲ್ಲ, ಕಾಂಗ್ರೆಸ್ಸೇತರ ಹಲವು ಪಕ್ಷಗಳು ಬೆಂಬಲಿಸಿ ಸರ್ಕಾರದಲ್ಲಿ ಸೇರಿವೆ ಮತ್ತು ಕೋಮುವಾದಿ, ಬಲಪ್ರತಿಗಾಮಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕೆಂಬ ಜನಾದೇಶದಂತೆ ಎಡಪಕ್ಷಗಳು ಹೊರಗಿನಿಂದ ಬೆಂಬಲಿಸಿವೆ ಎಂಬ ವಾಸ್ತವವನ್ನು ಸರ್ಕಾರದ ಚುಕ್ಕಾಣಿ ಹಿಡಿದವರು ಗಮನಿಸಬೇಕು.

ಈಗ ಉದ್ಭವವಾಗಿರುವ ಸಂಘರ್ಷವು ಆಳುವವರ್ಗ ಮತ್ತು ಭಾರತದ ಜನತೆಯ ನಡುವಿನ ಹೋರಾಟವಾಗಿದೆ. ಮತ್ತು ಭವಿಷ್ಯತ್ತಿನ ಭಾರತಕ್ಕೆ ನಿರ್ಣಾಯಕವಾಗಿದೆ. ದೇಶದ ಹಿತಾಸಕ್ತಿಗಳನ್ನು ಸಮರ್ಥಿಸಲು. ದೇಶದ ದೇಶಪ್ರೇಮಿ ಜನಸಮುದಾಯ ತಮ್ಮನ್ನು ಈ ಸಂಗ್ರಾಮದಲ್ಲಿ ತೊಡಗಿಸಬೇಕಿದೆ.

ಸೇತುಸಮುದ್ರಂ : ಜನರನ್ನು ಎತ್ತಿಕಟ್ಟುವ ಯತ್ನ



ಆರ್‌ಎಸ್‌ಎಸ್ ಕೇಸರಿ ಪಡೆ ಕೊಳ್ಳಿ ಹಿಡಿದು ಬೀದಿಗೆ ಇಳಿಯಲಾರಂಭಿಸಿದೆ. ಸ್ವತಃ ಶ್ರೀರಾಮಚಂದ್ರನೇ ನಿರ್ಮಿಸಿದ್ದಾನೆಂದು ಹೇಳುವ ಭಾರತ - ಶ್ರೀಲಂಕಾ ದ ನಡುವಿನ ರಾಮಸೇತು ಅಥವಾ ಸೇತುಸಮುದ್ರಂ ರಕ್ಷಣೆಗೆ ಚಳುವಳಿ! ಅದು 'ಸೇತುವೆ ಉಳಿಸಿರಿ' ಎಂದು ಈ ವಾರ ಕೇಸರಿ ಪಡೆ ದೇಶಾದ್ಯಂತ ಚಳುವಳಿಯನ್ನು ನಡೆಸಿತು.

ಹಿಂದೆ ಅಯೋಧ್ಯೆ - ಬಾಬ್ರಿ ಮಸೀದಿ, ರಾಮಜನ್ಮಭೂಮಿ ಪ್ರಶ್ನೆಯಾಯಿತು. ರಕ್ತ ಸಿಕ್ತ ರಾಜಕೀಯದಿಂದ ಕೇಂದ್ರದ ಗದ್ದುಗೆ ಹತ್ತಿದ್ದಾಯಿತು. ಇದಾದ ಬಳಿಕ ಜನತೆ ಕೋಮುವಾದಿಗಳನ್ನು ತಿರಸ್ಕರಿಸುತ್ತಾ ಬಂದರು. ಹಿಂದೆ ಅಯೋಧ್ಯಾ ರಾಮ ಈಗ ರಾಮನ ಸೇತುವೆ. ಹಿಂದೆ ಅಯೋಧ್ಯಾ ವಿಷಯದಲ್ಲಿ ಹೀಗೆಯೇ ಎಲ್ಲಾ ಕಡೆ ಸಣ್ಣಪುಟ್ಟ ಸಭೆ - ಧರಣಿ ಸತ್ಯಾಗ್ರಹ ಆರಂಭಿಸಿದ್ದ ಸಂಘ ಪರಿವಾರ, ಮುಂದೆ ದೇಶಕ್ಕೆ ಕೊಳ್ಳಿಇಟ್ಟು ಮಾರಣಹೋಮ ನಡೆಸಿತು. ರಕ್ತ ಕಾಲುವೆ ಹರಿಯಿತು. ಫ್ಯಾಸಿಸ್ಟ್ ಶಕ್ತಿಗಳು ಅಟ್ಟಹಾಸದಿಂದ ಪ್ರಜಾಪ್ರಭುತ್ವ, ಜಾತ್ಯಾತೀತೆಯನ್ನು ಧ್ವಂಸಿಸಲು ಮುಂದಾದರು. ಇವರು ಇನ್ನೂ ಸದ್ಯ ಆ ಭಾಷೆಯನ್ನಾಡುವುದನ್ನು ಆರಂಭಿಸಿಲ್ಲವಾದರೂ. ಈಗಲೂ ರಾಮಸೇತುವೆ ಯಿಂದ ನಿರೀಕ್ಷಿಸುತ್ತಿರುವ ಫಲಿತಾಂಶವೂ ಅದೇ, ದೇಶದ ಜನರ ವಿಭಜನೆ - ಅದಕ್ಕಾಗಿ ವಿದ್ವೇಷದ ಸಿಡಿಮದ್ದು - ಗುಂಡು, ದೇಶದ ಸಮಗ್ರತೆ, ಐಕ್ಯತೆ, ಕೋಮುಸೌಹಾರ್ದತೆ ಸ್ಫೋಟಿಸಲು ಯೋಜಿತ ಕಾರ್ಯಾಚರಣೆ!



ಅದಕ್ಕಾಗಿ ಹಾದಿ ತಪ್ಪಿಸುವ ವಾದಗಳು, ವೈಚಾರಿಕತೆ ಬೇಡ, ನಂಬಿಕೆಯೇ ಸಾಕು ಎಂಬ ಹಳಸಲು ಮಂತ್ರದ ಪುನುರಚ್ಚಾರ! ಈ ಹಿಂದೆ ಅಮೆರಿಕಾದ 'ನಾಸಾ' ಸಂಸ್ಥೆಯೇ ಈ ಸೇತುವೆ ನಿರ್ಮಾಣಗೊಂಡಿರುವುದನ್ನು ಖಾತ್ರಿ ಪಡಿಸಿದೆ ಎಂದು ಈ ಗೋಬೆಲ್ಸ್ ಸಂತತಿ ಪ್ರಚಾರಿಸಿತ್ತು. ಆದರೆ ಅದೇ 'ನಾಸಾ' ಇದು ಮಾನವ ನಿರ್ಮಿತ ಅಲ್ಲ, ಪ್ರಕೃತಿ ಸಹಜ ಸೃಷ್ಟಿ ಎಂದು ಸ್ಪಷ್ಟೀಕರಣ ನೀಡಿತು. ಆದರೆ ಕೇಳಬೇಕಲ್ಲ, ಈ ವಾನರ ಪಡೆ! ರಾಮಾಯಣ, ಮಹಾಭಾರತದ ಕಥೆಗಳನ್ನು ಹೇಳಿ ಭಾವೋದ್ರೇಕ ಬಡಿದೆಬ್ಬಿಸಿ ವಿಚಾರಹೀನರನ್ನಾಗಿಸುವ ಧಾಳಿ ತೀವ್ರಗೊಳಿಸಲಾಗಿದೆ. ಅಖಿಲ ಭಾರತ ಮಟ್ಟದಲ್ಲಿ ಜನರನ್ನು ಮತ್ತೆ ಕೋಮುಗ್ರಸ್ತಗೊಳಿಸುವ ಯೋಜನೆ ಇರುವಾಗಲೇ ದಕ್ಷಿಣ ಭಾರತದಲ್ಲಿ ಈ ಪ್ರಶ್ನೆಯಲ್ಲಿ ಜನರನ್ನು ಪ್ರಭಾವಿಸಲು ಗಮನ ಕೇಂದ್ರೀಕರಿಸಿದೆ. ನಮ್ಮ ಜನ ಹಿಂದಿನ ಅನುಭವಗಳಿಂದ ಎಚ್ಚರಗೊಳ್ಳಬೇಕು. ಒಂದೆಡೆ ಶ್ರೀರಾಮನ್ನು ಪುನಃ ರಂಗಕ್ಕೆ ಎಳೆದು ತಂದು ದುರ್ಬಳಕೆ ಮಾಡುವುದನ್ನು ವಿರೋಧಿಸಬೇಕು. ವಿಷ ಊದುವ ಶಂಖಕ್ಕೆ ಸೌಹಾರ್ದತೆಯ ಎದುರೇಟಿನ ಉತ್ತರ ಹೇಳಬೇಕು.

ಹೀಗೆಲ್ಲಾ ನಡೆದಿರುವಾಗಲೇ ಸುಪ್ರೀಂಕೋರ್ಟ್ ಸಾಗರದಲ್ಲಿ ನೈಸರ್ಗಿಕ ನಿರ್ಮಿತ ಸೇತುವೆ ಒಡೆಯಬಾರದು ಎಂದು ತಾತ್ಕಾಲಿಕ ತಡೆಯಾಜ್ಞೆ ನೀಡಿರುವುದನ್ನೇ ಸಂಘ ಪರಿವಾರ ಜನರನ್ನು ದಿಕ್ಕು ತಪ್ಪಿಸಲು ಬಳಸುತ್ತಿದೆ. ದಿಕ್ಕೇಡಿಯಾಗಿರುವ ಬಿಜೆಪಿ ಇದನ್ನೇ ತನ್ನ ರಾಜಕೀಯ ಅಜೆಂಡಾ ಮಾಡಿಕೊಳ್ಳುತ್ತಿದೆ. ಈ ಯೋಜನೆ ಅಂಗೀಕರಿಸಿದ್ದೇ ವಾಜಪೇಯಿ ಸರ್ಕಾರ ಎಂಬುದನ್ನು ಮರೆಸುತ್ತಿದೆ. ಇನ್ನು ಮಾಧ್ಯಮಗಳು ಇದಕ್ಕೆಲ್ಲಾ ತಿದಿಯೂದುತ್ತಿವೆ. ಹಲವಾರು ಚಿತ್ರ-ವಿಚಿತ್ರ ವಾದಗಲನ್ನು ಹೂಡಿ ಜನರನ್ನು ಗೊಂದಲದಲ್ಲಿರಿಸುತ್ತಿವೆ. ಇಷ್ಟೆಲ್ಲಾ ನಡೆಯುತ್ತಿರುವಾಗ ಯೋಜನೆ ಅನುಷ್ಠಾನಕ್ಕೆ ಇಳಿದಿರುವ ಕೇಂದ್ರ ಸರ್ಕಾರ ಅವುಗಳಿಗೆ ತಕ್ಕ ಉತ್ತರ ನೀಡಬೇಕು. ಹಾಗೆ ಮಾಡುತ್ತಿಲ್ಲ. ಪರಿಸ್ಥಿತಿ ಇನ್ನೂ ಹದಗೆಡಲಿ ಎಂದು ಕಾಯುತ್ತಿದೆಯೇ? ಜನರ ಗಮನ ಹುಸಿ ಪ್ರಶ್ನೆಗಳಲ್ಲಿ ಹುದುಗಿಹೋಗಲಿ ಎಂಬ ಇಂಗಿತವೇ?

ಹೆಚ್‌ಡಿಕೆ ಮತ್ತು ಡಿಕೆಯವರ ದೊಂಬರಾಟ

ಇದನ್ನು ಬೀದಿ ಬದಿಯ ದೊಂಬರಾಟ ಎನ್ನದೇ ಬೇರೇನು ಅನ್ನಬೇಕು? ಒಬ್ಬರು ರಾಜ್ಯದ ಮುಖ್ಯಮಂತ್ರಿ, ಇನ್ನೊಬ್ಬ ಮಾಜಿ ಮಂತ್ರಿ, ಹಾಲಿ ಶಾಸಕ ಸಾತನೂರು ಕ್ಷೇತ್ರದಲ್ಲಿ ಇಬ್ಬರೂ ತಮ್ಮ ತಮ್ಮ ಬೆಂಬಲಿಗರನ್ನು ಮೈದಾನದಲ್ಲಿ ಸೇರಿಸುತ್ತಾರೆ. ಮೈಕ್ ಕಟ್ಟಿಸುತ್ತಾರೆ, ವೇದಿಕೆ ಏರುತ್ತಾರೆ. ಪೌರಾಣಿಕ ನಾಟಕದ ಪಾತ್ರಧಾರಿಗಳಂತೆ ತಮ್ಮ ಬಗೆಗೆ ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಪ್ರಶ್ನೆ ಉತ್ತರಗಳು ನಡೆಯುತ್ತವೆ, ವಾದ ವಿವಾದಗಳು, ಪ್ರತಿಕಾರದ ಮಾತುಗಳು ತಾರಕಕ್ಕೇರಿ ಪರಸ್ಪರ ಬೈದಾಡಿಕೊಳ್ಳುತ್ತಾರೆ. ಇದರ ನಡುವೆ 'ತಾಯಿ'ಗೆ ಬೆಲೆ ಕೊಡುವ ಮಾತೃ ಮಮಕಾರದ 'ಡೈಲಾಗ್'ಗಳು! ಜನರ ಕ್ಷೇತ್ರದ ಅಭಿವೃದ್ಧಿಗಾಗಿ ರಾತ್ರಿ ಹಗಲೆನ್ನದೇ ದುಡಿದು ದುಡಿದೂ ಹಣ್ಣಾದವರಂತೆ, ಇಬ್ಬರೂ ಆಡುತ್ತಾರೆ. ಇವರನ್ನು ಆರಿಸಿದ ಜನರಿಗೆ ವಿವಿಧ ರೀತಿಯ ಪಂಗನಾಮಗಳನ್ನಿಟ್ಟು, ತಮ್ಮದೇ ಸ್ವಾರ್ಥ ಸಾಧಿಸಿದ್ದು, ರಾಜ್ಯದ ಸಂಪನ್ಮೂಲ ಉಡಾಯಿಸಿದ್ದು, ತೆರೆಯ ಮೇಲೆ ಬರುವುದಿಲ್ಲ, ಅವುಗಳು ಈ ಯಕ್ಷಗಾನದಲ್ಲಿ ತೆರೆಯ ಹಿಂದೆ ಮರೆಯಾಗಿ ಬಿಟ್ಟಿರುತ್ತವೆ. ಇಲ್ಲಿ ನೀತಿಯಿಲ್ಲ, ಜನ ಪ್ರೀತಿಯಿಲ್ಲ. ತಮ್ಮ ಈ ದೊಂಬರಾಟ ಮೆಚ್ಚಿ ಜನ ಚಪ್ಪಾಳೆ ತಟ್ಟಬೇಕೆಂಬ ದುರಾಸೆ ಇದೆ. ಪ್ರಶ್ನೆಗಳಿದ್ದರೆ ವಿಧಾನಸಭೆಯಲ್ಲಿ ಮಾತನಾಡಿಕೊಳ್ಳಬಹುದಿತ್ತಲ್ಲ, ಈ ಸಾರ್ವಜನಿಕ ಕೆಸರಾಟ ಯಾಕೆ?

ಮೊನ್ನೆ ಕುಮಾರಸ್ವಾಮಿ, ಡಿ.ಕೆ.ಶಿವಕುಮಾರ್‌ರವರು ಸಾತನೂರು ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಾಗಿ ಚಾಲನೆ ನೀಡುವ ಸಮಾರಂಭದಲ್ಲಿ ಇಂತಹದ್ದೊಂದು ದೃಶ್ಯ ಅಸಹ್ಯ ಹುಟ್ಟಿಸುವಂತಿತ್ತು. ಮೇಲುಗೈ ಸಾಧಿಸುವ ಜಿದ್ದಾಜಿದ್ದಿನ ವ್ಯಕ್ತಿಗತ ರಾಜಕಾರಣ ಇಂತಹ ಮಟ್ಟಕ್ಕೆ ತಲುಪಬಹುದೇ ಎಂದು ತೋರಿಸಿಬಿಟ್ಟಿತು. ಈ ಘನಶೂರರು ಇಂತಹದ್ದರಿಂದ ಜನರಿಗೇನು ಪ್ರಯೋಜನ ಎಂದು ಯೋಚಿಸಲಿಲ್ಲ.

ಇನ್ನೇನು ಮುಖ್ಯಮಂತ್ರಿ ಪಟ್ಟ ಒಂದು ತಿಂಗಳಲ್ಲಿ ಕಳೆದುಕೊಳ್ಳಬೇಕಿದೆ ಎಂಬ ಚಿಂತೆಯಲ್ಲೇ ಇಡೀ ರಾಜ್ಯದಲ್ಲಿ ಅಭಿವೃದ್ಧಿ ಕಾಮಗಾರಿಗಳ, ಭರವಸೆಗಳ ಭರಪೂರ ನಡೆದಿವೆ. ರಾಜ್ಯಾದ್ಯಂತ ಅದಕ್ಕೆ ಅಡಿಗಲ್ಲು! ಇಂತಹ ಅಡಿಗಲ್ಲುಗಳು ರಾಜ್ಯದಲ್ಲಿ ಎಷ್ಟಿಲ್ಲ! ಅವು ಇದ್ದ ಕಡೆಯಿಂದ ಸ್ಥಳಾಂತರಗೊಂಡು ಸ್ಮಾರಕಗಳಾಗಿ ಅಣಕಿಸುತ್ತಾ ನಿಂತಿವೆ. ಅದಕ್ಕೆ ಇವು ಇನ್ನೊಂದಿಷ್ಟು!

ಬಿಸಿಲು ಕುದುರೆ ಯೋಜನೆಗಳು

ಬೃಹತ್ ಕೈಗಾರಿಕಾ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು 63 ಸಾವಿರ ಕೋಟಿ ರೂಪಾಯಿಗಳ ಬಂಡವಾಳ ಹೂಡುವ, 9 ಲಕ್ಷ ಉದ್ಯೋಗ ಒದಗಿಸುವ 59 ವಿವಿಧ ಯೋಜನೆಗಳನ್ನು ಪ್ರಕಟಿಸಿದರು. 'ಅಭಿವೃದ್ಧಿ' ಯನ್ನೇ (ಯಾರ) 'ಮೂಲಮಂತ್ರ' (ತಂತ್ರ)ವಾಗಿಸಿರುವ ಈ ಸರ್ಕಾರದಲ್ಲಿ ಎಲ್ಲರ ಬಾಯಲ್ಲೂ ಕೋಟಿಗಳದ್ದೇ ಮಾತು! ಕಟ್ಟಾರವರು ಇದರಿಂದ ಯಾಕೆ ಹೊರತು!

ಇವು ಯೋಜನೆಗಳು, ಕಾರ್ಯಾರಂಭಿಸಲು ಇನ್ನೆಷ್ಟು ವರ್ಷಗಳು ಕಾಯಬೇಕೋ! ಅದು ಸಚಿವರಿಗೂ ಅಂದಾಜಿಲ್ಲ. ಅಂದ ಹಾಗೆ ಇಂತಹ ಯೋಜನೆ 'ಪ್ರಕಟಿಸುವುದು' ಹೊಸದೇನಲ್ಲ. ಹಲವಾರು ಯೋಜನೆಗಳ ಫೈಲು ಕೇಳುವವರೇ ಇಲ್ಲದೇ ಧೂಳು ಹಿಡಿದು, ನುಸಿ ತಿನ್ನುತ್ತಿವೆ. ಇಂದು ಬಹಿರಂಗ ಪ್ರದರ್ಶನಕ್ಕೆ ಇರಲೆಂದು ರೈತರಿಂದ ಸ್ವಾಧೀನ ಪಡಿಸಿಕೊಂಡು ನಂತರ ಬಿಟ್ಟ ಭೂಮಿ ಅನಾಥವಾಗಿ ರೋಧಿಸುತ್ತಿವೆ. ಇದಕ್ಕೆ ಎಸ್.ಎಂ.ಕೃಷ್ಣರ ಕಾಲದಲ್ಲಿ ಪ್ರಕಟಿಸಿದ ಯೋಜನೆಗಳಲ್ಲಿ ಒಂದಾದ ರಾಯಚೂರೇ ಸಾಕ್ಷಿ! (2000 ಎಕರೆ ಬಣಗುಡುತ್ತಿದೆ) ಈ ಸರ್ಕಾರ ಪ್ರಕಟಿಸಿದ ಯೋಜನೆಗಳಲ್ಲಿ ಶೇಕಡಾ 40ರಷ್ಟಾದರೂ ಕಾರ್ಯಗತಗೊಳ್ಳದ ಈ ಯೋಜನೆಗಳ ಪ್ರಕಟಣೆ ಯಾಕಾಗಿ, ಮೂಗಿಗೆ ಬೆಣ್ಣೆ ಹಚ್ಚಲು ಅಲ್ಲವೇ?



ಸಿ.ಯತಿರಾಜು

1857ರ ಬಂಡಾಯ

ಪಾಳೇಗಾರ ವ್ಯವಸ್ಥೆಯಲ್ಲಿ ಜೀವನೋಪಾಯ ಮಾಡುತ್ತಿದ್ದ ಈ ಎಲ್ಲಾ ಜನಸಾಮಾನ್ಯರು ಬ್ರಿಟಿಷರ ವಿರೋಧಿ ಬಂಡಾಯದಲ್ಲಿ ಪಾಲ್ಗೊಳ್ಳುವ ಮೂಲಕ ಅದಕ್ಕೆ ಜನತಾ ಬಂಡಾಯದ ಸ್ವರೂಪವನ್ನು ನೀಡಿದರು.

ನಾಗರಿಕ ಜನತಾ ಬಂಡಾಯವಾಗಿದ್ದ 1857 ರ ವಿಪ್ಲವ

1843-56ರ ನಡುವಿನ ಅವಧಿಯಲ್ಲಿ ಬ್ರಿಟಿಷರು ವಶಕ್ಕೆ ತೆಗೆದುಕೊಂಡ ಪ್ರತಿಯೊಂದು ಪ್ರದೇಶದಲ್ಲೂ ನಿರುದ್ಯೋಗ ಹೆಚ್ಚಾಯಿತು. ಆ ಪ್ರಾಂತ್ಯಗಳ ರಾಜರ ಸುಲ್ತಾನರ ಸೋಲುಗಳು ಅವರ ಸೋಲುಗಳು ಮಾತ್ರವಾಗಿರದೆ ಅವರ ಅವಲಂಬಿತರ ಸೋಲು ಮತ್ತು ವಿನಾಶವೂ ಆಗಿತ್ತು. ಅರಮನೆಯಲ್ಲಿ, ಮಹಲುಗಳಲ್ಲಿ ಕೆಲಸ ಮಾಡುತ್ತಿದ್ದ ಅಪಾರ ಸಂಖ್ಯೆಯ ಸೇವಕ ಕುಟುಂಬಗಳು ಇವರುಗಳ ಪದಚ್ಯುತಿಯೊಂದಿಗೆ ಬೀದಿಗೆ ಬಿಸಾಡಲ್ಪಟ್ಟರು. ರಾಜಕೀಯ ಆಸ್ಥಾನಗಳ ಅವಲಂಬಿತ ಕುಟುಂಬಗಳು ಹಾಗೂ ಆಸ್ಥಾನಕ್ಕೆ ಅನೇಕ ರೀತಿಯ ಸೇವೆ ಮತ್ತು ಸರಕುಗಳನ್ನು ಒದಗಿಸುತ್ತಿದ್ದ ಜನ ಅನಾಥರಾಗಿ ಬೇರೆ ಬೇರೆ ವೃತ್ತಿಗಳಿಗಾಗಿ ಹುಡುಕಾಡಬೇಕಾಯಿತು. ಆಸ್ಥಾನಕ್ಕೆ ಅತ್ಯಂತ ಬೆಲೆ ಬಾಳುವ ವಸ್ತ್ರ , ಆಭರಣ, ಇತರ ಐಷಾರಾಮಿ ವಸ್ತುಗಳನ್ನು ಉತ್ಪಾದನೆ ಮಾಡುತ್ತಿದ್ದ ನೇಕಾರರು, ಅಕ್ಕಸಾಲಿಗಳು, ದೋಬಿಗಳು, ದರ್ಜಿಗಳು, ಪುರೋಹಿತರು, ಕಾವಲುಗಾರರು, ಸಂಚಿಗಳು, ಕಂಚುಕಿಗಳು, ಸೇವಕ -ಸೇವಕಿಯರು, ಹೊಗಳುಭಟ್ಟರು, ಅಲಂಕಾರಿಗಳು, ಸಂಗೀತ, ನೃತ್ಯ ಕಲಾವಿದರು, ಸಾಹಿತಿಗಳು ಇನ್ನು ಮುಂತಾದವರು ಆಶ್ರಯ ವಂಚಿತರಾಗಿ ನಿರುದ್ಯೋಗಿಗಳಾದರು. ಈ ಪಾಳೇಗಾರಶಾಹಿ ವ್ಯವಸ್ಥೆಯಲ್ಲಿ ಜೀವನೋಪಾಯ ಮಾಡುತ್ತಿದ್ದ ಈ ಎಲ್ಲಾ ಜನಸಾಮಾನ್ಯರು ಬ್ರಿಟಿಷರ ವಿರೋಧಿ ಬಂಡಾಯದಲ್ಲಿ ಪಾಲ್ಗೊಳ್ಳುವ ಮೂಲಕ ಅದಕ್ಕೆ ಜನತಾ ಬಂಡಾಯದ ಸ್ವರೂಪವನ್ನು ನೀಡಿದರು.

ಕಸುಬುದಾರರ ಗುಳೆ

ಮುಕ್ತ ವ್ಯಾಪಾರದ ಸಾಮ್ರಾಜ್ಯವಾದಿ ನೀತಿ ಕಸುಬುದಾರರನ್ನು ಹಳ್ಳಿಗಳಿಂದ ಗುಳೆಯೆಬ್ಬಿಸಿತು. ಯಂತ್ರೋದ್ಯಮದ ಉತ್ಪನ್ನಗಳು ದೇಶೀಯ ಕಸುಬುದಾರರ ಉತ್ಪನ್ನಗಳನ್ನ ದುಬಾರಿಯಾಗಿಸಿ ಮೂಲೆಗೆ ತಳ್ಳಿದವು. ಇದರಿಂದಾಗಿ ನಿರುದ್ಯೋಗಿಗಳಾದ ಕಸುಬುದಾರರು ಉದ್ಯೋಗವನ್ನರಸಿಕೊಂಡು ನಗರಗಳಿಗೆ ವಲಸೆ ಬಂದರು. ಹೀಗೆ ಬ್ರಿಟಿಷರ ಆಳ್ವಿಕೆ ನಗರೀಕರಣಕ್ಕೆ ಉತ್ತೇಜನ ನೀಡಿತ್ತು. ಆಗ ಲಕ್ನೋ 6 ಲಕ್ಷ ಜನಸಂಖ್ಯೆಯನ್ನು ಹೊಂದಿತ್ತು. ದಂಗೆಗೆ ಮುಂಚೆ ಪೋಲೀಸರು ನಡೆಸಿದ ಮನೆ ಗಣತಿಯಿಂದ ಈ ಅಂಶ ಶೃತಪಟ್ಟಿದೆ. ಆಗ ಅದು ಅತ್ಯಂತ ದೊಡ್ಡ ನಗರವಾಗಿತ್ತು ಬಹುಶಃ ಕಲ್ಕತ್ತಾಗಿಂತಲೂ ದೊಡ್ಡ ನಗರವಾಗಿತ್ತೆಂದು ಭಾವಿಸಲಾಗಿದೆ. ಬ್ರಿಟಿಷರು ಈ ನಗರವನ್ನು ವಶಪಡಿಸಿಕೊಂಡ ನಂತರ ಅದು ಜೀವನೋಪಾಯ ವಂಚಿತ ಹಳ್ಳಿಗಳಿಂದ ವಲಸೆ ಬಂದ ಜನರಿಂದ ತುಂಬಿ ಹೋಗಿತ್ತು. ಬ್ರಿಟಿಷರ ಆಮದುಗಳಿಂದ ನೇಕಾರರು ಅತ್ಯಂತ ಬಲವಾಗಿ ಭಾದಿಸಲ್ಪಟ್ಟರು. ಒಂದು ಕಡೆ ಕಾರ್ಖಾನೆಗಳಲ್ಲಿ ತಯಾರಾದ ಅತಿ ಕಡಿಮೆ ಬೆಲೆಯ ಹತ್ತಿ ಬಟ್ಟೆ ಮಾರುಕಟ್ಟೆಯನ್ನಾಕ್ರಮಿಸಿದರೆ ಮತ್ತೊಂದು ಕಡೆಯಿಂದ ಸಾಂಪ್ರದಾಯಿಕ ಮಾರುಕಟ್ಟೆ ಕೂಡ ಅರಸೊತ್ತಿಗೆಯ ಪದಚ್ಯುತಿಯಿಂದ ನಾಶಗೊಂಡಿತ್ತು. 1857ರ ಲಕ್ನೋ ಘಟನಾವಳಿಗಳಿಗೆ ಪ್ರತ್ಯಕ್ಷದರ್ಶಿಯಾದ ಎಲ್ ಇಎಸ್ ರೀಸ್ ಒಪ್ಪಿಕೊಂಡಂತೆ, 'ಲಕ್ನೋದ ಜನತೆ ನಮ್ಮ ವಿರುದ್ಧ ಬಂಡೇಳುವುದು ಅತ್ಯಂತ ಸಂಭಾವ್ಯವಾದ ಘಟನೆ ಅವರ ಪ್ರೀತಿಯನ್ನು ಗಳಿಸಲು ನಾವು ಏನನ್ನೂ ಮಾಡಿಲ್ಲ. ಆದರೆ ಅವರ ಅಸಮಾಧಾನವನ್ನು ಹೆಚ್ಚಿಸಲು ಅಗತ್ಯವಾದುದನ್ನೆಲ್ಲಾ ಮಾಡಿದ್ದೇವೆ.' ಲಕ್ನೋಗೆ ನಿಜವಾದದೆಲ್ಲಾ ಅಲ್ಪಸ್ವಲ್ಪ ಮಾರ್ಪಾಟಿನೊಂದಿಗೆ ಉಳಿದೆಲ್ಲಾ ನಗರಗಳಿಗೂ ಅನ್ವಯವಾಗುತ್ತಿತ್ತು. ಆದ್ದರಿಂದ ಈ ಬಂಡಾಯ ಕೇವಲ ರೈತ ಬಂಡಾಯ ಮಾತ್ರವಾಗಿರದೆ ನಗರ ಪ್ರದೇಶಗಳನ್ನು ಒಳಗೊಂಡಿತ್ತು. ದೆಹಲಿ, ಲಕ್ನೋ, ಬರೈಲಿ, ಕಾನ್ಪುರ, ಝಾನ್ಸಿ ಮತ್ತಿತರ ನಗರಗಳು ಪ್ರತಿರೋಧದ ಪ್ರಮುಖ ಕೇಂದ್ರಗಳಾಗಿ ಹೊರ ಹೊಮ್ಮಿದವು.

ಮೇ ತಿಂಗಳ ಆರಂಭದಲ್ಲಿ ಲಕ್ನೋ ನಗರ ಬಂಡಾಯವೊಂದರ ಪ್ರಮುಖ ನೆಲೆಯಾಗಿ ಗಮನ ಸೆಳೆಯಿತು. ಈ ನಗರದ ಕುಶಲ ಕರ್ಮಿಗಳು ಕೈಗಾರಿಕಾ ವಿನಾಶೀಕರಣದಿಂದ ನಿರುದ್ಯೋಗಿಗಳಾಗಿದ್ದರು. ಈ ನಗರದಲ್ಲಿ ಕುಶಲ ಕರ್ಮಿಗಳು, ವ್ಯಾಪಾರಿಗಳು, ಅಂಗಡಿ ಮಾಲೀಕರು ಹಾಗೂ ಅತ್ಯಂತ ವೈವಿಧ್ಯಮಯವಾದ ನಾಗರೀಕ ಜನ ವಿಭಾಗಗಳು ಕ್ರಿಯಾಶೀಲವಾಗಿ ಭಾಗವಹಿಸುವ ಮೂಲಕ ಬಂಡಾಯಗಾರರು ನಗರವನ್ನು ವಶಪಡಿಸಿಕೊಳ್ಳಲು ಸಹಾಯ ಮಾಡಿದರು.




ಜನಪದ ಗೀತೆಗಳಲ್ಲಿ ಬರುವ ಅನೇಕ ನಾಯಕರ ಹೆಸರುಗಳು ತಳಹಂತದಲ್ಲಿ ಬಂಡಾಯಕ್ಕೆ ದೊರಕಿದ್ದ ಬಹುಮುಖಿಯಾಗಿದ್ದ ನಾಯಕತ್ವ ವನ್ನು ಪರಿಚಯಿಸುತ್ತದೆ. 1857ರ ಬಂಡಾಯ ಪಠ್ಯ ಪುಸ್ತಕಗಳಲ್ಲಿ ಅತ್ಯಂತ ಪ್ರಸಿದ್ಧ ವ್ಯಕ್ತಿಗಳ ನಾಯಕತ್ವದಲ್ಲಿ ನಡೆಯಿತೆಂಬುದು ಮಿಥ್ಯೆ ಎಂದು ಇದು ಬಯಲು ಮಾಡುತ್ತದೆ. ನಿಶಾನ್‌ಸಿಂಗ್, ಜುಲ್ಫಿಕರ್, ರಂಜೀತ್ ಯಾದವ್, ಬೇನಿ-ಮಾ-ದೋ, ಮೈಖಿಮಲ್ಲಾ, ರಾಜಬ್ ಆಲಿ, ಮಾ-ಧೋ-ಸಿಂಗ್ ಇನ್ನು ಮುಂತಾದ ನೂರಾರು ಹೆಸರುಗಳು ಮತ್ತು ಅವರುಗಳು ನಡೆಸಿದ ಧೀರೋದಾತ್ತ ಹೋರಾಟ ಅವರ ತ್ಯಾಗ ಬಲಿದಾನಗಳು ಸಾವಿರಾರು ಬೋಜ್‌ಪುರಿ ಜನಪದ ಗೀತೆಗಳಲ್ಲಿ ಅತ್ಯಂತ ಕೆಳವರ್ಗದ, ಕೆಳಜಾತಿಗಳ ಬೆಂಬಲ ಮತ್ತು ಭಾಗವಹಿಸುವಿಕೆಯಲ್ಲಿ. ಅಗಣಿತ ಸಂಖ್ಯೆಯ ಸಾಮಾನ್ಯ ಜನತೆ ಮತ್ತು ಅವಗಣಿಸಲ್ಪಟ್ಟ ಜನವರ್ಗಗಳು ಯಾವುದೇ ಪರ್ಯಾಯವಿಲ್ಲದೆ ಅನಿವಾರ್ಯವಾಗಿ ಹೋರಾಡಿ ತಮ್ಮ ತ್ಯಾಗ ಬಲಿದಾನಗಳ ಮೂಲಕ ಇದನ್ನು ನಿಜವಾದ ಅರ್ಥದಲ್ಲಿ ಜನತಾ ಬಂಡಾಯವನ್ನಾಗಿಸಿದರು. ಸಹಸ್ರಾರು ಸಂಖ್ಯೆಯಲ್ಲಿ ಸಾಮಾನ್ಯ ಜನ, ರೈತರು, ಕುಶಲ ಕರ್ಮಿಗಳು, ಧರ್ಮ ಬೋಧಕರು, ಗ್ರಾಮೀಣ ಕಸುಬುದಾರರು ಬಂಡಾಯಕ್ಕೆ ಸೇರ್ಪಡೆಗೊಂಡು ತಮ್ಮ ಜೀವಗಳನ್ನೇ ಬಲಿದಾನ ಮಾಡಿ ಬಂಡಾಯದ ಘನತೆಯನ್ನು ಹೆಚ್ಚು ಮಾಡಿದ್ದಾರೆ.

'ಕೋರ್ಟ್‌ಆಫ್ ಅಡ್ಮಿನಿಸ್ಟ್ರೇಷನ್' ಸಮಿತಿ ಸ್ಥಾಪನೆ

ಬಂಡಾಯಗಾರರು ಬಹಾದ್ದೂರ್ ಷಾ ಜಫರ್‌ನನ್ನು ದೆಹಲಿ ಸಿಂಹಾಸನದ ಮೇಲೆ ಕೂರಿಸಿದರೂ ಅವರು ಮೊಘಲರ ನಿರಂಕುಶಾಧಿಕಾರವನ್ನು ಮರು ಸ್ಥಾಪಿಸಲಿಲ್ಲ. ಸರ್ಕಾರದ ಆಡಳಿತ ಕಾರ್ಯಗಳನ್ನು ನಡೆಸಲು ಮತ್ತು ಬಂಡಾಯ ಸೈನ್ಯವನ್ನು ನಿರ್ದೇಶಿಸಲು 10 ಜನರಿರುವ 'ಕೋರ್ಟ್ ಆಫ್ ಅಡ್ಮಿನಿಸ್ಟ್ರೇಷನ್' ಎಂಬ ಸಮಿತಿಯನ್ನು ರಚಿಸಿದರು. ಈ ಸಮಿತಿಯ 6 ಜನ ಸದಸ್ಯರು ಸೈನ್ಯದಿಂದ ಬಂದವರಾದರೆ ಉಳಿದವರು ನಾಗರೀಕ ವಿಭಾಗಗಳಿಂದ ಬಂದವರಾಗಿರುತ್ತಿದ್ದರು. ಈ ಸಮಿತಿಯಲ್ಲಿ ಸಮಾನ ಸಂಖ್ಯೆಯ ಹಿಂದೂಗಳು ಮತ್ತು ಮುಸ್ಲೀಮರು ಪ್ರಾತಿನಿಧ್ಯ ಹೊಂದಿದ್ದರು. ಪ್ರತಿಯೊಬ್ಬ ಸದಸ್ಯರಿಗೂ ಒಂದು ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಡಲಾಗುತ್ತು. ಅವರು ಇಲಾಖಾ ಕಾರ್ಯದರ್ಶಿಗಳ ಸಮಿತಿ ಮೂಲಕ ಆಡಳಿತ ನಡೆಸುತ್ತಿದ್ದರು. 'ಕೋರ್ಟ್ ಆಫ್ ಅಡ್ಮಿನಿಷ್ಟ್ರೇಷನ್'ಗೆ ಮಾತ್ರ ತೆರಿಗೆ ವಿಧಿಸುವ, ವ್ಯಾಪಾರಿಗಳು ಮತ್ತು ಬ್ಯಾಂಕರ್‌ಗಳಿಂದ ಯುದ್ಧ ಕೊಡುಗೆಗಳನ್ನು ವಸೂಲು ಮಾಡಲು ಅಧಿಕಾರವಿತ್ತು. ಮನಸ್ಸಿಗೆ ಬಂದಂತೆ ರಾಜಕುಮಾರರು ವಸೂಲು ಮಾಡುವುದನ್ನು ತಪ್ಪಿಸಲಾಯಿತು. ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡಿ ಉಳುವವರಿಗೆ ಭೂಮಿಯ ಒಡೆತನವನ್ನು ನೀಡುವ ಆದೇಶವನ್ನು ಹೊರಡಿಸಲಾಯಿತು. ಬಹಾದ್ದೂರ್-ಷಾ ಕೇವಲ ಸಮಿತಿ ರೂಪಿಸಿದ ಆದೇಶಗಳಿಗೆ ಮತ್ತು ಘೋಷಣಾ ಪತ್ರಗಳಿಗೆ ಸಹಿ ಮಾಡುತ್ತಿದ್ದನು. ವಿಶಾಲ ಜನಸಮೂಹಗಳು ಈ ಬಂಡಾಯದಲ್ಲಿ ಅತ್ಯಂತ ಉತ್ಸಾಹದಿಂದ

ಪುಟ 13 ಕ್ಕೆ

ನಯವಂಚಕರ ನಯ ಭಯೋತ್ಪಾದನೆ



ದಿ. ಶ್ರೀನಿವಾಸ

"ಯಾಕ್ಲ ನಾಣಿ ನಿನ್ನೆಯಿಂದ ಫೋನೇ ಮಾಡಿಲ್ಲ? ನಿನ್ನ ಮೊಬೈಲ್ ಬ್ಯಾಟ್ರಿ ಏನಾರ ಢಂ ಅಂತ"? ಎಂದು ಕೇಳಿದ ವೆಂಕ.

"ಮೊಬೈಲ್ ಬ್ಯಾಟ್ರಿಯೇನೂ ಢಂ ಅಂದಿಲ್ಲ. ಆದ್ರೆ ಆ ನೂಕಿಯಾ ಅಂಗಡೀಗೆ ಫೋನ್ ಮಾಡಿ ಮಾಡಿ ಕರೆನ್ಸಿ ಮುಗ್ದೋಗಿತ್ತು ಕಣ್ಲಾ' ಎಂದ ನಾಣಿ.

"ಎಂಥಾ ಕಳ್ರು ನೋಡ್ರಲಾ' ಎಂದ ಸೀನ.

"ಯಾರೂ ಕಳ್ರು "ಎಂದು ಕೇಳಿದ ವೆಂಕ.

"ಅದೇ ನೂಕಿಯಾ ಕಂಪ್ನಿಯೋರು" ಎಂದ ಸೀನ.

"ಯಾಕ್ಲ ಅಂಗಂತೀಯಾ? ಮೊಬೈಲ್ ಬ್ಯಾಟ್ರಿ ಆಳಾಗಿದ್ರೆ ಒಸಾದು ಮನೆಗೇ ಫ್ರೀಯಾಗಿ ಕಳುಸ್ತಾರಂತೆ ಪಾಪ" ಎಂದ ವೆಂಕ.

"ಪಾಪ ಅಲ್ಲ ಕಣ್ರಲಾ, ಅವರು ಪಾಪಿಷ್ಟರು, ನಯ ವಂಚಕರು, ಇನ್ನೂ ಏಳ್ಬೇಕೂಂದ್ರೆ ಒಂಥರ ನಯ ಭಯೋತ್ಪಾದಕರು " ಎಂದ ಸೀನ.

"ಯಾಕ್ಲ ಸೀನ ಇಷ್ಟೊಂದು ಕ್ಯಾಪ ಮಾಡ್ಕೊಂಡಿದೀಯೇ? ನಿನ್ನ ಮೊಬೈಲ್ ಬ್ಯಾಟ್ರಿ ಏನಾರ ಢಂ ಅಂತ? ಎಂದು ಕೇಳಿದರು ವೆಂಕ ನಾಣಿ ಇಬ್ಬರೂ

"ನೋಡ್ರಲಾ ಈ ಪಲ್ಟಿ ನಾಸನಲ್ ಕಂಪ್ನೀಯೋರು (ಮಲ್ಟಿ ನ್ಯಾಷನಲ್ ಕಂಪನಿ) ಬಂದು ನಮ್ಮ ನಮ್ಮನ್ನೆಲ್ಲಾ ಕುರಿ ಮಾಡ್ತಾವ್ರೆ ನಮಗ್ಯಾರಿಗೂ ಗೊತ್ತೇ ಆಗದಂಗೆ" ಎಂದ ಸೀನ.

"ಯಾಕ್ಲ ಏನ್ಲಾ ಆಗ್ಯತೆ ನಿಂಗೆ? ಬ್ಯಾಟ್ರಿ ಆಳಾದ್ರೆ ಬೇರೆ ಕೊಡ್ತಾರಲ್ಲ ಅದ್ರಾಗೆ ಕುರಿ ಮಾಡೋದೇನೈತೆ? ಎಂದ ಕೇಳಿದ ನಾಣಿ.

"ಅಲ್ಲ ಕಣ್ರಲಾ ಈ ಪಲ್ಟಿ ನಾಸನಲ್ ಕಂಪ್ನಿ ಕೆಲಸದೋರಿಗೆ ಸಂಬ್ಳ ಎಷ್ಟಿರತ್ತೈತೆ ಏಳಿ ನೋಡವ" ಎಂದ ಸೀನ.

"ಏನೋಪ್ಪ ತಿಂಗ್ಳಿಗೇ ಲಕ್ಷಾಂತ್ರ ರೂಪಾಯಿ ಅಂತಾರಪ್ಪ" ಎಂದ ವೆಂಕ.

"ಇಂತಾ ದೊಡ್ ಕಂಪ್ನೀಲಿ ಗುಣಮಟ್ಟ ನಿಯಂತ್ರಣಕ್ಕೆ (ಕ್ವಾಲಿಟಿ ಕಂಟ್ರೋಲ್) ಅಂತಲೇ ಒಂದು ವಿಭಾಗ ಇರಾಕಿಲ್ವ?" ಎಂದು ಕೇಳಿದ ಸೀನ.

"ಇರಬವುದೇನೋ, ನಮಗೆ ಅವೆಲ್ಲ ಏನು ಗೊತ್ತಾಗುತ್ತೇ? ಇಲ್ಲಿ ಆ ಇಸ್ಯ ಯಾಕೀಗ? ನಾಣಿ ಕೇಳಿದ.

"ಯಾಕೇಂದ್ರೆ 2005 ನವೆಂಬರ್ ನಿಂದ 2006 ಡಿಸೆಂಬರ್ ವರೆಗೆ 46 ಮಿಲಿಯನ್ ಇಂಥ ಬ್ಯಾಟ್ರಿ ಮಾಡವರಂತೆ. ತಿಂಗಳಿಗೆ ಲಕ್ಷಾಂತ್ರ ರೂಪಾಯಿ ಸಂಬಳ ತಗೊಳೋ ಈ ಕಳ್ರು ಏನೂ ಕಳ್ಳೆಪುರಿ ತಿಂತಿದ್ರಾ? ಮೊಬೈಲ್‌ಗೆ ಢಂ ಅನ್ನೋ ಬ್ಯಾಟ್ರಿ ಹಾಕಿದ್ದೀವಿ ಅಂತ ಗೊತ್ತಾಗಕ್ಕೆ 2 ವರ್ಸ ಬೇಕಾಯ್ತಾ? ಈ ಖೂಳನ್ರಿಗೆ? ಸೀನ ಕೋಪದಿಂದ ಕೇಳಿದ.

"ಅಂಗಾರೆ ನೀನು ಏಳೋದು ಏನು ಅಂತ" ? ವೆಂಕ ಕೇಳಿದ.

"ನಿಮ್ಮ ಮೊಬೈಲ್ ಬ್ಯಾಟ್ರಿ ಢಂ ಅನ್‌ಬೋದು ಅಂತ ಭಯ ಉಟ್ಸುದ್ರು. ಭಯೋತ್ಪಾದಕರು ತಾನೇ ಇವ್ರು? ಸೀನ ಕೇಳಿದ.

"ಅದಿರ್ಲಿ ಇಸ್ಯ ಏಳ್ಲ ಸರ್ಯಾಗೆ" ಕೇಳಿದ ನಾಣಿ.

" ನೋಡ್ರಲಾ, 46 ಮಿಲಿಯ ಇಂಥ ಬಾಟ್ರಿ ಇರೋರು ಏನೂ ಭಯ ಪಡಬೇಡ್ರಿ. ಫೋನ್ ಮಾಡ್ರಿ ಅಥವಾ ಎಸ್.ಎಂ.ಎಸ್. ಕಳುಸ್ರಿ ಅಥವಾ ಇಂಟರ್‌ನೆಟ್ಟಲ್ಲಿ ನೋಡ್ಕಳಿ" ಅಂದ್ರು. ಇಸ್ಸ ತಿಳ್ಕಳಕೆ ಅಂತ ಒಬ್ಬೊಬ್ರು ಒಂದು 5 ರೂಪಾಯಿ ಖರ್ಚು ಮಾಡಿದಾರೆ ಅಂತ ಲೆಕ್ಕ ಹಾಕಿದ್ರೂ ಮೊಬೈಲ್ ಕಂಪ್ನಿಗಳಿಗೆ ಏಸು ದುಡ್ಡಾಯ್ತು ಗೊತ್ತೇನ್ರಲಾ"? ಎಂದ ಸೀನ.

"ಎಷ್ಟೋ ನನ್ಗೆ ಅಷ್ಟೊಂದೆಲ್ಲ ಲೆಕ್ಕ ಗೊತ್ತಾಗಕಿಲ್ಲ ನೀನೇ ಏಳಲಾ" ಎಂದರು ವೆಂಕ ನಾಣಿ

"ಹೆಚ್ಚು ಕಡಿಮೆ 25 ಕೋಟಿ ರೂಪಾಯಿ ಓಗಿರ್ತದೆ ಕಣ್ರಲಾ ಮೊಬೈಲ್ ಕಂಪ್ನಿಗಳಿಗೆ" ಎಂದ ಸೀನ.

"ಅಂಗಂತೀಯಾ? ಭಾರಿ ಟೋಪಿ ಆಕೌರೆ ಕಣ್ಲಾ ನಮ್ಗೆ ಗೊತ್ತೇ ಆಗದಂಗೆ" ಎಂದರು ಇಬ್ಬರೂ.

"ನೋಡ್ರಲಾ ಜನ ನಮ್ದು ಢಂ ಅನ್ನಾಕಿಲ್ಲ ಅಂದ್ರು ಸುಮ್ನಾದ್ರು. ಅದೇ ನಮ್ಮ ಸರ್ಕಾರ ಇಂಥಾ ಮನೆ ಹಾಳು ಕೆಲ್ಸ ಏನಾದ್ರು ಮಾಡಿದ್ರೆ ಜನ ಛೀಥೂ ಅಂತ ಉಗ್ಯೋರು. ಗಲಾಟೆಗಳಾಗೋದು, ಕೋರ್ಟು, ಕಛೇರಿ, ತನಿಖೆ, ಸಮಿತಿ ಅಂತ ಒಂದಷ್ಟು ನಾಟಕನಾದ್ರೂ ನಡೀತಿತ್ತು. ಆದ್ರೆ ಇದು ಪಲ್ಟಿ ನಾಸನಲ್ ಕಂಪ್ನಿ ಅಂತ ಎಲ್ರೂ ಸುಮ್ಮಾಗಿ ಬಿಟ್ರು ಛೇ" ಎಂದ ಸೀನ ಬೇಸರದಿಂದ.

"ಓಗ್ಲಿ ಬುಡ್ಲಾ" ಎಂದು ಸಮಾಧಾನ ಮಾಡಿದರು ವೆಂಕ ನಾಣಿ.

ಕೋಲಾರ : ಕೋಮುಗಲಭೆಗೆ ಕಿಡಿ ಹೊತ್ತಿಸುವವರು

ಪೊಲೀಸರ ದೌರ್ಜನ್ಯಕ್ಕೆ ಕೋಲಾರ ತತ್ತರಿಸುತ್ತಿದೆ. ಕ್ಷುಲ್ಲಕ ಕಾರಣಗಳನ್ನೆಲ್ಲ ಮುಂದು ಮಾಡಿ ಕೋಲಾರ ನಗರಕ್ಕೆ ಕೊಳ್ಳಿ ಇಡಲು ಇಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣ ಮೂರ್ತಿ ಮತ್ತು ಎಸ್‌ಪಿ ದಯಾನಂದ್ ಹವಣಿಸುತ್ತಿದ್ದಾರೆ. ಸಂಘಪರಿವಾರದ ಮೂಸೆಯಿಂದ ಅಚ್ಚಾಗಿ ಬಂದಿರುವ ಇವರು ಇಂದು ಕೋಲಾರವನ್ನು ಕೋಮುಗಲಭೆಯ ಬೀಡನ್ನಾಗಿ ಮಾಡಲು ಕಾತೊರೆಯುತ್ತಿದ್ದಾರೆ.

ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವ್ಯಕ್ತಿಯೊಬ್ಬನನ್ನು ಹಿಡಿಯುವ ಯತ್ನದಲ್ಲಿ ಆದ ಅಚಾತುರ್ಯದಿಂದಾಗಿ ರುಪ್ತಿಯಲ್ಲಿದ್ದ ಪೊಲೀಸರು ಮತ್ತು ಹಲವು ಪುಂಡರ ನಡುವೆ ಗಲಭೆ ಉಂಟಾಯಿತು. ಪೊಲೀಸ್ ಮಂಜುನಾಥ್‌ರಿಗೆ ತಗುಲಿದ್ದ ಸಣ್ಣ ಪುಟ್ಟ ಗಾಯಗಳಿಗೆ ಖುದ್ದು ನಿಂತು ತಾನೆ ಪಕ್ಕಾಪಟ್ಟೆ ಬ್ಯಾಂಡೇಜ್ ಸುತ್ತಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ಮುಸ್ಲಿಂ ಯುವಕರು ಹಲ್ಲೆ ನಡೆಸಿದ್ದಾರೆಂದು ಪ್ರಚಾರ ಹಬ್ಬಿಸಿದ.

ಇದೊಂದು ಕ್ಷುಲ್ಲಕ ಕಾರಣವಾಗಿದ್ದು ಇದನ್ನು ಪ್ರೊವೋಕ್ ಮಾಡಬೇಡಿ, ಆರೋಪಿಗಳಿಗೆ ಎಚ್ಚರಿಕೆ ನೀಡಿ ಎಂದು ನಗರದ ಹಲವು ಮುಖಂಡರು ಮಾಡಿದ್ದ ಮನವಿಯನ್ನು ನಿರ್ಲಕ್ಷಿಸಿ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ ದೂರು ಸಹ ಇಲ್ಲದೆ ಎಫ್‌ಐಆರ್ ದಾಖಲಿಸಿದ. ಇದರಿಂದ ಬೇಸತ್ತ ಮುಖಂಡರು ಅವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಇದರಿಂದ ಕಕ್ಕಾಬಿಕ್ಕಿಯಾದ ಸಿಐ ಕೋಲಾರದಲ್ಲಿ ತಾವೇ ಹಿಂದೂಗಳ ರಕ್ಷಕರೆಂದು ಬೊಬ್ಬೆ ಹೊಡೆಯುತ್ತಾ ಕೋಮುರಣರಂಗವನ್ನಾಗಿ ಮಾಡಲು ರಣಹದ್ದುಗಳಂತೆ ಕಾಯುತ್ತಿರುವ ಬಜರಂಗದಳದವರಿಗೆ ಈ ವಿಷಯ ಮುಟ್ಟಿಸಿ ಅವರನ್ನು ಪ್ರರೇಪಿಸಿದ. ಆರೋಪಿಗಳು



ಕಡ್ಡಿಯನ್ನು ಗುಡ್ಡ ಮಾಡಿ ಗುಂಡು ಹಾರಿಸುತ್ತಿರುವ ಪೊಲೀಸರು

ಮುಸ್ಲಿಮರಾಗಿರುವುದರಿಂದ ಅವರನ್ನು ಬಿಡುಗಡೆ ಮಾಡಬಾರದೆಂದು ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಧರಣಿ ಆರಂಭಿಸಿದರು.

ಸಿಕ್ಕ ಸಿಕ್ಕವರತ್ತ ಲಾಠಿ ಬೀಸಿದರು

.ಒಂದೆಡೆ ಬಜರಂಗದಳ ಕಾರ್ಯಕರ್ತರು ಮತ್ತೊಂದೆಡೆ ಕ್ಲಾಕ್‌ಟವರ್‌ನಲ್ಲಿ ಮುಸ್ಲಿಮರು ಪ್ರತಿಧರಣಿಗಳನ್ನು ನಡೆಸಲು ಆರಂಭಿಸಿದರು. ಏತನ್ಮಧ್ಯೆ ನಗರದ ನಾಲ್ಕು ಕಡೆ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದು, ಸುಮಾರು 31ಮಂದಿ ಗಾಯಗೊಂಡಿದ್ದಾರೆ. ಹತ್ತು ವರ್ಷದ ಶಾಲಾಬಾಲಕನ ಮೇಲೆ ಪೋಲೀಸರು ನಡೆಸಿದ ಲಾಠಿ ಪ್ರಹಾರಕ್ಕೆ ಆತ ಇನ್ನೂ ಚೇತರಿಸಿಕೊಂಡಿಲ್ಲ. ಬಸ್ ಸ್ಟಾಂಡ್‌ನಲ್ಲಿ ಹಣ್ಣುಗಳನ್ನು ಮಾರುತ್ತಿದ್ದವರ ಮೇಲೆಲ್ಲಾ ಎರ್ರಾಬಿರ್ರಿಯಾಗಿ ಪೊಲಿಸರು ಲಾಠಿ ಪ್ರಹಾರ ಮಾಡಿದ್ದಾರೆ. ಅಶ್ವತ್ಥ ಎನ್ನುವ ಸೀಬೆ ಕಾಯಿ ಮಾರಾಟ ಮಾಡುತ್ತಿದ್ದ ಹುಡುಗನ ಬಳಿಇದ್ದ ಮೂರು ಮಕ್ಕರೆಗಳನ್ನು ಪೊಲೀಸರು ಜೀಪುಗಳಲ್ಲಿ ಸಾಗಿಸಿದ್ದಾರೆ. ಇದರಿಂದಾಗಿ ಆತನು ಜೀವನ ಸಾಗಿಸಲು ಅನ್ಯ ಮಾರ್ಗವಿಲ್ಲದೆ ಪರಿತಪಿಸುವಂತಾಗಿದೆ.

ಇಷ್ಟೆಲ್ಲಾ ಆದರೂ ರಾತ್ರಿ ಎಂಟು ಗಂಟೆ ತನಕ ಎಷ್ಟೇ ಮುಖಂಡರು ಮನವಿ ಮಾಡಿದರೂ ಪರಿಸ್ಥಿತಿಯನ್ನು ಸುಸೂತ್ರವಾಗಿ ಪರಿಹರಿಸುವ ಇಚ್ಛೆ ಪೊಲೀಸರಿಗೆ ಇಲ್ಲ. ಎಲ್ಲ ಸಮುದಾಯದ ಜನರೂ ಒಟ್ಟಾಗಿ ಮನವಿ ಮಾಡಿದರೂ ಸಿಐ ಬಗ್ಗಲಿಲ್ಲ. ಕೋಲಾರ ಎಸ್ಪಿ ದಯಾನಂದ್ ಸಹ ಪೊಲೀಸರಿಗೆ ಕುಮ್ಮಕ್ಕು ನೀಡಿದ್ದರು. ಈ ಹಿಂದೆ ಮಂಗಳೂರಿನಲ್ಲಿ ಎಸ್ಪಿಯಾಗಿ ಕಾರ್ಯನಿರ್ವಹಿಸಿದ್ದ ದಯಾನಂದ್ ಕಳೆದ ವರ್ಷ ಕೋಮುಗಲಭೆಗಳನ್ನು ಸೃಷ್ಟಿಸಿ ಹಲವು ಮಂದಿ ಅಮಾಯಕರ ಸಾವಿಗೆ ಕಾರಣವಾಗಿದ್ದ. ಅಂತಹ ಹಿನ್ನೆಲೆ ಹೊಂದಿರುವ ಚಡ್ಡಿಪರವಾದ ಒಲವು ಹೊಂದಿರುವ ಎಸ್ಪಿ ಕೋಲಾರದಂತಹ ಸೂಕ್ಷ್ಮ ಪ್ರದೇಶದಲ್ಲಿದ್ದರೆ ಪರಿಸ್ಥಿತಿಯ ಭೀಕರತೆಯನ್ನು ಊಹಿಸಲೂ ಸಾಧ್ಯವಿಲ್ಲ.

ಆರೋಪಿಗಳಿಗೆ ಎಚ್ಚರಿಕೆ ನೀಡಿ ಬಿಡುಗಡೆ ಮಾಡಿ ಪರಿಸ್ಥಿತಿಯನ್ನು ನಿಯಂತ್ರಿಸಿ ಎಂದು ಮನವಿ ಮಾಡಿದರೆ ಬಜರಂಗದಳದವರೊಂದಿಗೆ ಮಾತನಾಡಿ ಅವರು ಹೇಳಿದರೆ ಬಿಡುತ್ತೇನೆ ಎಂದು ಬೇಜಬ್ದಾರಿಯಿಂದ ಉತ್ತರಿಸುತ್ತಾನೆ. ಅಂದರೆ ಇವನ ಉದ್ದೇಶ ಸಂಪೂರ್ಣವಾಗಿ ಕೋಮುಗಲಭೆಗಳನ್ನು ಸೃಷ್ಟಿಸುವುದೇ ಆಗಿದೆ. ಎರಡೂ ಸಮುದಾಯಗಳು ನಡೆಸುವ ಗಲಭೆಯನ್ನು ನಿಯಂತ್ರಿಸುವ ಹೊಣೆಗಾರಿಕೆ ಮರೆತ ದಯಾನಂದ್ ಅವರನ್ನು ಮುಖಾಮುಖಿ ಎದುರಾಗುವಂತೆ ಮಾಡಿ ಬಹಿರಂಗ ಸಮರಕ್ಕೆ ಅನುವು ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ.

ನಗರದ ಕಾಂಗ್ರೆಸ್, ಜನತಾದಳ ಸಿಪಿಐಎಂ ಪಕ್ಷದ ಮುಖಂಡರು ತಾವೇ ಸ್ವತಃ ಸಭೆ ಸೇರಿ ಪರಿಸ್ಥಿತಿಯನ್ನು ವಿಕೋಪಕ್ಕೆ ಬಿಡದಂತೆ ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಗಾಂಧಿನಗರ ನಾರಾಯಣಸ್ವಾಮಿ, ಹೋಳೂರು ಶಂಕರ್, ಜೆಎಂಎಸ್‌ನ ಆಶಾ ಮತ್ತು ಜನಶಕ್ತಿ ಮುರಳಿ ಸಹ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ನಗರದಲ್ಲಿ ಶಾಂತಿ ಕಾಪಾಡಲು ಸರ್ವ ಪ್ರಯತ್ನ ಮಾಡಬೇಕೆಂಬ ನಿಲುವನ್ನು ಮಂಡಿಸಿ, ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಎಸ್ಪಿಯನ್ನು ಜಿಲ್ಲೆಯಿಂದ ವರ್ಗ ಮಾಡಬೇಕೆಂದು ಆಗ್ರಹಿಸಲಾಯಿತು.

ಪೊಲೀಸರ ಇಂತಹ ಕುತಂತ್ರಗಳಿಂದ ನಗರದ ಜನತೆ ಹಲವಾರು ಬಾರಿ ಕೋಮುಗಲಭೆಗಳಿಗೆ ಈಡಾಗಿದ್ದಾರೆ. ಯಾವ ಸಂದರ್ಭದಲ್ಲಿ ಏನಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲದಂತಾಗಿದೆ. ನಗರದಲ್ಲಿ ಇನ್ನೂ ಕೋಮುಸೌಹಾರ್ದತೆ ತುಂಬಿರುವುದರಿಂದಲೇ ಬಜರಂಗಿಗಳ ಬೇಳೆ ಕಾಳುಗಳು ಇಲ್ಲಿ ಬೇಯುತ್ತಿಲ್ಲ. ಇಲ್ಲದಿದ್ದಲ್ಲಿ ಕೋಲಾರ ಇಷ್ಟರಲ್ಲಾಗಲೇ ಮತ್ತೊಂದು ಗೋದ್ರಾ ಆಗಬೇಕಾಗಿತ್ತು. ನಗರದಲ್ಲಿರುವ ಕೋಮುಸೌಹಾರ್ದತೆಯನ್ನು ಹದಗೆಡಿಸಲು ಸಂಘಪರಿವಾರದವರು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಈಗಾಗಲೇ ವಿವಿಧ ರೀತಿಯಲ್ಲಿ ಪ್ರಯತ್ನಗಳನ್ನು ನಡೆಸಿ ಕೋಮುವಿಷ ಬೀಜಗಳನ್ನು ಬಿತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಚಡ್ಡಿಪರ ನಿಲುವ ಹೊಂದಿರುವ ಪೊಲೀಸ್ ಅಧಿಕಾರಿಗಳು ಇದ್ದರಂತೂ ಪರಿಸ್ಥಿತಿ ನಿಯಂತ್ರಣ ತಪ್ಪಿ ಕೋಲಾರ ಹತ್ತಿ ಉರಿದೀತು.

- ಅಪ್ಪು

ಬಡವರ ಗುಡಿಸಲು ಎತ್ತಂಗಡಿ ತಹಶೀಲ್ದಾರ್ ಕಛೇರಿ ಎದುರೇ ಊಟ, ನಿದ್ದೆ

ರಾಯಚೂರಿಗೆ ಹೋಗುವ ಪಿಡಬ್ಲ್ಯುಡಿ ಕ್ಯಾಂಪ್ ರಸ್ತೆಯ ಬದಿಯಲ್ಲಿ 30-40 ವರ್ಷಗಳಿಂದ ಬಡವರು ಮನೆಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದರು. ಒಂದು ದಿನ ಏಕಾಏಕಿ ನುಗ್ಗಿದ ಪೋಲೀಸರು ಗುಡಿಸಲುಗಳನ್ನು ಕಿತ್ತೊಗೆದರು. ಯಾವ ಕಾರಣಕ್ಕೆಂದು ತಿಳಿಯದೆ ತಬ್ಬಿಬ್ಬಾದ ಗುಡಿಸಲು ವಾಸಿಗಳು ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ತಹಶೀಲ್ದಾರ್ ಕಛೇರಿ ಎದುರು ಪ್ರತಿಭಟನೆ ಆರಂಭಿಸಿದರು. ಹಗಲು - ರಾತ್ರಿ ಊಟ, ನಿದ್ದೆ ಎಲ್ಲವೂ ಕಾರ್ಯಾಲಯದ ಮುಂದೆ ಆರಂಭವಾಯಿತು.

ನೀರಾವರಿ ಇಲಾಖೆಗೆ ಸೇರಿದ ಜಾಗ

ಇವರು ವಾಸಿಸುತ್ತಿದ್ದ ಜಾಗ ನೀರಾವರಿ ಇಲಾಖೆಯದ್ದಾಗಿತ್ತು. ಆದರೆ ಭೂ ಮಾಲಕರು ಇದು ತಮ್ಮದೆಂದು ವಾದಿಸುತ್ತಾ ಸುಮಾರು ವರ್ಷಗಳಿಂದ ಬಾಡಿಗೆ ವಸೂಲು ಮಾಡುತ್ತಿದ್ದರು. ನೀರಾವರಿ ಇಲಾಖೆ ಕೋರ್ಟ್‌ಗೆ ಮೊರೆ ಹೋದಾಗ, 1979 ರಲ್ಲಿ ಇದು ನೀರಾವರಿ ಇಲಾಖೆಗೆ ಸೇರಿದ ಜಾಗವೆಂದು ಕೋರ್ಟ್ ತೀರ್ಪು ನೀಡಿತ್ತು. ಅಲ್ಲಿಂದ ಬಡವರು ಬಾಡಿಗೆಯಿಲ್ಲದೆ ನಿರಾಳವಾಗಿ ವಾಸಿಸುತ್ತಿದ್ದರು.

ಆದರೆ ಶಾಸಕರು, ತಹಶೀಲ್ದಾರು, ನಗರಸಭೆಯವರು ಸೇರಿ ಈ ಭೂಮಿಯನ್ನು ಪೋಲಿಸ್ ಠಾಣೆ ನಿರ್ಮಾಣಕ್ಕೆ ಪೋಲಿಸ್ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ಇದು ಯಾರಿಗೂ ತಿಳಿದಿಲ್ಲ. ಸುಮಾರು ವರ್ಷಗಳಿಂದ ವಾಸಿಸುತ್ತಿದ್ದ ಬಡಜನರಿಗೆ ವಿಷಯ ತಿಳಿಸದಂತೆ ಮತ್ತು ಅವರಿಗೆ ಪರ್ಯಾಯ ವ್ಯವಸ್ಥೆಯನ್ನು ಮಾಡದೆ ಮೋಸ ಮಾಡಿದ ಪ್ರಕರಣವಿದು. ಜೊತೆಗೆ ಏಕಾಏಕಿ ನುಗ್ಗಿ ಗುಡಿಸಲನ್ನು ಧ್ವಂಸಗೊಳಿಸಲು ಕುಮ್ಮಕ್ಕು ನೀಡಿದ ಇಂತಹ ಜನಪ್ರತಿನಿಧಿಯಿಂದ ಬಡವರ ರಕ್ಷಣೆಯಾದೀತೆ?

ಹೋರಾಟಕ್ಕೆ ಮಣಿದ ಶಾಸಕ

ಗುಡಿಸಲು ಕಳೆದುಕೊಂಡ ಬಡಜನತೆ ಪ್ರತಿಭಟನೆಯ ದಾರಿ ತುಳಿದಿದ್ದಾರೆ. ವಾರಗಳ ಕಾಲ ಕಳೆದರೂ ಸಂಬಂಧಿಸಿದವರ್ಯಾರೂ ಇವರು ದುಃಖ ದುಮ್ಮಾನಗಳನ್ನು ವಿಚಾರಿಸಿಲ್ಲ. ಹೋರಾಟ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡ ಶಾಸಕ ಹಂಪನಗೌಡ, ಮುಂದೆ ಜನರಿಂದ ಛೀಮಾರಿ ಹಾಕಿಸಿಕೊಳ್ಳಬೇಕಾಗುತ್ತದೆಂದು ಹೆದರಿ ಕೂಡಲೇ ಸಂಬಂಧಿಸಿದ ಅಧಿಕಾರಿಗಳು-ತಹಶೀಲ್ದಾರ್-ನಗರ ಸಭೆಯವರನ್ನು ಕರೆದು ಸಭೆ ಸೇರಿಸಿ,

ಹೋರಾಡಿ ಗೆದ್ದವರ ವಿಜಯೋತ್ಸವ



ಆಶ್ರಯ ಯೋಜನೆಯಡಿಯಲ್ಲಿ ಏಳುರಾಗಿ ಕ್ಯಾಂಪ್‌ನಲ್ಲಿ ಮನೆಗಳನ್ನು ನಿರ್ಮಿಸಿಕೊಡಲು ತೀರ್ಮಾನಿಸಲಾಯಿತು.

ನಂತರ ಶಾಸಕರು ಪ್ರತಿಭಟನಾಕಾರರಿಗೆ ಮನೆ ನಿರ್ಮಿಸಿಕೊಡುವುದಾಗಿಯೂ, ಧರಣಿ ಹಿಂತೆಗೆದುಕೊಳ್ಳಬೇಕೆಂದು ಮನವಿ ಮಾಡಿದರು. ಆದರೆ ಅದಕ್ಕೆ ಒಪ್ಪದ ಪ್ರತಿಭಟನಾಕಾರರು ಶೆಡ್ಡುಗಳನ್ನು ನಿರ್ಮಿಸುವವರೆಗೂ ಕದಲುವುದಿಲ್ಲವೆಂದು ಪಟ್ಟುಹಿಡಿದರು. ಇವರ ಹಠಕ್ಕೆ ಮಣಿದು ಆಡಳಿತ ಮತ್ತ ಅಧಿಕಾರಿಗಳು ಕೇವಲ ಎರಡೇ ದಿನಗಳಲ್ಲಿ ಎಲ್ಲರಿಗೂ ಶೆಡ್ಡುಗಳನ್ನು ನಿರ್ಮಿಸಿದರು.

ವಿಜಯೋತ್ಸವದೊಂದಿಗೆ ಶೆಡ್ಡುಗಳಿಗೆ ಪ್ರವೇಶ

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯ ಯಶಸ್ಸು ಕಂಡಿತು. ನೂರಾರು ಜನರು ಸೇರಿ ಡೊಳ್ಳು ಕುಣಿತದೊಂದಿಗೆ ಕೆಂಪು ಧ್ವಜ ಹಿಡಿದು ವಿಜಯೋತ್ಸವದೊಂದಿಗೆ ಶೆಡ್ಡುಗಳನ್ನು ಪ್ರವೇಶಿಸಿದರು. ಅಂದು ಅಲ್ಲಿ ಹಬ್ಬದ ವಾತಾವರಣ ಮೂಡಿತ್ತು.

ಈ ಹೋರಾಟಕ್ಕೆ ಸಿಐಟಿಯು, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದ್ದವು. ಮೇ 31 ಕ್ಕೆ ಆರಂಭವಾದ ಹೋರಾಟ ಇದೀಗ ಯಶ ಕಂಡಿತು.

- ಚಂದಪ್ಪ ಹೊಸ್ಕೇರ

ಗಂಗಾವತಿ : ಭೂಗಳ್ಳ ಧಣಿಗಳ ತಾಳಕ್ಕೆ ಕುಣಿತ

ದಲಿತರು, ಬಡವರಿಗೆ ಒದೆತ-ಇದು ಪಿಎಸ್ಐ ಕಿರಣಕುಮಾರ್ ಸ್ಟೈಲ್

ಗಂಗಾವತಿ ಗ್ರಾಮೀಣ ಪೋಲಿಸ್ ಠಾಣೆಗೆ ಪಿ.ಎಸ್.ಐ. ಕಿರಣ್‌ಕುಮಾರ್ ಆಗಮನದೊಂದಿಗೆ ತಾಲ್ಲೂಕಿನ ಬಡವರ ಮೇಲೆ, ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳ ಕೂಲಿಕಾರರ ಮೇಲೆ ದೌರ್ಜನ್ಯಗಳು ಹೆಚ್ಚಾಗಿವೆ. ಪಿ.ಎಸ್.ಐ. ಕಿರಣ್‌ಕುಮಾರ್ ರವರ ಕುಮ್ಮಕ್ಕಿನಿಂದಾಗಿ ಶ್ರೀಮಂತ ಭೂ ಮಾಲೀಕರು ಪರಿಶಿಷ್ಟ ಜಾತಿಗೆ ಸೇರಿದ ಕೂಲಿಕಾರರ ಮೇಲೆ ಹಲ್ಲೆ ಮಾಡುವುದು, ಅವರ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ದಾಖಲು ಮಾಡುವುದು ಹೆಚ್ಚಾಗಿದೆ. ಜಾತಿ ನಿಂದನೆ, ಜಾತಿ ದೌರ್ಜನ್ಯಕ್ಕೆ ಒಳಗಾದ ದಲಿತರು ದೂರು ನೀಡಲು ಗ್ರಾಮೀಣ ಪೋಲೀಸ್ ಠಾಣೆಗೆ ಹೋದರೆ, ಅವರಿಂದ ದೂರನ್ನು ಸ್ವೀಕರಿಸಿ, ದೂರನ್ನು ದಾಖಲು ಮಾಡಿಕೊಳ್ಳುವ ಬದಲಾಗಿ ದೂರ ನೀಡಲು ಬಂದ ದಲಿತರನ್ನೇ ಬೈದು, ಅವರ ಮೇಲೆ ಹಲ್ಲೆ ಮಾಡಿ, ಅವರ ವಿರುದ್ಧವೇ ಸುಳ್ಳು ದೂರುಗಳನ್ನು ದಾಖಲು ಮಾಡಲಾಗುತ್ತದೆ. ತನಗೆ ಉಸ್ತುವಾರಿ ಮಂತ್ರಿ ಇಕ್ಬಾಲ್ ಅನ್ಸಾರಿ ಅವರ ಬೆಂಬಲ ಇದೆ ಎಂದುಕೊಂಡು ಪಿಎಸ್ಐ ಕಿರಣ್‌ಕುಮಾರ್ ಮೆರೆಯುತ್ತಿದ್ದಾನೆ!

ಇತ್ತೀಚೆಗೆ ಗೋನಾಳ ಕ್ಯಾಂಪಿನ ಕೃಷಿ ಕೂಲಿಕಾರರ ಸಂಘದ ಮುಖಂಡ, ಪರಿಶಿಷ್ಟ ಜಾತಿಗೆ ಸೇರಿದ ಅಂಗವಿಕಲ ಬಸವರಾಜ, ಕೂಲಿಕಾರರ ಸಂಘದ ಹುಸೇನಪ್ಪ ಅವರನ್ನು ಕರೆದುಕೊಂಡು, ಜಮೀನ್ದಾರ ಅಮರೇಶಪ್ಪ ಶಿವಪ್ಪ ಗೋನಾಳ ವಿರುದ್ಧ ದೂರು ನೀಡಲು ಗ್ರಾಮೀಣ ಪೋಲೀಸ್ ಠಾಣೆಗೆ ಹೋಗಿದ್ದರು. ಪಿಎಸ್ಐ ಕಿರಣ್‌ಕುಮಾರ್ ಅವರಿಂದ ದೂರನ್ನು ಸ್ವೀಕರಿಸುವ ಬದಲು, ದೂರು ನೀಡಲು ಬಂದವರನ್ನೇ ಅವಾಚ್ಯ ಶಬ್ದಗಳಿಂದ ಬೈದು, ಅಂಗವಿಕಲರಾದ ಬಸವರಾಜನ ಮೇಲೆ ಹಲ್ಲೆ ಮಾಡಿ, ಅವರ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಇವರನ್ನು ಬಿಡಬಾರದೆಂದು ನ್ಯಾಯಾಧೀಶರಿಗೆ ಮನವಿ ಮಾಡಿಕೊಂಡಿದ್ದಾನೆ. ಸುದ್ದಿ ತಿಳಿದು ವಿಚಾರಿಸಲು ಹೋದ ಸಿಐಟಿಯು ಕಾರ್ಮಿಕ ಮುಖಂಡ ಎ.ಹುಲುಗಪ್ಪ ಅವರಿಗೂ ಅವಾಚ್ಯ ಶಬ್ದಗಳಿಂದ ಬೈದು ಕಳುಹಿಸಿದ್ದಾನೆ.

ಅಮರೇಶಪ್ಪನ ಆಮಿಷ: ಹೊಸದಾಗಿ ನೌಕರಿ ಆರಂಭಿಸಿರುವ ಕಿರಣ್ ಕುಮಾರ್ ಆರಂಭದಲ್ಲೇ ಲಂಚ ರುಸುವತ್ತುಗಳಿಗೆ ಕೈವೊಡ್ಡ ತೊಡಗಿದ್ದಾರೆ ಎಂದು ಗಂಗಾವತಿಯಲ್ಲಿ ಜನ ಮಾತನಾಡುತ್ತಿದ್ದಾರೆ. ಗೋನಾಳದ ಅಮರೇಶಪ್ಪನ ಬೆಂಬಲಕ್ಕೆ ಇವರು ನಿಂತಿರುವುದು ಇದಕ್ಕೊಂದು ಪುರಾವೆ. ಕೃಷಿ ಕೂಲಿಕಾರರ ಸಂಘ ಒತ್ತಾಯಿಸುತ್ತಾ ಬಂದಿರುವುದು ಅಮರೇಶಪ್ಪನ ನಿದ್ದೆ ಕೆಡಿಸಿದೆ. ಈತನ ವಿರುದ್ಧ ಧ್ವನಿ ಎತ್ತಿದ ಆತನ ಮನೆಯಲ್ಲಿ ಸಂಬಳದ ಆಳಾಗಿ ದುಡಿಯುತ್ತಿದ್ದ ಪರಿಶಿಷ್ಟ ಜಾತಿಗೆ ಸೇರಿದ ಬಸವರಾಜ ತೊಂಡಿಹಾಳ್ ಎಂಬಾತನನ್ನು ಕೊಲೆ ಮಾಡಿಸಲು ಈ ಅಮರೇಶಪ್ಪ ಹೇಸಲಿಲ್ಲ. ಇಂತಹ ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗೆ ಪಿಎಸ್ಐ



ದಲಿತರು ದೂರು ನಿರಾಕರಿಸಿ ಅವರ ಮೇಲೆ ಹಲ್ಲೆ ಮಾಡುವ ಪೊಲೀಸ್ ಕಿರಣಕುಮಾರ್ ವಿರುದ್ಧ ಪ್ರತಿಭಟನೆ


ಅಮರೇಶಪ್ಪನ ಪುರಾಣ ಗೊತ್ತಿಲ್ಲದವರಿಲ್ಲ. ಗೋನಾಳ ಕ್ಯಾಂಪಿನ ಸರ್ಕಾರಿ ನಿವೇಶನಗಳನ್ನು ಬಡ ಕೂಲಿಕಾರರಿಗೆ ಮಾರಾಟ ಮಾಡಿ ದುಡ್ಡು ಮಾಡಿರುವ ಕುಳ ಈತ. ಇದನ್ನು ಪ್ರಶ್ನಿಸಿದ ದಲಿತ ಕೂಲಿಕಾರರ ಮೇಲೆ ಬಾಡಿಗೆ ಗುಂಡಾಗಳಿಂದ ಹಲ್ಲೆ ಮಾಡಿಸಿ, ಅವರ ಗುಡಿಸಲು ಧ್ವಂಸ ಮಾಡಿಸಿ ದಲಿತ ಮಹಿಳೆಯರನ್ನು ಎಳೆದಾಡಿ ದೌರ್ಜನ್ಯ ವೆಸಗಿದ ದುಶ್ಯಾಸನ ಈತ. ಇದೇ ಅಮರೇಶಪ್ಪ ತನ್ನ ಜಮೀನಿನ ಅಕ್ಕಪಕ್ಕದ ಹತ್ತಾರು ಎಕರೆ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾನೆ. ಈತ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಭೂ ಹೀನ ಕೃಷಿ ಕೂಲಿಕಾರರಿಗೆ ನೀಡಬೇಕೆಂದು ಕರ್ನಾಟಕ ಪ್ರಾಂತ ಕಿರಣ್‌ಕುಮಾರ್ ಬೆಂಬಲ ನೀಡುತ್ತಿದ್ದಾನೆ.

ಬೃಹತ್ ಪ್ರತಿಭಟನಾ ಸಭೆ: ಪಿಎಸ್ಐ ಕಿರಣ್‌ಕುಮಾರ್‌ನ ಈ ಉದ್ಧಟತನದಿಂದಾಗಿ ತಾಲ್ಲೂಕಿನಲ್ಲಿ ದಲಿತರಿಗೆ ರಕ್ಷಣೆ ಇಲ್ಲದಂತಾಗಿದೆ. ಗಾಳಮ್ಮಗುಡಿ ಕ್ಯಾಂಪಿನ ನಿವಾಸಿ, ಪರಿಶಿಷ್ಟ ಜಾತಿಗೆ ಸೇರಿದ ತಿಮ್ಮಪ್ಪ ಮತ್ತು ಆತನ ಸಹೋದರ ನ್ಯಾಯಾಲಯದ ಆದೇಶದ ಪ್ರಕಾರ ರಕ್ಷಣೆ ಕೋರಲು ಪೋಲೀಸ್ ಠಾಣೆಗೆ ಹೋದಾಗ ಅವರನ್ನೇ ಬೈದು, ಜಾತಿ ನಿಂದನೆ ಮಾಡಿ, ಅವರನ್ನು ಹೊಡೆದು ಹಲ್ಲೆ ಮಾಡಿ ಕಳುಹಿಸಿದ್ದಾನೆ. ಹೊಸಕೇರಾ ಡಗ್ಗಿ ಗ್ರಾಮದ ದಲಿತ ಕೂಲಿಕಾರ ಮರಿದೇವಪ್ಪ ಮಾದಿಗ, ತನ್ನ ಮೇಲೆ ಹಲ್ಲೆ ಮಾಡಿದವರ ವಿರುದ್ಧ ದೂರು ನೀಡಲು ಹೋದಾಗ ಇದೇ ಕಿರಣ್ ಕುಮಾರ್ ದೂರನ್ನು ದಾಖಲು ಮಾಡದೆ ಬೈದು, ಬೆದರಿಸಿ ಕಳುಹಿಸಿದ್ದಾನೆ.

ಈ ಹಿನ್ನೆಲೆಯಲ್ಲಿ ಪಿಎಸ್ಐ ಕಿರಣ್‌ಕುಮಾರ್ ವಿರುದ್ಧ ಕ್ರಮ ಜರಗಿಸಲು ಒತ್ತಾಯಿಸಿ ಸಿಪಿಐ(ಎಂ) ಜಿಲ್ಲಾ ಸಮಿತಿ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಹತ್ತಾರು ಹಳ್ಳಿಗಳಿಂದ ಸಾವಿರಾರು ಜನ ಭಾಗವಹಿಸಿದ್ದರು. ನಗರದ ಸಿ.ಬಿ.ಎಸ್. ವೃತ್ತದಿಂದ ಆರಂಭವಾದ ಮೆರವಣಿಗೆಯು ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪೋಲೀಸ್ ಠಾಣೆಗೆ ಮುತ್ತಿಗೆ ಹಾಕಿತು. ದಾರಿಯುದ್ದಕ್ಕೂ ಪ್ರತಿಭಟನಾಕಾರರು ಪಿಎಸ್ಐ ಕಿರಣ್‌ಕುಮಾರ್ ವಿರುದ್ಧ ಘೋಷಣೆ ಕೂಗಿದರು.

ಅನಂತರ ಪ್ರವಾಸಿ ಮಂದಿರದ ಮುಂಭಾಗದಲ್ಲಿ ಪ್ರತಿಭಟನಾ ಸಭೆಯನ್ನು ಏರ್ಪಡಿಸಲಾಗಿತ್ತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ, ರಾಜ್ಯ ಸಮಿತಿ ಸದಸ್ಯರಾದ ಯು.ಬಸವರಾಜು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಆರ್.ಕೆ. ದೇಸಾಯಿ, ವಕೀಲರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅನಂತರ ಪಿಎಸ್ಐ ಕಿರಣ್‌ಕುಮಾರ್ ಮೇಲೆ ಕ್ರಮ ಜರುಗಿಸುವಂತೆ ಒತ್ತಾಯಿಸುವ ಮನವಿಯನ್ನು ಪೋಲೀಸ್ ವರಿಷ್ಠಾಧಿಕಾರಿಗೆ ಸಲ್ಲಿಸಲಾಯಿತು.

ವರದಿ : **ಜಿ.ನಾಗರಾಜ್**



ಜಯ

ಪರಮಾಣು ಶಕ್ತಿಯನ್ನು ಬಳಸಿಕೊಳ್ಳುವ ತಂತ್ರಜ್ಞಾನಗಳು

ಪರಮಾಣು ಶಕ್ತಿಯಿಂದ ವಿದ್ಯುತ್ ತಯಾರಿಸುವುದಕ್ಕೆ ಅಮೇರಿಕಾದಿಂದ ಅತ್ಯುತ್ತಮ ತಂತ್ರಜ್ಞಾನ ಸಿಗುತ್ತದೆಂದು, ಇದಕ್ಕೆ ಎಡಪಕ್ಷಗಳು ಅಡ್ಡಬರುತ್ತಿವೆಯೆಂದು ಪ್ರಧಾನಮಂತ್ರಿಯವರು ಸೇರಿದಂತೆ ದೊಡ್ಡ ಮಾಧ್ಯಮಗಳು ಮಹಡಿ ಮೇಲೆ ನಿಂತು ಬೊಬ್ಬೆ ಹಾಕುತ್ತಿವೆ. ಪ್ರಸ್ತುತದಲ್ಲಿ, ಪರಮಾಣು ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಪ್ರಮುಖವಾಗಿ ಮೂರು ಹಂತಗಳಲ್ಲಿ ಉತ್ಪಾದಿಸುವ ಸಾಧ್ಯತೆಗಳನ್ನು



ಕಂಡುಹಿಡಿಯಲಾಗಿದೆ.

ಮೊದಲನೆಯದಾಗಿ, ಭಾರ ಜಲ ವಿದ್ಯುತ್ ಸ್ಥಾವರಗಳು ((Pressurized Heavy Water Reactors). ನಿಸರ್ಗದಲ್ಲಿ ದೊರೆಯುವ ಯುರೇನಿಯಂ ವಿಕಿರಣ ವಸ್ತುವನ್ನು ಭಾರ ಜಲ ವಿದ್ಯುತ್ ಸ್ಥಾವರಗಳಲ್ಲಿ ಇಂಧನವಾಗಿ ಬಳಸಲಾಗುತ್ತದೆ. ಬಳಸಿದ ಇಂಧನದಿಂದ ಹೊರಬರುವ ತ್ಯಾಜ್ಯ ಇಂಧನವನ್ನು ಮತ್ತೆ ಪುನರ್-ಸಂಸ್ಕರಣೆ ಮಾಡಿ ಪ್ಲುಟೋನಿಯಂ ಎಂಬ ವಿಕಿರಣ ವಸ್ತುವನ್ನು ಉತ್ಪಾದಿಸಲಾಗುತ್ತದೆ. ಈ ತಂತ್ರಜ್ಞಾನವು ಜಗತ್ತಿನ ಎಲ್ಲೆಡೆ ಜನಪ್ರಿಯವಾಗಿದ್ದು ಬಹುಮಟ್ಟಿಗೆ ಈ ವಿಧಾನವನ್ನು ಕರಗತ ಮಾಡಿಕೊಳ್ಳಲಾಗಿದೆ. ಭಾರತವು 15 ಭಾರ ಜಲ ವಿದ್ಯುತ್ ಸ್ಥಾವರಗಳನ್ನು ಸ್ವತಂತ್ರವಾಗಿ ನಿರ್ಮಿಸಿದೆ. ಇದರೊಂದಿಗೆ ರಷ್ಯಾ, ಅಮೇರಿಕಾ ಮತ್ತು ಕೆನಡಾದಿಂದ 6 ಸ್ಥಾವರಗಳನ್ನು ಆಮದು ಮಾಡಿಕೊಂಡಿದೆ.


ಎರಡನೆ ಹಂತದಲ್ಲಿ, ಕ್ಷಿಪ್ರ ಪ್ರಜನಕ ವಿದ್ಯುತ್ ಸ್ಥಾವರಗಳು (Fast breeder Reactors). ಈ ರಿಯಾಕ್ಟರುಗಳು ಬಹುತೇಕ ವೇಗವಾದ ನ್ಯೂಟ್ರಾನುಗಳ ನೆರವಿನಿಂದಲೇ ಕೆಲಸ ಮಾಡುತ್ತವೆ. ಹಾಗಾಗಿ ತಾವು ಇಂಧನವಾಗಿ ಉಪಯೋಗಿಸಿಕೊಳ್ಳುವುದಕ್ಕಿಂತ ಹೆಚ್ಚಿನ ವಿದಲನೀಯ ವಸ್ತುಗಳನ್ನು ಉತ್ಪಾದಿಸುತ್ತವೆ. ಯುರೇನಿಯಂ ಮತ್ತು ಮೊದಲ ಹಂತದಲ್ಲಿ ಉತ್ಪತ್ತಿಯಾಗುವ ಪ್ಲುಟೋನಿಯಂ ನ್ನು ಆಕ್ಸೈಡ್ ರೂಪದಲ್ಲಿ ಇಂಧನವಾಗಿ ಈ ಸ್ಥಾವರಗಳು ಉಪಯೋಗಿಸಿಕೊಳ್ಳುತ್ತವೆ. ಯುರೇನಿಯಂ ಮತ್ತು ಪ್ಲುಟೋನಿಯಂ ಆಕ್ಸೈಡ್‌ಗಳ ಇಂಧನದ ಪೆಲೆಟ್‌ಗಳ ಸುತ್ತಲೂ ಥೋರಿಯಂ ಎಂಬ ವಸ್ತುವನ್ನು ಹೊದಿಕೆಯಂತೆ ಬಳಸಲಾಗುತ್ತದೆ. ಈ ಸ್ಥಾವರಗಳಲ್ಲಿ ಥೋರಿಯಂನ್ನು ಯುರೇನಿಯಂ-233 ಎಂಬ



ವಸ್ತುವಾಗಿ ಪರಿವರ್ತಿಸಲಾಗುತ್ತದೆ.

ಮೂರನೆಯ ಹಂತದಲ್ಲಿ, ಪ್ರಜನಕ ವಿದ್ಯುತ್ ಸ್ಥಾವರಗಳು (Breeder Reactors) ಥೋರಿಯಂ ಮತ್ತು ಯುರೇನಿಯಂ-233 ಗಳನ್ನು ಇಂಧನವಾಗಿ ಬಳಸುತ್ತವೆ. ನಮ್ಮ ದೇಶದಲ್ಲಿ ಯುರೇನಿಯಂ ನಿಕ್ಷೇಪವು ತುಂಬಾ ಕಡಿಮೆ ಪ್ರಮಾಣದಲ್ಲಿರುವುದರಿಂದ ಯುರೇನಿಯಂ ಪೂರೈಕೆಗಾಗಿ ಇತರೆ ದೇಶಗಳನ್ನು ಅವಲಂಬಿಸಬೇಕಾಗಿದೆ. ಜೊತೆಗೆ ನಮ್ಮ ರಾಷ್ಟ್ರವೂ ಒಳಗೊಂಡಂತೆ ಜಾಗತಿಕ ಮಟ್ಟದಲ್ಲಿ ಪರಮಾಣು ಸಂಶೋಧನೆಯು ಇನ್ನೂ ಮೊದಲ ಹಂತದಲ್ಲಿಯೇ ಇದೆ. ನಮ್ಮ ದೇಶದ ಪರಮಾಣು ಸಂಶೋಧನೆಯು ಮೂರನೇ ಹಂತಕ್ಕೆ ದಾಪುಗಾಲಿಟ್ಟರೆ, ನಮ್ಮಲ್ಲಿಯೇ ದೊರಕುವ ಥೋರಿಯಂನ್ನು ಇಂಧನವಾಗಿ ಬಳಸಿಕೊಳ್ಳಬಹುದು. ಇದರಿಂದ ಯುರೇನಿಯಂಗಾಗಿ ಇತರೆ ದೇಶಗಳನ್ನು ಗೋಗರೆಯುವುದು ತಪ್ಪುತ್ತದೆ.

ಆದರೆ ಮೂರನೆ ಹಂತದ ಪ್ರಜನಕ ಸ್ಥಾವರಗಳ ಸಂಶೋಧನೆಯಲ್ಲಿ ಅಮೇರಿಕಾಗಿಂತ ಭಾರತವೇ ಮುಂದಿದೆ. ಸದ್ಯಕ್ಕೆ ಭಾರತಕ್ಕೆ ತಂತ್ರಜ್ಞಾನಕ್ಕಿಂತ ಇಂಧನದ ಅವಶ್ಯಕತೆಯಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ತಂತ್ರಜ್ಞಾನ ದೊರೆಯುತ್ತದೆಂಬ ನೆಪವೊಡ್ಡಿ ಭಾರತದ ಮೇಲೆ ಅಮೇರಿಕಾ ಸವಾರಿ ಮಾಡಲು ಅವಕಾಶ ಮಾಡಿಕೊಡುತ್ತಿರುವವರು ಯಾರು?



ಇರಾಕ್, ವಿಯೆಟ್ನಾಂ ದೇಶಗಳ ಮೇಲೆ ಭೀಕರ ಬಾಂಬುಗಳ ಧಾಳಿ ನಡೆಸಲು ಬಳಸಲಾದ ಹಡಗುಗಳು ಭಾರತದ ಕರಾವಳಿಗೆ ಬರುತ್ತಿವೆ. ಅಷ್ಟೇ ಅಲ್ಲ ಭಾರತದ ನೌಕಾಪಡೆ ಅಮೆರಿಕಾ ಮತ್ತಿತರ ದೇಶಗಳ ನೌಕಾಪಡೆಗಳೊಂದಿಗೆ ಜಂಟಿ ಕಸರತ್ತು ನಡೆಸುತ್ತಿದೆ. ಭಾರತಕ್ಕೆ ಇದು ಬೇಕೆ?

ಏನಿದು!! ಅಣುಬಂಧದ ಜೊತೆಗೇ ಜಂಟಿ ಕವಾಯತು

ಕೇಂದ್ರ ಯುಪಿಎ ಸರ್ಕಾರವು ಅಮೇರಿಕಾದೊಂದಿಗೆ ಮಾಡಿಕೊಳ್ಳಲು ಹೊರಟಿರುವ ಅಣು ಒಪ್ಪಂದ ಎಂತಹ ಅಪಾಯಕಾರಿ ಎಂಬುದು ಸಾರ್ವಜನಿಕರಿಗೆ ಒಂದೊಂದೇ ತೆರೆದುಕೊಳ್ಳುತ್ತಾ ಹೋಗುತ್ತಿದೆ. ಈ ರೀತಿಯಾಗಿ ಅಮೇರಿಕದೊಂದಿಗೆ ಮಿಲಿಟರಿ ಸಹಕಾರವನ್ನು ಬಲಗೊಳಿಸುವ ಪ್ರಕ್ರಿಯೆ 2005ರಲ್ಲಿ ಗಟ್ಟಿಯಾಯಿತು. ಜೂನ್ 2005ರಲ್ಲಿ ಯುಪಿಎ ಸರ್ಕಾರವು ಅಮೇರಿಕದೊಂದಿಗಿನ ರಕ್ಷಣಾ ಚೌಕಟ್ಟು ಒಪ್ಪಂದಕ್ಕೆ ಸಹಿ ಹಾಕುವುದರೊಂದಿಗೆ ಈ ಅಧ್ಯಾಯದ ಹೊಸ ಹಂತ ಆರಂಭವಾಯಿತು. ವಾಸ್ತವವಾಗಿ ಇದು ನರಸಿಂಹರಾವ್ ಸರ್ಕಾರ ಒಪ್ಪಿದ್ದ ಒಪ್ಪಂದದ ಮುಂದುವರಿಕೆ, ರಾಯರ ಸರ್ಕಾರದ ನಂತರ ಬಂದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಈ ವಿಚಾರವನ್ನು ಮತ್ತಷ್ಟು ಮುಂದಕ್ಕೊಯ್ದಿತ್ತು.

ಇಂಥದ್ದೊಂದು ಇತಿಹಾಸದಲ್ಲೇ ಇಲ್ಲ

ಇಂಥದ್ದೊಂದು ಒಪ್ಪಂದಕ್ಕೆ ಭಾರತ ಇತಿಹಾಸದಲ್ಲೆಂದೂ ಸಹಿ ಮಾಡಿರಲಿಲ್ಲ. ಕೆಲವರು 1971 ಭಾರತ, ಸೋವಿಯತ್ ಒಕ್ಕೂಟಗಳ ನಡುವಿನ 'ಸ್ನೇಹ ಮತ್ತು ಸಹಕಾರ ಒಪ್ಪಂದ' ವನ್ನು ಇದಕ್ಕೆ ಹೋಲಿಸಿದರೂ ಸಹ ಇವೆರಡರ ನಡುವೆ ಯಾವ ಹೋಲಿಕೆಯೂ ಇಲ್ಲ.

ಪ್ರಸಕ್ತ ಅಮೇರಿಕದೊಂದಿಗಿನ ಅಣು ಒಪ್ಪಂದದ ನಾಲ್ಕು ಅಂಶಗಳು ಅಮೇರಿಕಾ ದೇಶ ಹೆಣೆದಿರುವ ಜಾಗತಿಕ ವ್ಯೂಹದೊಳಕ್ಕೆ ಭಾರತವನ್ನು ಸೆಳೆದುಕೊಳ್ಳುವಂತದ್ದಾಗಿದೆ.

ಅಮೇರಿಕಾದ ಬಹುರಾಷ್ಟ್ರೀಯ ಕಾರ್ಯಾಚರಣೆಗೆ ಅಂದರೆ ವಿವಿಧ ದೇಶಗಳ ಮೇಲೆ ಯುದ್ಧಕ್ಕೆ ಆಕ್ರಮಣಕ್ಕೆ ಏರಿಹೋಗುವ ಅಮೇರಿಕಾ ಮಿಲಿಟರಿಯೊಂದಿಗೆ ಭಾರತದ ಮಿಲಿಟರಿಯೂ ಜೊತೆಗೂಡಬೇಕು. ಅಂದರೆ ವಿಶ್ವಸಂಸ್ಥೆಯ ಒಪ್ಪಿಗೆ ಇಲ್ಲದೆಯೂ ಅಮೇರಿಕಾ ಮೂರನೇ ದೇಶವೊಂದರ ಮೇಲೆ ಯುದ್ಧ ನಡೆಸಿದರೆ ಭಾರತ ಅದರಲ್ಲಿ ಭಾಗಿಯಾಗಬೇಕು.


ಕ್ಷಿಪಣಿ ತಂತ್ರಜ್ಞಾನದ ಕುರಿತ ನಿರ್ಮಾಣ ಸಹಯೋಗವನ್ನು ವಿಸ್ತರಿಸಲಾಗುವುದು ಎಂದು ಜಂಟಿ ಒಪ್ಪಂದ ಹೇಳುತ್ತದೆ. ಅಮೇರಿಕವು ಶೀಲ್ಡ್ ರಕ್ಷಣಾ ಕ್ಷಿಪಣಿಯನ್ನು ರೂಪಿಸುತ್ತಿದೆ. ಜಪಾನ್, ತೈವಾನ್‌ಗಳು ಥೀಯೇಟರ್ ಕ್ಷಿಪಣಿ ವ್ಯವಸ್ಥೆಯ ಅಂಗವಾಗಿವೆ. ಈಗ ಅಮೇರಿಕವು ಭಾರತವನ್ನು ತನ್ನ ಕ್ಷಿಪಣಿ ರಕ್ಷಣಾ ವ್ಯವಸ್ಥೆಗೆ ಸೇರಿಸಿಕೊಳ್ಳಲು ಬಯಸಿದೆ ಮತ್ತು ಪೆಟ್ರಿಯಾಟ್ ಕ್ಷಿಪಣಿ ತಂತ್ರಜ್ಞಾನವನ್ನು ನೀಡಲು ಬಯಸಿದೆ.

ಕಡ್ಡಿಯನ್ನು ನಮ್ಮಕೈಗೆ ಕೊಟ್ಟು, ಗುಡ್ಡವನ್ನು ತಲೆಯ ಮೇಲೆ ಹೊರೆಸುವ ತಂತ್ರ ಅಮೇರಿಕದ್ದು.

ಜಂಟಿ ಕವಾಯತು

ಅಮೇರಿಕಾ ಭಾರತ ಅಣು ಒಪ್ಪಂದದ ಮೂಲಕ ಭಾರತ ಮತ್ತು ಭಾರತದ ಜನತೆ ಎಂತೆಂತಹ ಸಂಕಷ್ಟಗಳಲ್ಲಿ ಮುಂದೆ ಸಿಲುಕಬೇಕಾಗಿ ಬರಲಿದೆ ಎನ್ನುವುದರ ಕಲ್ಪನೆ ಇನ್ನೂ ಹೆಚ್ಚಿನ ಜನಕ್ಕೆ ಸಿಗುತ್ತಲೇ ಇಲ್ಲ.

ಭಾರತ ಮತ್ತು ದುಷ್ಟ ಅಮೇರಿಕಾಗಳು ಹೀಗೆ ಹತ್ತಿರ ಹತ್ತಿರವಾಗಬೇಕೆನ್ನುವ ಯತ್ನಗಳನ್ನು ಅಮೇರಿಕಾ



ಮಾಡುತ್ತಿರುವಾಗಲೇ ಈ ನಿಟ್ಟಿನ ಮತ್ತೊಂದು ತಂತ್ರವೂ ಕಾರ್ಯಾಚರಣೆಯಲ್ಲಿದೆ.

ಇದೇ ಪ್ರಪ್ರಥಮ ಬಾರಿಗೆ ಭಾರತದ ನೌಕಾಪಡೆಯು ಬಂಗಾಳಕೊಲ್ಲಿಯಲ್ಲಿ ಅಮೇರಿಕಾ, ಆಸ್ಟ್ರೇಲಿಯಾ, ಜಪಾನ್ ಮತ್ತು ಸಿಂಗಪುರಗಳ ನೌಕಾಪಡೆಗಳೊಂದಿಗೆ ಜಂಟಿ ಕವಾಯತು ನಡೆಸಲಿದೆ. ಸೆಪ್ಟೆಂಬರ್ 4ರಿಂದ 8ರವರೆಗೆ ಈ ಕಾರ್ಯಾಚರಣೆ ನಡೆಯುತ್ತಲಿದೆ..

ಭಾರತದ ಪಶ್ಚಿಮ ಕರಾವಳಿಯಲ್ಲಿ ಅಮೇರಿಕಾದ ನೌಕಾ ಪಡೆಯೊಂದಿಗೆ ಭಾರತದ ನೌಕಾಪಡೆ ಪ್ರತಿವರ್ಷ ನಡೆಸುತ್ತಿದ್ದ ಜಂಟಿ ಕಾರ್ಯಾಚರಣೆಗಳು ಈಗ ಬಂಗಾಳ ಕೊಲ್ಲಿಗೂ ವಿಸ್ತರಿಸಿಕೊಂಡಿವೆ.

ಇರಾಕ್‌ಗೆ 'ಸ್ವಾತಂತ್ರ್ಯ' ಕೊಡಿಸಿದ ಹಡಗು

ಈ ಜಂಟಿ ಕವಾಯತಿಗೆ ಮೊನ್ನೆ ಮೊನ್ನೆ ತಾನೇ ಭಾರತದ ಸಮುದ್ರ ತೀರಕ್ಕೆ ಭೇಟಿ ನೀಡಿ ಹೋದ 'ನಿಮಿಟ್ಜ್' ಹಡಗು, 'ಕಿಟ್ಟಿ ಹಾಕ್' ಎಂಬ ಹಡಗುಗಳು ಬರುತ್ತಿವೆ. ಅವು ಬಂದರೆ ನಮಗೇನು ಎನ್ನಬಹುದು ಕೆಲವರು. ಈ ಹಡಗುಗಳ ಐತಿಹಾಸ ತಿಳಿದವರು ಹಾಗೆನ್ನಲಾರರು. ಏಕೆಂದರೆ ನಿಮಿಟ್ಜ್ ಎಂಬ ಹಡಗು 2003ರಲ್ಲಿ 'ಆಪರೇಷನ್ ಇರಾಕಿ ಫ್ರೀಡಂ' ಎಂಬ ಇರಾಕ್‌ನ ಮೇಲೆ ಬಾಂಬ್ ಸುರಿಯುವ ಅಮೇರಿಕಾದ ಭೀಕರ ಧಾಳಿಗೆ ಆಧಾರವಾಗಿ ಬಳಕೆಯಾಗಿತ್ತು. ಈ ಹಡಗಿನ ಮೇಲಿಂದಲೇ ಇರಾಕಿನ ಸಾವಿರಾರು ಅಮಾಯಕ ಜನರನ್ನು ಕೊಂದ ಕ್ಷಿಪಣಿಗಳನ್ನು ಹಾರಿಸಲಾಗಿತ್ತು. ಈ ಹಡಗಿನಲ್ಲಿ ಅಣ್ವಸ್ತ್ರಗಳೂ ಸಹ ಇವೆ. ಈ ಹಡಗು ಈಗ ಇರಾನನ್ನು ಬೆದರಿಸಲು ಪರ್ಷಿಯನ್ ಕೊಲ್ಲಿಯಲ್ಲಿ ನಿಂತಿದೆ.

ಕುಖ್ಯಾತ ಇತಿಹಾಸದ ಹಡಗು

'ಕಿಟ್ಟಿಹಾಕ್' ಎಂಬುದು ಯುದ್ಧ ವಿಮಾನಗಳನ್ನು ಹೊತ್ತೊಯ್ಯುವ ಹಡಗು. ಅಮೇರಿಕಾವು ವಿಯೆಟ್ನಾಂ ದೇಶದ ಮೇಲೆ ನಡೆಸಿದ ಅತ್ಯಂತ ಕುಖ್ಯಾತ ಯುದ್ಧದಲ್ಲಿ ಈ ಹಡಗು ಬಹಳ ದೀರ್ಘಕಾಲ ಬಳಕೆಯಾಗಿತ್ತು. ಈ ಹಡಗು ಅಮೇರಿಕಾದ ನೌಕಾಪಡೆಯ ಏಳನೇ ಪಡೆಗೆ ಸೇರಿದೆ. ಈಗಿನ ಬಾಂಗ್ಲಾದೇಶವು ಪಾಕಿಸ್ತಾನದ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿದ್ದಾಗ ಭಾರತ ಬಾಂಗ್ಲಾದೇಶದ ಬೆಂಬಲಕ್ಕಿತ್ತು ಎಂಬುದು ನಮಗೆಲ್ಲಾ ಗೊತ್ತು. ಆಗ ಈ ಅಮೇರಿಕಾ ಏನು ಮಾಡಿತ್ತು ಗೊತ್ತೇ? ಇದೇ ಈ ಅಮೇರಿಕಾದ ನೌಕಾ ಸೇನೆಯ 7ನೇ ಪಡೆಯನ್ನು ಬಂಗಾಳಕೊಲ್ಲಿಗೆ ಕಳಿಸಿತ್ತು. ಯಾಕೆ? ಭಾರತವನ್ನು ಬೆದರಿಸಲು. ಇಂತಹ ಹಡಗಿಗೆ ಭಾರತವು ತನ್ನ ಕರಾವಳಿಯಲ್ಲಿ ಲಂಗರು ಹಾಕಲು, ಅವಕಾಶ ನೀಡಬೇಕಿದೆ. ಈ ಹಡಗಿನ ಮೇಲೆ ನಡೆಯುವ ವಿವಿಧ ಕಸರತ್ತುಗಳಲ್ಲಿ ತಾನೂ ಕೈಜೋಡಿಸಬೇಕಿದೆ.

ಭಾರತದ ಆಳುವ ಪಕ್ಷ, ಸರಕಾರಗಳು ತಮ್ಮ ದೇಶದ ಸುದೀರ್ಘ ಇತಿಹಾಸವಿರುವ ಅಲಿಪ್ತ ನೀತಿಯನ್ನು ಮರೆತಿರಬಹುದು. ಆದರೆ ಭಾರತದ ಜನ ಅದನ್ನು ಮರೆತಿಲ್ಲ. ಸ್ವಾಭಿಮಾನಹೀನರಾಗಿ ಈ ಹಡಗುಗಳ ಸ್ವಾಗತಕ್ಕೆ ಕೈತೋರಿ ನಿಲ್ಲುವುದಿಲ್ಲ. 'ಹಮಾರಾ ನಾಮ್ ತುಮಾರಾ ನಾಮ್ ವಿಯೆಟ್ನಾಂ ವಿಯೆಟ್ನಾಂ' ಎಂದ ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆ, ವಿಯೆಟ್ನಾಂ ಜನದ ಕೆಚ್ಚೆದೆಯ ಹೋರಾಟಕ್ಕೆ ನೀಡಿದ ಆ ಬೆಂಬಲ ಜನರ ಮನದಲ್ಲಿ ಇನ್ನೂ ಅನುರಣಿಸುತ್ತಿದೆ.

ಇಂತಹ ಜನ ಪರಂಪರೆಯ ನೈಜ ವಾರಸುದಾರರಾದ ಎಡಪಕ್ಷಗಳು ಹಾಲಿ ಜಂಟಿ ಕವಾಯತುಗಳನ್ನು ಖಂಡಿಸಿ ಬೃಹತ್ ಆಂದೋಲನ ರೂಪಿಸಿವೆ. ಭಾರತದ ಬಂಗಾಳಕೊಲ್ಲಿಯ ಸುದೀರ್ಘ ಕಡಲ ದಂಡೆಯಲ್ಲಿ ಸಾಗುವ ಎರಡು ಜಾಥಾಗಳನ್ನು ಸಂಘಟಿಸುತ್ತಿವೆ.

ಕೋಲ್ಕತ್ತಾದಿಂದ ಮತ್ತು ಇತ್ತ ಕಡೆ ಚೆನ್ನೈನಿಂದ ಎರಡು ಜಾಥಾಗಳು ಹೊರಟು ನಡುವಿನ ವಿಶಾಖಪಟ್ಟಣವನ್ನು ಸೇರಲಿವೆ. ಸೆಪ್ಟೆಂಬರ್ 4ರಿಂದ 8ರವರೆಗೆ ನಡೆಯುವ ಈ ಜಾಥಾಗಳಲ್ಲಿ ಕೋಲ್ಕೊತ್ತಾ ಜಾಥಾವನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಚೆನ್ನೈ ಜಾಥಾಗಳಿಗೆ ಸಿಪಿಐ ಪ್ರಧಾನ ಕಾರ್ಯದರ್ಶಿ ಎಬಿ ಬರ್ಧನ್ ನೇತೃತ್ವ ವಹಿಸಿ ಸ್ಪೂರ್ತಿ ತುಂಬಲಿದ್ದಾರೆ.

ಸೆಪ್ಟೆಂಬರ್ 4ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗೆ ತೀವ್ರ ಸಿದ್ಧತೆಗಳು ನಡೆದಿವೆ. ಜಾಥಾ ಸಂಚರಿಸುವ ಹಾದಿಗುಂಟ ವ್ಯಾಪಕ ಪ್ರತಿಭಟನೆಗೆ ಜನ ಸಜ್ಜಾಗಿದ್ದಾರೆ.

ಸಮನ್ವಯ ಸಮಿತಿಯಲ್ಲಿ ಅಂತಿಮಗೊಳಿಸಿದ್ದೇನು?

ಎಡಪಕ್ಷಗಳು ಕೆಲವು ಆಕ್ಷೇಪಗಳನ್ನು ಎತ್ತಿದ್ದ ಹಿನ್ನೆಲೆಯಲ್ಲಿ ಆ ಪ್ರಶ್ನೆಗಳ ಬಗ್ಗೆ ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲಾಗಿದೆ.

1. ಈ ಸಮಿತಿಯ ಸ್ವರೂಪವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು. ದ್ವಿಪಕ್ಷೀಯ ಒಪ್ಪಂದದ ವಿವಿಧ ವಿಷಯಗಳನ್ನು ಸಮಿತಿಯು ಪರಿಶೀಲಿಸಲಿದೆ.
2. 123 ಒಪ್ಪಂದದ ಮೇಲೆ ಹೈಡ್ ಕಾಯ್ದೆ (ಆಕ್ಟ್) ಪರಿಣಾಮಗಳು ಮತ್ತು ಪರಮಾಣು ಕ್ಷೇತ್ರದಲ್ಲಿ ಸ್ವಾವಲಂಬನೆ, ವಿದೇಶಾಂಗ ನೀತಿ ಮತ್ತು ರಕ್ಷಣಾ ಸಹಕಾರದ ಮೇಲೆ ಪರಮಾಣು ಒಪ್ಪಂದದ ಪರಿಣಾಮಗಳನ್ನು ವಿವರವಾಗಿ ಪರಿಶೀಲಿಸುವುದು.
3. ಸಮಿತಿಯು ಕಂಡುಕೊಂಡ ಅಂಶಗಳನ್ನು ಪರಿಗಣಿಸಿ ಈ ಒಪ್ಪಂದದ ಕಾರ್ಯಾಚರಣೆಯ ನಡೆಯಲಿದೆ.

ಇವು ಯುಪಿಎ ಮತ್ತು ಎಡಪಕ್ಷಗಳು ಸಮನ್ವಯ ಸಮಿತಿಯಲ್ಲಿ ಕೈಗೊಳ್ಳಲಾದ ನಿರ್ಣಯ.

ಹೈದರಾಬಾದ್ ಮತ್ತೆ ತಲ್ಲಣ

ಮತ್ತೆ ಹೈದರಾಬಾದ್ ಭಯೋತ್ಪಾದಕರ ಪ್ರಚೋದನಕಾರಿ ಧಾಳಿಗೆ ಗುರಿಯಾಗಿದೆ. ಅಗಸ್ಟ್ 25ರಂದು ನಡೆದ ಎರಡು ಸ್ಫೋಟಗಳು 40ಕ್ಕೂ ಹೆಚ್ಚು ಮಂದಿಯ ಬಲಿ ತೆಗೆದುಕೊಂಡಿವೆ. 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಅದೃಷ್ಟವಶಾತ್, ಇನ್ನೆರಡು ಕಡೆ, ಅದೂ ಜನಸಂದಣಿಯ ಸ್ಥಳಗಳಲ್ಲಿ ಇಟ್ಟ ಬಾಂಬುಗಳು ಸ್ಫೋಟಗೊಳ್ಳದೆ ಇನ್ನಷ್ಟು ಪ್ರಾಣಹಾನಿ ತಪ್ಪಿದೆ. ಬಹುಶಃ ಭಯೋತ್ಪಾದಕರು ಸರಣಿ ಸ್ಫೋಟದ ಯೋಜನೆ ಹಾಕಿದ್ದರು.

ಇದಕ್ಕೆ ಸರಿಯಾಗಿ ನೂರು ದಿನಗಳ ಹಿಂದೆ ಈ ನಗರದ ಪ್ರಸಿದ್ಧ ಚಾರ್‌ಮಿನಾರ್ ಬಳಿಯ ಮಕ್ಕಾ ಮಸೀದಿಯಲ್ಲಿ ಭಯೋತ್ಪಾದಕ ಧಾಳಿ ನಡೆದು ಇದೇ ರೀತಿ ಮುಗ್ಧ ಜನರ ಬಲಿ ತಗೊಂಡಿತ್ತು. ಹೈದರಾಬಾದ್ ಈಗ ಭಯೋತ್ಪಾದಕರ ಚಟುವಟಿಕೆಗಳ ತಾಣವಾಗಿರುವಂತೆ ಕಾಣುತ್ತಿದೆ. ಇಲ್ಲಿ ಇನ್ನಷ್ಟು ಭಯೋತ್ಪಾದಕ ಧಾಳಿಗಳು ಸಂಭವಿಸಬಹುದು ಎಂದು ಇಂಟೆಲಿಜೆನ್ಸ್ ಬ್ಯೂರೋ ಎಚ್ಚರಿಕೆ ನೀಡಿತ್ತು ಎಂದು ವರದಿಯಾಗಿದೆ. ಬಹುಶಃ ಇದನ್ನು ಸರಕಾರ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ ಅಥವಾ ಭಯೋತ್ಪಾದಕರ ಜಾಲ ಭದ್ರತಾ ಪಡೆಗಳ ಪಹರೆಯನ್ನು ಭೇದಿಸುವಷ್ಟು ಬಲವಾಗಿ ಬೆಳೆದಿರಬೇಕು. ಏನೇ ಆಗಲಿ, ಸರಕಾರ ಭದ್ರತಾ ಲೋಪಗಳನ್ನು ಸರಿಪಡಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಸಹಜವಾಗಿಯೇ, ಈ ಭಯೋತ್ಪಾದಕ ಧಾಳಿಗಳನ್ನು ದೇಶಾದ್ಯಂತ ಖಂಡಿಸಲಾಗಿದೆ.



ಸಂಸತ್ತಿನ ಎರಡೂ ಸದನಗಳು ಇದನ್ನು ಚರ್ಚಿಸಿ ಈ ಪಿಡುಗನ್ನು ಎದುರಿಸಲು ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ನೆರವಾಗಬೇಕೆಂದು ಆಗ್ರಹಿಸಿವೆ.

ಸಂಸತ್ತಿನ ಚರ್ಚೆಗಳಲ್ಲಿ ಎಂದಿನಂತೆ ಈ ಬಾರಿಯೂ ಬಿಜೆಪಿ ಇದು 'ಮುಸ್ಲಿಂ ತುಷ್ಟೀಕರಣ'ದ ದುಷ್ಫಲ, ಪೋಟಾ ಕಾನೂನು ಇದ್ದಿದ್ದರೆ ಹೀಗಾಗುತ್ತಿರಲಿಲ್ಲ ಎಂದು ದೂಷಿಸಲು ಮರೆಯಲಿಲ್ಲ. ದೇಶ ಐಕ್ಯತೆಯಿಂದ ಈ ಪಿಡುಗನ್ನು ಎದುರಿಸಬೇಕಾದ ಸಮಯದಲ್ಲಿ ಇಂತಹ ದೂಷಣೆ ಅದರ ಪಕ್ಷಪಾತದ ರಾಜಕೀಯವನ್ನು ತೋರಿಸುತ್ತದೆ. ಈ ಹಿಂದೆ ಕೇಂದ್ರದಲ್ಲಿ ಎನ್‌ಡಿಎ ಸರಕಾರದ ಆಳ್ವಿಕೆಯಲ್ಲಿ ಇಂತಹ ಭಯೋತ್ಪಾದಕ ಧಾಳಿಗಳು ನಡೆದಾಗ ಸಮಸ್ತ ದೇಶ ಸರಕಾರದ ಬೆಂಬಲಕ್ಕೆ ನಿಂತಿತ್ತು ಎಂಬುದು ಲೋಕಸಭಾ ಚರ್ಚೆಯಲ್ಲಿ ಈ ದೂಷಣೆ ಮಾಡಿದ ಅಡ್ವಾಣಿಯವರು ಮರೆತು ಬಿಟ್ಟಿರಬಹುದೇ? ಪೋಟಾ ಕಾನೂನು ರಾರಾಜಿಸುತ್ತಿದ್ದಾಗಲೂ ಇಂತಹ ಭಯೋತ್ಪಾದಕ ಧಾಳಿಗಳು ನಡೆದಿವೆ ಎಂಬುದೂ ಅವರಿಗೆ ತಿಳಿಯದ ಸಂಗತಿಯೇನಲ್ಲ. ಎನ್ ಡಿ ಎ ಅಧಿಕಾರದಲ್ಲಿದ್ದಾಗ ಸಂಸತ್ತಿನ ಮೇಲೆ ಧಾಳಿ, ಕೆಂಪುಕೋಟೆಯಲ್ಲಿ ಧಾಳಿ, ಅಕ್ಷರಧಾಮ ದೇವಸ್ಥಾನದ ಮೇಲೆ ಎರಡುಬಾರಿ ಧಾಳಿ ನಡೆದದ್ದು, ಅದರಲ್ಲಿ ಹಲವಾರು ಜೀವಗಳ ಬಲಿ ಕೂಡಾ ವಾಜಪೇಯಿ ಸರಕಾರದ 'ಮುಸ್ಲಿಂ ತುಷ್ಟೀಕರಣ'ದ ನೀತಿಯಿಂದ ಎಂದು ಹೇಳಲಾದೀತೇ? ಹೈದರಾಬಾದ್ ನ ಭಯೋತ್ಪಾದಕ ಧಾಳಿಗಳಿಗೆ ಬಲಿಯಾದವರಲ್ಲಿ ಅಲ್ಪಸಂಖ್ಯಾತ ಸಮುದಾಯದವರೂ ಇದ್ದಾರೆ ಎಂಬುದು ಏನನ್ನು ತೋರಿಸುತ್ತದೆ? ಭಯೋತ್ಪಾದನೆಗೆ ಧರ್ಮವಿಲ್ಲ ಎಂಬುದು ಮತ್ತೆ- ಮತ್ತೆ ಕಾಣಬಂದಿದೆ.

ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಒಂದು ಸ್ಫೋಟ ನಡೆದದ್ದು ಲುಂಬಿನಿ ಪಾರ್ಕ್‌ನ ಲೇಸರ್ ಪ್ರದರ್ಶನದ ಅಂಗಣದಲ್ಲಿ. ಇದನ್ನು ಪ್ರವೇಶಿಸಲು ದರ್ಶಕರು ಲೋಹ ದರ್ಶಕ ಮತ್ತಿತರ ಇಲೆಕ್ಟ್ರಾನಿಕ್ ಉಪಕರಣಗಳ ಮೂಲಕವೇ ಹಾದುಹೋಗಬೇಕು. ಆದರೂ ಒಂದು ಮಾರಕ ಬಾಂಬನ್ನು ಒಯ್ದು ಆಸನದ ಕೆಳಗಿಡಲು ಹೇಗೆ ಸಾಧ್ಯವಾಯಿತು? ಮರುದಿನ ಈ ಸ್ಥಳ ನೋಡಲು ಹೋದ ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚೂರಿ ಈ ಪ್ರಶ್ನೆ ಕೇಳಿದಾಗ ಉತ್ತರ ದೊರೆಯಲಿಲ್ಲ. ಆದರೆ ರಾಜ್ಯ ಸರಕಾರ ಈ ಕಾಂಪ್ಲೆಕ್ಸ್ ನ ಭದ್ರತೆಯ ಕೆಲಸವನ್ನು ಖಾಸಗಿಯವರಿಗೆ ವಹಿಸಿದೆ ಎಂದು ತಿಳಿದು ಬಂತು. 'ಸುಧಾರಣೆ'ಗಳ ಹೆಸರಿನಲ್ಲಿ ಸಾರ್ವಜನಿಕ ಭದ್ರತೆಯನ್ನು ಕೂಡಾ ಖಾಸಗೀಕರಿಸಿ ಕೈತೊಳೆದು ಕೊಳ್ಳುವ ಪ್ರವೃತ್ತಿ ಬೆಳೆದಿದೆ. ನಾಗರಿಕರಿಗೆ ಭದ್ರತೆ ಒದಗಿಸುವುದು ಮಾತ್ರವಲ್ಲ, ಅದನ್ನು ಖಾತ್ರಿಪಡಿಸುವುದು ಕೂಡಾ ಸರಕಾರದ ಜವಾಬ್ದಾರಿಯಲ್ಲವೇ? ಈ ರೀತಿ ಸರಕಾರಗಳು ತಮ್ಮ ಜವಾಬ್ದಾರಿಗಳಿಂದ ನುಣಚಿಕೊಂಡು ಸಾರ್ವಜನಿಕ ಭದ್ರತೆಯನ್ನು ಕೂಡ ಖಾಸಗೀಕರಿಸುವುದು ಇನ್ನು ಮುಂದಾದರೂ ನಿಲ್ಲಬೇಕಾಗಿದೆ.



ಬಿಜೆಪಿಯಿಂದ ಅಧಿಕಾರ ಹಸ್ತಾಂತರದ ಕ್ಷಣಗಣನೆ ನಡೆದಿದೆ. ಕರ್ನಾಟಕದ ಇತಿಹಾಸದ ಕರಾಳ ಅಧ್ಯಾಯವೊಂದು ಆರಂಭವಾಗಲಿದೆಯೇ ಎನ್ನುವ ಆತಂಕ ಪ್ರಜ್ಞಾವಂತರನ್ನು ಕಾಡುತ್ತಿದೆ. ಬಿಜೆಪಿಗೆ ಅಧಿಕಾರ ಯಾಕೆ ಸಿಗಲೇಬಾರದು? ಓದಿ ನೋಡಿ

ಹೊತ್ತಿ ಉರಿದೀತು ಕರ್ನಾಟಕ

ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಬೇಡಿ

ಬಿಜೆಪಿಯೊಂದಿಗೆ ಸೇರಿ ಸಕಾರ ರಚಿಸಿರುವುದರಿಂದ ಜೆಡಿ(ಎಸ್) ವರ್ಚಸ್ಸಿಗೆ ಧಕ್ಕೆಯಾಗಿದೆ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಗುಲ್ಬರ್ಗಾದ ಚಿತ್ತಾಪುರ ತಾಲ್ಲೂಕಿನ ಡೋಣಗಾಂವ ಗ್ರಾಮದಲ್ಲಿ ಇತ್ತೀಚೆಗೆ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ ಹೇಳಿದ್ದಾರೆ. ಬಿಜೆಪಿಯೊಂದಿಗೆ ಸೇರಿ ಸರ್ಕಾರ ರಚಿಸಿಕೊಂಡಿರುವುದರಿಂದ ಜೆಡಿ(ಎಸ್) ಪಕ್ಷಕ್ಕೆ ಧಕ್ಕೆ ಆಗಿದೆಯೋ ಇಲ್ಲವೋ ಎಂಬುದನ್ನು ಜೆಡಿ(ಎಸ್) ಪಕ್ಷದವರೇ ಹೇಳಬೇಕು. ಆದರೆ ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಿದರೆ ರಾಜ್ಯದ ಜನತೆಯ ಹಿತಕ್ಕಂತೂ ಧಕ್ಕೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಭಾರತೀಯ ಜನತಾ ಪಕ್ಷ ಬೇರೆ ರಾಜಕೀಯ ಪಕ್ಷಗಳ ತರಹದ ಒಂದು ರಾಜಕೀಯ ಪಕ್ಷವಲ್ಲ. ಅದರ ನಿಜ ಸ್ವರೂಪವನ್ನು ಕರ್ನಾಟಕದ ಜನತೆ ಮರೆತು ಬಿಡಬಾರದು, ಕಡೆಗಣಿಸಬಾರದು. ಬಿಜೆಪಿ ಎಂಬುದು ಆರ್.ಎಸ್.ಎಸ್. ಹಿಡಿತದಲ್ಲಿರುವ ಪಕ್ಷ. ಇತ್ತೀಚಿನ ದಿನಗಳಲ್ಲಿ ಬಿಜೆಪಿ ಮೇಲೆ ಆರ್.ಎಸ್.ಎಸ್. ಹಿಡಿತ ಇನ್ನೂ ಹೆಚ್ಚು ಬಿಗಿಯಾಗಿದೆ. ಆರ್.ಎಸ್.ಎಸ್.ಒಂದು ಫ್ಯಾಸಿಸ್ಟ್ ಸಂಘಟನೆ. ಹಿಟ್ಲರ್ ಅವರಿಗೆ ಆದರ್ಶ. ಹಿಟ್ಲರ್ ತನ್ನ ರಾಜಕೀಯ ಗುರಿ ಸಾಧನೆಗಾಗಿ ತನ್ನ ಜನಾಂಗದ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಾ ಅನ್ಯ ಜನಾಂಗೀಯರಾದ ಯಹೂದಿಗಳ ಸಂಹಾರ ಮಾಡಿದ. ಹಿಂದುತ್ವದ ಶ್ರೇಷ್ಠತೆಯನ್ನು ಪ್ರತಿಪಾದಿಸುವ ಆರ್.ಎಸ್.ಎಸ್. ಅನ್ಯ ಧರ್ಮೀಯರಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರಾಕರಿಸುತ್ತದೆ. ಇಂಡಿಯಾ ದೇಶವನ್ನು ಒಂದು ಹಿಂದೂ ರಾಷ್ಟ್ರ ಮಾಡಬೇಕೆಂಬ ಗುರಿ ಇಟ್ಟುಕೊಂಡು ಒಂದು ಕಡೆ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹಾಗೂ ಅದರ ಆಕ್ರಮಣಕಾರಿ ಹಿಂದುತ್ವ ಸಿದ್ಧಾಂತವನ್ನು ಒಪ್ಪದೇ ಇರುವ ಹಿಂದುಗಳ ಮೇಲೆ ಅದು ದಾಳಿ ಮಾಡುತ್ತಿದೆ. ಇನ್ನೊಂದು ಕಡೆ ಬಿಜೆಪಿ ಅಡಿಯಲ್ಲಿ ಹಿಂದುಗಳ ಓಟು ಬ್ಯಾಂಕನ್ನು ಸೃಷ್ಟಿಸುವ ಮೂಲಕ ರಾಜಕೀಯ ಅಧಿಕಾರವನ್ನು ಕೈವಶ ಮಾಡಿಕೊಳ್ಳಲು ಯತ್ನಿಸುತ್ತಿದೆ. ಈ ಪ್ರಯೋಗಗಳಿಗಾಗಿ ದಕ್ಷಿಣ ಭಾರತದಲ್ಲಿ ಕರ್ನಾಟಕವನ್ನು ಅವರು ಆಯ್ಕೆ ಮಾಡಿದ್ದಾಳೆ. ಇದನ್ನು ಕರ್ನಾಟಕದ ಜನತೆ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಕರ್ನಾಟಕ ಕೋಮುವಾದಿಗಳ ಕಾರ್ಯಕ್ಷೇತ್ರವಾಗಬೇಕೆ?

ಬಿಜೆಪಿ ಅಧಿಕಾರದಲ್ಲಿದ್ದ ರಾಜ್ಯಗಳಲ್ಲಿ ಅದು ತನ್ನ ಕೋಮುವಾದಿ ಕಾರ್ಯ ಸೂಚಿಯನ್ನು ಅನುಷ್ಠಾನಕ್ಕೆ ತರಲು ಸರ್ಕಾರಿ ಯಂತ್ರವನ್ನೇ ಬಳಸಿದ್ದನ್ನು ನಾವು ನೋಡಿದ್ದೇವೆ. ಮೊದಲು ಮಧ್ಯಪ್ರದೇಶದಲ್ಲಿ ಮತ್ತು ನಂತರ ಗುಜರಾತ್ ಹಾಗೂ ರಾಜಸ್ಥಾನದಲ್ಲಿ. ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುತ್ತೇವೆ ಎಂದು ಅವರು ಬಹಿರಂಗವಾಗಿ ಘೋಷಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ಗಿಟ್ಟಿಸಿಕೊಂಡದ್ದನ್ನೇ ಬಳಸಿಕೊಂಡು ಅವರು ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿರುವ ದೌರ್ಜನ್ಯಗಳನ್ನು ಗಮನಿಸಿದರೆ, ಮುಂದಿನ ಅಪಾಯವನ್ನು ಊಹಿಸುವುದು ಕಷ್ಟದ ಕೆಲಸವೇನಲ್ಲ. ದನಗಳ ಸಾಗಾಟ, ಮಾಂಸಕ್ಕಾಗಿ ದನಗಳನ್ನು ಕಡಿಯುವುದನ್ನು ತಡೆಯುವ ಹೆಸರಿನಲ್ಲಿ ಕರಾವಳಿ ಜಿಲ್ಲೆಗಳ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಭಯೋತ್ಪಾದನೆಯನ್ನೆ ನಡೆಸಿದ್ದಾರೆ. ಮತಾಂತರದ ನೆಪವೊಡ್ಡಿ ಕ್ರಿಶ್ಚಿಯನ್ ಸಮುದಾಯದ ಮೇಲೆ ಸಂಘ ಪರಿವಾರದವರು ನಿರಂತರವಾಗಿ ನಡೆಸುತ್ತಿರುವ ಹಲ್ಲೆ, ದೌರ್ಜನ್ಯ ದಬ್ಬಾಳಿಕೆಯನ್ನು ಸಹಿಸಲಾಗದೆ ಬಿಜೆಪಿ ಸಂಸದ ಸಾಂಗ್ಲಿಯಾನ ಅವರೇ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ಇಂತಹ ಒಂದು ಪಕ್ಷಕ್ಕೆ ರಾಜ್ಯದ ಅಧಿಕಾರ ಹಸ್ತಾಂತರ ಮಾಡಿದರೆ ಅವರ ಕೋಮುವಾದಿ ಕಾರ್ಯಸೂಚಿಯನ್ನು ಕರ್ನಾಟಕದ ನೆಲದಲ್ಲಿ ಜಾರಿಗೊಳಿಸಲು ಮುಕ್ತ ಅವಕಾಶವನ್ನು ಒದಗಿಸಿದಂತಾಗಲಿಕ್ಕಿಲ್ಲವೇ?

ನಿತ್ಯಾನಂದಸ್ವಾಮಿ

ಬಾಬಾಬುಡನ್ ಗಿರಿಯಲ್ಲಿ ಅಯೋಧ್ಯಾ ಪ್ರಯೋಗ

ನಾಡಿನಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ಒಟ್ಟಿಗೆ ಗೌರವಿಸುವ ಅನೇಕ ಶ್ರದ್ಧಾ ಕೇಂದ್ರಗಳಿವೆ. ಇವುಗಳು ಈ ನಾಡಿನಲ್ಲಿ ಬಹುಕಾಲದಿಂದ ನಡೆದು ಬಂದಿರುವ ಧಾರ್ಮಿಕ ಸೌಹಾರ್ದತೆಯ ಕುರುಹುಗಳಾಗಿವೆ. ನಾಡಿನ ಸೂಫಿ ಪರಂಪರೆ ಇದಕ್ಕೆ ದೊಡ್ಡ ಕೊಡುಗೆಯನ್ನು ನೀಡಿದೆ. ಆದರೆ ಈ ಹಿಂದುತ್ವವಾದಿಗಳು ಇಂತಹ ಪರಂಪರೆಯನ್ನು ಗೌರವಿಸುವುದಿಲ್ಲ. ಅವರು ಹಿಂದೆ ಬ್ರಿಟಿಷರು ಮಾಡಿದಂತೆ, ಹಿಂದೂಗಳು ಮತ್ತು ಮುಸಲ್ಮಾನರು ಪರಸ್ಪರ ಅನ್ಯೋನ್ಯತೆಯಿಂದ ಬದುಕುವುದನ್ನು ಸಹಿಸುವುದಿಲ್ಲ. ಹಿಂದುಗಳು ಮತ್ತು ಮುಸಲ್ಮಾನರು ಒಟ್ಟಾಗಿ ಪೂಜಿಸುವ ಕ್ಷೇತ್ರಗಳನ್ನು ಅವರು ನಾಶ ಮಾಡಬಯಸುತ್ತಾರೆ, ಇಲ್ಲವೇ ಅವುಗಳನ್ನು ಹಿಂದೂಗಳ ಕ್ಷೇತ್ರಗಳಾಗಿ ಪರಿವರ್ತಿಸ ಬಯಸುತ್ತಾರೆ. ಬಾಬಾ ಬುಡನ್‌ಗಿರಿಯಲ್ಲಿ ಅವರು ಈ ಗುರಿಯಿಟ್ಟುಕೊಂಡು ಸರ್ಕಾರದ ಮೇಲೆ ಒತ್ತಡ ಹೇರುತ್ತಾ ಬಂದಿದ್ದಾರೆ. ತಮ್ಮ ಕೈಯಲ್ಲಿ ಅಧಿಕಾರ ಹಸ್ತಾಂತರ ಆಗುವುದನ್ನು ಅವರು ಕಾಯುತ್ತಿದ್ದಾರೆ. ಹಾಗೇನಾದರೂ ಇವರ ಕೈಗೆ ಅಧಿಕಾರ ಹಸ್ತಾಂತರವಾದರೆ ಎಲ್ಲ ದಾಖಲೆಗಳನ್ನು ನಾಶಮಾಡಿ ಬಾಬಾಬುಡನ್ ಗಿರಿಯಲ್ಲಿ ಇನ್ನೊಂದು 'ಅಯೋಧ್ಯಾ' ಪ್ರಯೋಗ ಮಾಡಲು ಅವರು ಹಿಂಜರಿಯುವುದಿಲ್ಲ. ಇಂತಹ ಅನಾಹುತಗಳಿಗೆ ರಾಜ್ಯವನ್ನು ಬಲಿಕೊಡಬೇಕೆ?



ಬಾಬರಿ ಮಸೀದಿ ನಾಶಕ್ಕೆ ನುಗ್ಗುತ್ತಿರುವ ಕೇಸರಿಪಡೆ



ಕೋಮುಸೌಹಾರ್ದತೆಯ ಕೇಂದ್ರ ಬಾಬಾಬುಡನ್‌ಗಿರಿ ಧ್ವಂಸವಾಗಬೇಕ

ದಲಿತರನ್ನು ಕಾಪಾಡುವವರು ಯಾರು?

ಯಡಿಯೂರಪ್ಪ ಉಪಮುಖ್ಯಮಂತ್ರಿಯಾದ ಬಳಿಕ ಕಛೇರಿಯಲ್ಲಿದ್ದ ಅಂಬೇಡ್ಕರ್ ಭಾವಚಿತ್ರ ತೆಗೆಸಿದ್ದು ಮೇಲ್ಜಾತಿ ಭೂಮಾಲೀಕರಿಗೆ ಒಂದು ಸಂಕೇತವಾಯ್ತು. ಆ ದಿನದಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನ ವಿಭಾಗಗಳ ಮೇಲೆ ಸವರ್ಣೀಯರ ದಾಳಿ ದೌರ್ಜನ್ಯಗಳು ಹೆಚ್ಚಿದವು. ಜಾತಿ ದೌರ್ಜನ್ಯದ ಪ್ರಕರಣಗಳಲ್ಲಿ ಸರ್ಕಾರ ಮಧ್ಯ ಪ್ರವೇಶ ಮಾಡಲು ಮುಂದಾಗುತ್ತಿಲ್ಲ. ಮೇಲ್ಜಾತಿ ಭೂ ಮಾಲೀಕ ಶಕ್ತಿಗಳಿಗೆ ಎಲ್ಲಿಲ್ಲದ ಕುಮ್ಮಕ್ಕು ಸಿಕ್ಕಂತಾಗಿದೆ. ರಾಜಕೀಯ ಬದಲಾವಣೆಯನ್ನು ಗಮನಿಸುತ್ತಿರುವ ಪೋಲೀಸ್ ಇಲಾಖೆಯವರು ಜಾತಿ ದೌರ್ಜನ್ಯ ಪ್ರಕರಣಗಳನ್ನು ದಾಖಲು ಮಾಡಲು ನಿರಾಕರಿಸುತ್ತಿದ್ದಾರೆ. ಮಾತ್ರವಲ್ಲ ದೌರ್ಜನ್ಯಕ್ಕೊಳಗಾದ ದಲಿತರ ವಿರುದ್ದವೇ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿ ದಲಿತರು ಧ್ವನಿ ಎತ್ತದಂತೆ ಮಾಡುತ್ತಿದ್ದಾರೆ. ಯಡಿಯೂರಪ್ಪ ಉಪಮುಖ್ಯಮಂತ್ರಿ ಯಾಗಿರುವಾಗಲೇ ಇಷ್ಟು! ಇನ್ನು ಮುಖ್ಯಮಂತ್ರಿನೆ ಆಗಿಬಿಟ್ಟರೆ ದಲಿತರನ್ನು ಕಾಪಾಡುವವರು ಯಾರು? ಬಿಜೆಪಿಯನ್ನು ನಿಯಂತ್ರಿಸುವ ಆರ್‌ಎಸ್‌ಎಸ್ ಹಿಂದೂ ಧರ್ಮದ ಅವಿಭಾಜ್ಯ ಭಾಗ ವಾಗಿರುವ ಜಾತಿ ಪದ್ಧತಿಯನ್ನು ಪ್ರತಿ ಪಾದಿಸು ತ್ತದೆ. ದಲಿತರಿಗೆ ಸಮಾಜದಲ್ಲಿ ಸಮಾನ ಸ್ಥಾನ ಮಾನ ನೀಡುವುದಾಗಲಿ, ಅವರಿಗೆ ಮೀಸಲಾತಿ ಯನ್ನು ಒದಗಿಸುವು ದಾಗಲಿ ಅವರ ಅಜೆಂಡಾದಲ್ಲಿಲ್ಲದ ವಿಷಯಗಳು. ಆದ್ದರಿಂದಲೇ ಡಾ:: ಅಂಬೇಡ್ಕರ್ ಅವರು ಯಾವುದೇ ಬೆಲೆಯನ್ನಾದರೂ ತೆತ್ತು ಭಾರತ ಹಿಂದೂ ರಾಷ್ಟ್ರ ಆಗುವುದನ್ನು ದಲಿತರು ತಡೆಯಬೇಕೆಂದು ಆಶಿಸಿದ್ದರು. ಈ ಆಶಯವನ್ನು ಸಾಕಾರಗೊಳಿಸುವ ಭಾಗವಾಗಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಬೇಕಾಗಿದೆ.

ಮೇಲ್ಜಾತಿ, ಮೇಲ್ವರ್ಗಗಳ ಕ್ರೋಢೀಕರಣ

ಹಣಕಾಸು ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಯಡಿಯೂರಪ್ಪ ಈ ಸಲದ ಬಜೆಟ್‌ನಲ್ಲಿ ಜನರ ದುಡ್ಡನ್ನು ಮಠಗಳಿಗೆ ಕೊಡುವ

ಪುಟ 10ಕ್ಕೆ

ಹಸ್ತಾಂತರವಾದರೆ ರಾಜ್ಯದ ಗತಿ ಏನಾದೀತು? ಕಾನೂನು ವ್ಯವಸ್ಥೆಗೆ ಗಂಡಾಂತರ

ರಾಜ್ಯದ ವಿವಿಧೆಡೆ ಕೋಮು ಗಲಭೆಗಳಿಗೆ ಸಂಬಂಧಿಸಿ ದಾಖಲಾದ 51 ಮೊಕದ್ದಮೆಗಳನ್ನು ಕಾನೂನು ಇಲಾಖೆಯ ವಿರೋಧದ ನಡುವೆಯೂ ಹಿಂದಕ್ಕೆ ಪಡೆಯುವಲ್ಲಿ ರಾಜ್ಯ ಬಿಜೆಪಿ ಯಶಸ್ವಿಯಾಗಿದೆ. ಹಾವೇರಿ, ಶಿವಮೊಗ್ಗ, ಬೆಳಗಾವಿ, ಗದಗ, ವಿಜಾಪುರ, ಮಂಡ್ಯ, ಬಾಗಲಕೋಟೆ, ಕೊಡಗು, ಧಾರವಾಡ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಜರಂಗ ದಳದ ಕಾರ್ಯಕರ್ತರು ನಡೆಸಿದ ಗಲಭೆಗಳ ಹಿನ್ನೆಲೆಯಲ್ಲಿ ಅವರ ವಿರುದ್ಧ ಈ ಮೊಕದ್ದಮೆಗಳು ದಾಖಲಾಗಿದ್ದವು. ಸಾರ್ವಜನಿಕ ಆಸ್ತಿ ಪಾಸ್ತಿಗೆ ನಷ್ಟ ಉಂಟು ಮಾಡಿದ್ದು, ಜೀವ ಬೆದರಿಕೆ ಹಾಗೂ ಕೊಲೆಯ ಪ್ರಯತ್ನ ಇತ್ಯಾದಿ ಪ್ರಕರಣಗಳು ಇವುಗಳಲ್ಲಿ ಸೇರಿಕೊಂಡಿದ್ದವು. ಈ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವ ಬಗ್ಗೆ ಡಿಜಿ, ಐಜಿಪಿ, ಪ್ರಾಸಿಕ್ಯೂಷನ್ ಮತ್ತು ಕಾನೂನು ಇಲಾಖೆಗಳ ಅಭಿಪ್ರಾಯವನ್ನು ಕೇಳಲಾಗಿತ್ತು. ಈ ಗಲಭೆ ಪ್ರಕರಣಗಳಿಗೆ ಸಂಬಂಧಿಸಿ ಯಾವುದೇ ಮೊಕದ್ದಮೆಯನ್ನು ಹಿಂಪಡೆಯಬಾರದೆಂದು ಐಜಿಪಿ ತಿಳಿಸಿದ್ದರು. ಕಾನೂನು ಇಲಾಖೆಯೂ ಸಹ ಈ ಪ್ರಕರಣಗಳನ್ನು ಹಿಂದಕ್ಕೆ ಪಡೆಯುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟಿತ್ತು. ಆದರೆ ಸರ್ಕಾರದ ಭಾಗವಾಗಿರುವ ಬಿಜೆಪಿ ಕಾನೂನು ಇಲಾಖೆಯ ವಿರೋಧದ ನಡುವೆಯೂ ಈ ಕ್ರಿಮಿನಲ್ ಪ್ರಕರಣಗಳನ್ನು ಹಿಂದಕ್ಕೆ ಪಡೆಯಲು ಒತ್ತಡ ಹಾಕಿ ಯಶಸ್ವಿಯಾಗಿದೆ. ನಾಡಿನ ಕಾನೂನನ್ನು ಗೌರವಿಸದ, ಕಾನೂನು ಉಲ್ಲಂಘಿಸುವವರ ರಕ್ಷಣೆಗೆ ನಿಲ್ಲುವ ಇಂತಹ ಪಕ್ಷಕ್ಕೆ ಅಧಿಕಾರ ಹಸ್ತಾಂತರ ಮಾಡಿದರೆ ಕಾನೂನು ವ್ಯವಸ್ಥೆಯ ಪರಿಸ್ಥಿತಿ ಏನಾಗಬಹುದು. ಪೋಲೀಸರು ತಮ್ಮ ಕರ್ತವ್ಯವನ್ನು ನಿಷ್ಪಕ್ಷಪಾತತನದಿಂದ ನಿರ್ವಹಿಸುವರೇ? ಅವರ ನೈತಿಕ ಸ್ಥೈರ್ಯ ಉಳಿಯಲು ಸಾಧ್ಯವೇ. ಬಿಜೆಪಿಗೆ ಅಧಿಕಾರ ಹಸ್ತಾಂತರವಾದರೆ ಭೂಗತವಾಗಿರುವ ಸಮಾಜಘಾತಕ ಶಕ್ತಿಗಳಿಗೆ ಮೈದಾನ ಮುಕ್ತ ವಾಗುವುದು. ಅಪರಾಧಿಗಳಿಗೆ ನಿರ್ಭಯದ ವಾತಾವರಣ ಸೃಷ್ಟಿಯಾಗುವುದು. ಶಾಂತಿ ಸುವ್ಯವಸ್ಥೆ ಕಾಪಾಡುವ ಕ್ರಮಕ್ಕೆ ತೀವ್ರ ಹಿನ್ನಡೆ ಆಗುವುದು. ಆದ್ದರಿಂದ ಅಕ್ಟೋಬರ್ 3 ರ ಮೊದಲೇ ಈ ಬಗ್ಗೆ ಸರಿಯಾದ ನಿರ್ಧಾರ ಆಗಬೇಕು.





ಸರ್ಕಾರಿ ಪದವಿಪೂರ್ವ ಕಾಲೇಜಿಗೆ ತಗುಲಿಸಲಾದ ತುಮಕೂರು ವಿ.ವಿ. ಕಮಾನುಬೋರ್ಡ್

ಇಚ್ಛಾಶಕ್ತಿಯ ಕೊರತೆ, ಸಂಕುಚಿತ ರಾಜಕೀಯ ಹಿತಾಸಕ್ತಿಗಳು, ಭ್ರಷ್ಟಾಚಾರಿಗಳಿಂದಾಗಿ ತುಮಕೂರು ವಿ.ವಿ. ಉದ್ದೇಶ ವಿಫಲವಾಗಿ ವಿಶ್ವವಿದ್ಯಾಲಯ ಹಾಳುಬಿದ್ದಿದೆ

‘ಹಾಳು ಬಿದ್ದ’ ತುಮಕೂರು ವಿ.ವಿ

ರಮೇಶ್

‘ವಿಶ್ವವಿದ್ಯಾಲಯಗಳು ಸ್ಥಾಪನೆಯಾಗುವುದೇ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ವಿಸ್ತಾರಗೊಳಿಸಲು. ಆದರೆ ಇವತ್ತು ರಾಜ್ಯದ ವಿಶ್ವವಿದ್ಯಾಲಯಗಳು ಜ್ಞಾನ ಬಿಂದುಗಳಾಗುವುದರ ಬದಲು ಜಾತಿ ಕೂಪಗಳಾಗುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ಮೊನ್ನೆ ಮೊನ್ನೆ ಸ್ಥಾಪನೆಯಾದ ತುಮಕೂರು ವಿಶ್ವವಿದ್ಯಾಲಯವೂ ಸಹ ಇದಕ್ಕೆ ಹೊರತಾಗಿಲ್ಲ.

ವೈಚಾರಿಕತೆ, ವೈಜ್ಞಾನಿಕತೆ ವಿಷಯಗಳು ಸೇರಿದಂತೆ ಅನ್ವಯಿಕ ಮತ್ತು ಪ್ರಯೋಗಾತ್ಮಕತೆಗೆ ಪ್ರಾಧಾನ್ಯತೆ ನೀಡಬೇಕಾದ ಉಪನ್ಯಾಸಕರುಗಳು ವಿಶ್ವವಿದ್ಯಾಲಯವನ್ನು ಜಾತಿಕೂಪಕ್ಕೆ ತಳ್ಳಲಾಗಿದೆ.

ತುಮಕೂರು ವಿಶ್ವವಿದ್ಯಾಲಯ ಉದ್ಘಾಟನೆಯಾಗಿರುವುದು ಬಿಟ್ಟರೆ ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ನಿವೇಶನವಿಲ್ಲ, ಅನುದಾನವಿಲ್ಲ, ರಾಷ್ಟ್ರೀಯ ಮಾನಸಂಪನ್ಮೂಲ ಇಲಾಖೆಯಡಿಯಲ್ಲಿ ಬರುವ ಯು.ಜಿ.ಸಿ. ಮಾನ್ಯತೆ 12 B ಯಂತೂ ವಿಶ್ವವಿದ್ಯಾಲಯಕ್ಕೆ ಇಲ್ಲವೇ ಇಲ್ಲ. ಬರೀ ಸರ್ಕಾರಿ ಆದೇಶ ಪತ್ರದಲ್ಲಿ ಮಾತ್ರ ತುಮಕೂರು ವಿಶ್ವವಿದ್ಯಾಲಯ ನಮೂದಾಗಿದೆ. ಆದರೆ ಯು.ಜಿ.ಸಿ. ಮಾನ್ಯತೆ ಮಾತ್ರ ತುಮಕೂರು ವಿಶ್ವವಿದ್ಯಾಲಯಕ್ಕೆ ಸಿಕ್ಕಿಲ್ಲ. ಮಾನ್ಯತೆ ಇಲ್ಲದ ವಿಶ್ವವಿದ್ಯಾಲಯದಿಂದಲೇ ವಿದ್ಯಾರ್ಥಿಗಳು ಬಿ.ಇಡಿ., ಎಂ.ಇಡಿ. ಸೇರಿದಂತೆ ಉಳಿದ 12 ಕೋರ್ಸ್‌ಗಳ ವಿದ್ಯಾರ್ಥಿಗಳು ಕೋರ್ಸ್ ಮುಗಿಸಿ ಹೊರ ಬಂದಿದ್ದಾರೆ.

ಮಾನ್ಯತೆ ಇಲ್ಲದ ವಿಶ್ವವಿದ್ಯಾಲಯವಾಗಿರುವುದರಿಂದ ಈ ವಿದ್ಯಾರ್ಥಿಗಳ ಬದುಕು ಅತಂತ್ರವಾಗುವುದರಲ್ಲಿ ಸಂಶಯವೇ ಇಲ್ಲ. ಇಷ್ಟಲ್ಲದೇ ವಿಶ್ವವಿದ್ಯಾಲಯ ಹಲವು ಸಮಸ್ಯೆಗಳ ಕೂಪವಾಗೇ ಉಳಿದಿದೆ.ರಾಜಕೀಯ ಪಕ್ಷಗಳಿಗೆ ರಾಜಕೀಯ ಇಚ್ಛಾ ಶಕ್ತಿ ಇಲ್ಲದಿರುವುದರ ಜೊತೆಗೆ ವಿಶ್ವವಿದ್ಯಾಲಯ ಸಮಸ್ಯೆಯನ್ನು ಈ ಮಹಾನ್‌ನಾಯಕರು ದೀರ್ಘಾವಧಿ ಸಮಸ್ಯೆಯನ್ನಾಗಿಸಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹವಣಿಸುತ್ತಿರುವುದು ವಿಶ್ವವಿದ್ಯಾಲಯ ‘ಎಕ್ಕುಟ್ಟಿ’ ಹೋಗಲು ಒಂದು ಕಾರಣವಾಗಿದೆ.

ಆರಂಭಶೂರತ್ವ

ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿ ಡಾ. ಓ. ಅನಂತರಾಮಯ್ಯ ಬಂದಾಗ ಆರಂಭಿಕ ಶೂರರಂತೆ ತಮ್ಮ ಕನಸುಗಳನ್ನೆಲ್ಲಾ ಬಿಚ್ಚಿಟ್ಟು ವಿಶ್ವವಿದ್ಯಾಲಯದ ಕೀರ್ತಿ ವಿಶ್ವದಲ್ಲೇ ಮೆರೆಯುವಂತೆ ಮಾಡುವುದೇ ನನ್ನ ಮುಖ್ಯ ಗುರಿ ಎಂದರು. ಆದರೆ ಇವರ ಕನಸು ನನಸಾಗಲೇ ಇಲ್ಲ. ಇವರ ಕನಸು ನನಸಾಗಲು ಯಾವ ರಾಜಕಾರಣಿಯೂ ಸೊಪ್ಪು ಹಾಕಲೇ ಇಲ್ಲ. ಬದಲಿಗೆ ಕುಲಪತಿಗಳ ಜೊತೆಯಲ್ಲೇ ಇದ್ದು ಕುಲಪತಿಗಳನ್ನು ದಾರಿ ತಪ್ಪಿಸುವಂತ ಮಹಾನುಭಾವರ ಸಂಗ ಮಾಡಿದ್ದೇ ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿ ಆಗದಿರಲು ಕಾರಣ.

ಮಧುಗಿರಿ ತಾಲ್ಲೂಕು ಶಾಸಕ ಹಾಗೂ ಮಾಜಿ ಉನ್ನತ ಶಿಕ್ಷಣ ಸಚಿವ ಡಾ.ಜಿ. ಪರಮೇಶ್ವರರವರು ಕೊಟ್ಟ ಐಡಿಯಾದಿಂದ ಕಳೆದ ಎಸ್.ಎಂ. ಕೃಷ್ಣ ಸರ್ಕಾರವು ಜಿಲ್ಲೆಗೆ ಒಂದು ವಿಶ್ವವಿದ್ಯಾಲಯ ಕೊಟ್ಟರೆ ಜಿಲ್ಲೆಯ ಜನತೆ ಕಾಂಗ್ರೆಸ್‌ಗೆ ಮತ ಹಾಕುತ್ತಾರೆ ಎಂಬ ಲೆಕ್ಕಾಚಾರದ ಮೇಲೆ ಆತುರಾತುರವಾಗಿ ಕೊನೆಗಳಿಗೆಯಲ್ಲಿ ಜಿಲ್ಲೆಗೆಂದು ವಿಶ್ವವಿದ್ಯಾಲಯದ ಪ್ರಸ್ತಾವನೆಯನ್ನು ರೂಪಿಸಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿಬಿಟ್ಟರು. ರಾಜ್ಯದಲ್ಲಿ ಚುನಾವಣೆ ನಡೆದು ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಲೋಕಸಭಾ ಸದಸ್ಯರು ಸೇರಿ 12 ಜನ ವಿಧಾನ ಪರಿಷತ್ ಸದಸ್ಯರು ಸೋಲುಂಡು ಕಾಂಗ್ರೆಸ್ ನೆಲಕಚ್ಚಿತು. ಪರಮೇಶ್ವರ್ ಮಾತ್ರ ಅಸ್ತಿತ್ವ ಉಳಿಸಿಕೊಂಡರು. ಅಲ್ಲಿಂದಲೇ ವಿಶ್ವವಿದ್ಯಾಲಯಕ್ಕೆ ‘ಶನಿಕಾಟ’ ಪ್ರಾರಂಭವಾಗಿದ್ದು.

ರಾಜ್ಯದಲ್ಲಿ ಜೆ.ಡಿ.ಎಸ್. ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರಚನೆಯಾದಾಗಲೂ ‘ಜಿಲ್ಲೆಗೆ ವಿಶ್ವವಿದ್ಯಾಲಯ ತಂದವರು ನಾವೇ’ ಎಂದು ಬಡಾಯಿ ಕೊಚ್ಚಿಕೊಳ್ಳುವ ಜನ ವಿಶ್ವವಿದ್ಯಾಲಯಕ್ಕಾಗಿ ಏನನ್ನೂ ಮಾಡಲು ಆಗಲಿಲ್ಲ. ಆದರೆ ಅಧಿಕಾರ ಕಳೆದುಕೊಂಡ ಮೇಲೆ ‘ಪರಮೇಶ್ವರ್ ಜಿಲ್ಲೆಗೆ ವಿಶ್ವವಿದ್ಯಾಲಯ ತಂದರು. ಅದಕ್ಕೆ ಬಿ.ಜೆ.ಪಿ., ಜೆ.ಡಿ.ಎಸ್. ಸಮ್ಮಿಶ್ರ ಸರ್ಕಾರ ಅಡ್ಡಗಾಲು ಹಾಕುತ್ತಾ ಇದೆ’ ಎಂದು ಕಾಂಗ್ರೆಸ್ ನಾಯಕರು ಪ್ರಚಾರ ಮಾಡುತ್ತಾ ಇದ್ದಾರೆ. ವಿಶ್ವವಿದ್ಯಾಲಯ ಎಕ್ಕುಟ್ಟಿ ಹೋಗಲು ಬಿ.ಜೆ.ಪಿ., ಜೆ.ಡಿ.ಎಸ್. ಎಷ್ಟು ಕಾರಣವೋ ಕಾಂಗ್ರೆಸ್ ಅಷ್ಟೇ ಕಾರಣ ಎಂದು ಜನತೆ ಮರೆಯುವಂತಿಲ್ಲ.

ವಿಶ್ವವಿದ್ಯಾಲಯ ಪ್ರಾರಂಭ ಆಗಿದ್ದು ಹೀಗೆ

ಬೆಂಗಳೂರು ವಿಶ್ವವಿದ್ಯಾಲಯದ ಅಂದಿನ ಕುಲಪತಿಯಾಗಿದ್ದ ಸಿದ್ಧಪ್ಪ ಅವರ ಕಾಲದಲ್ಲೇ ಬೆಂಗಳೂರು ವಿಶ್ವವಿದ್ಯಾಲಯದ ಮೇಲಿರುವ ಆಡಳಿತ ಹಾಗೂ ಶೈಕ್ಷಣಿಕ ಒತ್ತಡಗಳನ್ನು ನಿವಾರಿಸಲು ಬೆಂಗಳೂರು ವಿಶ್ವ ವಿದ್ಯಾಲಯವನ್ನು ವಿಭಜಿಸಲು ಆಲೋಚನೆ ನಡೆಯುತ್ತಿರುವಾಗ ‘ತುಮಕೂರು ವಿ.ವಿ’ಯ ಚಿಂತನೆ ಮೊಳೆಯಿತು. ಅಂದು ಶುರುವಾದ ವಿಶ್ವವಿದ್ಯಾಲಯ ಜಾಗದ ಹುಡುಕಾಟ ಇವತ್ತೂ ಮುಂದುವರೆದಿದೆ.

ಸಿದ್ಧಪ್ಪನವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗಲೇ ಮೊದಲ ಬಾರಿಗೆ ಇಂದಿನ ಹೆಗ್ಗೆರೆ ಬಳಿಯ ಸಿದ್ಧಾರ್ಥ ಕಾಲೇಜಿನ ಸಮೀಪ ವಿಶ್ವವಿದ್ಯಾಲಯಕ್ಕೆ ಜಾಗ ನಿಗದಿ ಮಾಡಲಾಯಿತು. ಹೆಗ್ಗೆರೆಯಲ್ಲಿ ವಿಶ್ವವಿದ್ಯಾಲಯಕ್ಕೆ ಜಾಗ ಸಿಕ್ಕರೆ ತನ್ನ ಬುಡಕ್ಕೆ ಎಲ್ಲಿ ನೀರು ಬರುತ್ತೋ ಅಂತ ಇದೇ ಪರಮೇಶ್ವರ ವಿಶ್ವವಿದ್ಯಾಲಯವನ್ನು ಹೆಬ್ಬಾಕ ಕೆರೆಗೆ ಟ್ರಾನ್ಸ್‌ಫರ್ ಮಾಡಿದರು. ಅಲ್ಲಿನ ಜನ ವಿರೋಧಿಸಿದ್ದರಿಂದ ಅದೇ ಪರಮೇಶ್ವರ್ ಸಾಹೇಬರು ಅರಣ್ಯಪ್ರದೇಶ ಅಂತ ಗೊತ್ತಿದ್ದರೂ ವಿಶ್ವವಿದ್ಯಾಲಯವನ್ನು ದೇವರಾಯನ ದುರ್ಗಕ್ಕೆ ಶಿಫ್ಟ್ ಮಾಡಿಸಿದರು. ಇಲ್ಲಿಂದಲೇ ಸಮಸ್ಯೆ ಉಲ್ಬಣವೂ ಆಗಿದ್ದು.

ಕಾಂಗ್ರೆಸ್ ರಾಜ್ಯದಲ್ಲಿ ನೆಲ ಕಚ್ಚಿತು. ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರಗಳು ಬಂದವು. ಅದೇ ರೀತಿ ಪರಮೇಶ್ವರ್ ಮಾಡಿದ ತಪ್ಪಿಗಾಗಿ ಜಿಲ್ಲೆಗೆ ಅವ್ಯವಸ್ಥಿತವಾದ ವಿಶ್ವವಿದ್ಯಾಲಯ ಬಂತು. ಕಾಂಗ್ರೆಸ್, ಜೆ.ಡಿ.ಎಸ್. ಮೈತ್ರಿ ಸರ್ಕಾರವಿದ್ದ ಮೊದಲ ದಿನಗಳಲ್ಲಿ ವಿಶ್ವವಿದ್ಯಾಲಯದ ಆಡಳಿತ ನೋಡಿಕೊಳ್ಳಲು ಐ.ಎ.ಎಸ್. ಅಧಿಕಾರಿಯಾಗಿದ್ದ ಭಾಸ್ಕರ್ ಅವರನ್ನು ವಿಶೇಷ ಅಧಿಕಾರಿ ಆಗಿ ನೇಮಕ ಮಾಡಲಾಯಿತು.

ಇಲ್ಲಿನ ಆಂತರಿಕ ಕಿತ್ತಾಟಗಳು, ಒಳಜಗಳಗಳನ್ನು ಅರಿತ ಭಾಸ್ಕರ್ ಇಲ್ಲಿಂದ ಕಾಲು ಕಿತ್ತರು. ‘ಹಾಳೂರಿಗೆ ಉಳಿದವನೇ ಗೌಡ’ ಎಂಬಂತೆ ಅಂದಿನ ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿ ಎಂ.ಬಿ.ದ್ಯಾಬೇರಿ ಅವರನ್ನು ಈ ವಿಶೇಷಾಧಿಕಾರಿ ಸ್ಥಾನಕ್ಕೆ ಕೂರಿಸಿದರು. ಈತ ಮಾಡಿದ ತಿಕ್ಕಲು ಕೆಲಸಗಳಿಂದ ಇವತ್ತು ತುಮಕೂರು ವಿಶ್ವವಿದ್ಯಾಲಯ ಚೇತರಿಸಿಕೊಳ್ಳಲಾಗದೇ ನಲುಗಿಹೋಗಿದೆ.

ಎಂ.ಬಿ. ದ್ಯಾಬೇರಿ ಮಾಡಿದ್ದೇನು?

ಇಂದಿಗೂ ಪಕ್ಕಾ ಕಾಂಗ್ರೆಸ್ ಕಾರ್ಯಕರ್ತನಾಗೆ ವರ್ತಿಸುವ ಈತ ತನ್ನ ಅಧಿಕಾರವನ್ನೂ ದುರುಪಯೋಗಪಡಿಸಿಕೊಂಡು ವಿಶ್ವ ವಿದ್ಯಾಲಯದಲ್ಲಿ ಮಂತ್ರಿ ಮಹೋದಯರ, ಶಾಸಕರ ಬಾಲಂಗೋಚಿಗಳಿಗೆ ಅಕ್ರಮ ನೇಮಕಾತಿ ಮಾಡಿದರು. ಅಷ್ಟೆ ಅಲ್ಲಾಂತ ಹೇಳಿ

ಪುಟ 11 ಕ್ಕೆ



ಅಂಬೇಡ್ಕರ್ ಭವನವೇ ಆಡಳಿತ ಕಛೇರಿ!

ಸ್ನಾತಕೋತ್ತರ ಕೇಂದ್ರದಲ್ಲಿ 10 ಲಕ್ಷ ವೆಚ್ಚದ ಹೆಲ್ಲುಹಾಸು!



ಕೋಲೆ ಬಸವರಂತಿರುವ ಸಿಂಡಿಕೇಟ್ / ಶೈಕ್ಷಣಿಕ ಮಂಡಳಿ ಸದಸ್ಯರು

ವಿದ್ಯಾರ್ಥಿಗಳ ಶುಲ್ಕಗಳನ್ನು ಹೆಚ್ಚಿಸಿದರೂ, ಅಕ್ರಮ ನೇಮಕಾತಿಗಳು ನಡೆದರೂ ಮೂಲ ಸೌಕರ್ಯಗಳೇ ಇಲ್ಲದ ಕಾಲೇಜುಗಳಿಗೆ ಮಾನ್ಯತೆ ನೀಡುವ ವಿಚಾರದಿಂದ ಹಿಡಿದು ಯಾವುದೇ ಹಣಕಾಸಿನ ವಿಚಾರಗಳು ಚರ್ಚೆಗೆ ಬಂದರೂ ಸಭೆಯಲ್ಲಿ ಮಾತ್ರ ಸ್ತಬ್ಧ ಮುಖರಂತೆ ವರ್ತಿಸುವ ಈ ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿ ಸದಸ್ಯರು ಕುಲಪತಿಗಳು ಸಭೆಯಲ್ಲಿ ಮಂಡಿಸುವ ಕಾರ್ಯ ಸೂಚಿಗಳಿಗೆ ಕೋಲೆ ಬಸವರಂತೆ ತಲೆ ಅಲ್ಲಾಡಿಸುತ್ತಾ ತಮ್ಮ ಸಹಮತವನ್ನು ವ್ಯಕ್ತಪಡಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಖಾಸಗಿ ಕಾಲೇಜಿನ ಕೆಲವರು ಪ್ರಾಂಶುಪಾಲರು ಮೂಲಸೌಕರ್ಯಗಳಿಲ್ಲದ ತಮ್ಮ ಕಾಲೇಜಿಗೆ ಎಲ್ಲಿ ಮಾನ್ಯತೆ ರದ್ದು ಮಾಡುತ್ತಾರೆ ಎಂಬ ಭೀತಿಯಿಂದಲೂ ವರ್ತಿಸುತ್ತಿದ್ದಾರೆ. ಸರ್ಕಾರಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ತಮಗೆ ಅಧಿಕಾರ ನೀಡಿದ ಪರಿಣಾಮ ಕೃತಜ್ಞತಾಪೂರಕರಂತೆ ವರ್ತಿಸುತ್ತಾರೆ. ಶೈಕ್ಷಣಿಕ ಮಂಡಳಿಗೆ ವಿದ್ಯಾರ್ಥಿಗಳನ್ನು ನೇಮಿಸಲು ಅವಕಾಶವಿದ್ದರೂ ಕುಲಪತಿಗಳು ಮಾತ್ರ ಈ ವರೆಗೂ ಮನಸ್ಸು ಮಾಡಿಲ್ಲ.

ಜಾಹೀರಾತು ದಂಧೆ :

ವಿಶ್ವವಿದ್ಯಾಲಯ ‘ಬಾಲಗ್ರಹ’ ಪೀಡಿತ, ಯಾವುದೇ ಅಭಿವೃದ್ಧಿ ಕಾಣದ ವಿಶ್ವವಿದ್ಯಾಲಯ ಎಂಬ ಅಪಕೀರ್ತಿಗೆ ಒಳಗಾಗಿರುವ ತುಮಕೂರು ವಿ.ವಿ.ಯಲ್ಲಿ ಜಾಹೀರಾತು ದಂಧೆಯು ಮುಂದುವರೆದಿದೆ. ನೇಮಕಾತಿಯಲ್ಲಿ ಅಕ್ರಮಗಳು ಒಂದೆಡೆಯಾದರೆ, ವಿಶ್ವ ವಿದ್ಯಾಲಯದ ವಿರುದ್ಧ ಯಾರು ಧ್ವನಿ ಎತ್ತುತ್ತಾರೋ ಅವರನ್ನು ಭ್ರಷ್ಟಾಚಾರ ಕೂಪಕ್ಕೆ ತಳ್ಳುವ ಚಾಣಕ್ಷ ಬುದ್ಧಿ ಇಲ್ಲಿನ ಕುಲಪತಿಗಳು ಕರಗತಮಾಡಿಕೊಂಡಿದ್ದಾರೆ. ಕೋಮುವಾದಿ ವಿದ್ಯಾರ್ಥಿ ಸಂಘಟನೆಯ ಮುಖಂಡನೊಬ್ಬನಿಗೆ 12 ಲಕ್ಷ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ನೇಮಕಾತಿ ಜಾಹಿರಾತನ್ನು ನೀಡಿದ್ದಾರೆಂಬ ಊಹಪೋಹಗಳು ಇವೆ. ಅಷ್ಟಲ್ಲದೆ, ತುಮಕೂರಿನಲ್ಲಿ ಹಿರಿಯ ಪತ್ರಕರ್ತ ಮಹಾಶಯರಿಗೆ ಪ್ರತಿ ತಿಂಗಳು ಕಮಿಷನ್ ನೀಡಿ ವಿಶ್ವವಿದ್ಯಾಲಯದ ಅಕ್ರಮಗಳ ಬಗ್ಗೆ ಚಕಾರವೆತ್ತದಂತೆ ಬಾಯಿ ಮುಚ್ಚಿಸಿ ತಮ್ಮ ಅಕ್ರಮಗಳನ್ನು ಪೋಷಿಸುವಂತೆ ಪ್ರೇರೇಪಣೆ ಮಾಡುತ್ತಿರುವುದು ಒಂದೆಡೆಯಾದರೆ ಹಿರಿಯ ಪತ್ರಕರ್ತರೆಂದು ಸ್ವಘೋಷಿಸಿಕೊಂಡಿರುವವರು ಜಾಹಿರಾತಿಗಾಗಿ ತಮ್ಮ ಸ್ವಂತಿಕೆಯನ್ನು ಮಾರಿಕೊಂಡವರಂತೆ ವರ್ತಿಸುತ್ತಿರುವುದು ಸಹ ವಿ.ವಿ.ಯಲ್ಲಿ ನಡೆಯುವ ಅಕ್ರಮಗಳು ಬೆಳಕಿಗೆ ಬಾರದಿರಲು ಪ್ರಮುಖ ಕಾರಣವಾಗಿದೆ.





ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ

ಮನೆಯ ಮಾಲೀಕರು ಪ್ರತಿ ಮಾತಿಗೊಮ್ಮೆ 'ಬಸವ ಬಸವ' ಎನ್ನುತ್ತಿದ್ದರು. ಸ್ಟೀಲ್ ಗ್ಲಾಸಿನಲ್ಲಿ ನೀರು ತರಿಸಿದರು. ಚಹಾದೊಂದಿಗೆ ಬಿಸ್ಕಿಟ್ ಕೊಟ್ಟರು. ಸರಿ ಮನೆ. ಪಸಂದಾಯ್ತು. ತಿಂಗಳ ಬಾಡಿಗೆ ಫಿಕ್ಸಾಯ್ತು. ಮನೆಯ ಮಾಲೀಕರು ಥಟ್ಟಂತ ಗೆಳೆಯನಿಗೆ ಕರೆದರು. ಯುವಕ ಗೇಟಾಚೆಗೆ ನಿಂತ ಗೆಳೆಯ ಮತ್ತು ಮನೆಯ ಮಾಲೀಕ ಒಂದೈದು ನಿಮಿಷ ಅದೇನೇನೋ ಮಾತಾಡಿದರು. ಗೆಳೆಯ ಮಾತು ಮುಗಿಸಿ ಈಚೆ ಬರುವಾಗ ಹುಬ್ಬುಗಳ ನಡುವಿಗೆ ಗಂಟಿತ್ತು.

'ಮನದೊಳಗೆ ರಜ ತುಂಬಿ...'

ಸಮ್ಮೇಳನದ ದಣಿವು ಶರೀರ ಬಿಟ್ಟಿರಲಿಲ್ಲ. ಅಂತೆಯೇ ಯಶಸ್ವಿ ಸಮ್ಮೇಳನದ ಹರುಷ. ಮನದ ತುಂಬ ಹರವಿಕೊಂಡಿತ್ತು. ಸಮ್ಮೇಳನದ ಎರಡನೇಯ ದಿನ ಸಾಯಂಕಾಲದ ಸಾಂಸ್ಕೃತಿಕ ಸಂಜೆಯಲ್ಲಿ ಮಹಿಳಾ ಸಮಾನತೆಗಾಗಿ ಹಾಗೂ ಜಾತಿ ವ್ಯವಸ್ಥೆ ವಿರೋಧಿಸಿ ಕಾಯಕ ಜೀವಿಗಳು ಬರೆದ ವಚನಗಳ ಸಂಗ್ರಹ. "ಬಯಲಿಲ್ಲದ ಬಯಲು" ಬಿಡುಗಡೆ ಮಾಡಿ ಜನವಾದಿಯ ಕೇಂದ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ, ಸುಧಾ ಮತ್ತು ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಸಿದ್ದರಾಮ ಶರಣರು ಆಡಿದ ಮಾತುಗಳನ್ನು ಮೆಲುಕು ಹಾಕುತ್ತಿದ್ದೆ. ಈ ನೆಲದಲ್ಲಿ ನಡೆದ ಜನಪರ ಚಳುವಳಿಯನ್ನು ಮುನ್ನಡೆಸುವ ಹೊಣೆ ಹೊರಬೇಕಾದದ್ದು ಎಡ ಚಳುವಳಿಯೇ. ನಿಭಾಯಿಸುತ್ತಿದೆ. ಆದರೆ ಸಾಲದು. ಇನ್ನಷ್ಟು ಆಳ. ಇನ್ನಷ್ಟು ವಿಸ್ತಾರ. ಚಳುವಳಿಗಾರರ ಅರಿವಿನ ಬೇರಿಗೆ ಆಹಾರಬೇಕು. ಚಳುವಳಿಯ ಧಾರೆಗೆ ಕಳಚಿದ ಕೊಂಡಿಗಳ ಹೆಣೆಯುತ್ತ ಹೋರಾಟದ ಬಾವುಟವೆತ್ತಿ ಹೊರಡಲೇಬೇಕು. ಕೇರಳದ ಗುರು ನಾರಾಯಣ ಚಳುವಳಿ. ಪಶ್ಚಿಮ ಬಂಗಾಳದ ಅಸಂಖ್ಯಾತ ಸುಧಾರಣಾ ಚಳುವಳಿಗಳು ಮನಪಟಲದಲ್ಲಿ ಹಾದು ಹೋದವು. ಅಲ್ಲಿಯ ಎಡ ಚಳುವಳಿಗಳು 'ಚಿಂತನೆ ಮತ್ತು ಚಳುವಳಿ'ಯನ್ನು ಪ್ರಜ್ಞಾಪೂರ್ವಕವಾಗಿ ಕಟ್ಟಿ ಬೆಳೆಸಿದ್ದೇ ಒಂದು ಆಂದೋಲನ. ಮತ್ತು ಇಂದಿನ ಹೊಸ ದಿನಗಳು...

ಎಲ್ಲ ರಾಜ್ಯಗಳಿಗಿಂತಲೂ ಆರಂಭದಲ್ಲೇ ಕರ್ನಾಟಕದ ನೆಲವು ಅನೇಕ ಪ್ರಖರ ಚಳುವಳಿಗೆ ಸಾಕ್ಷಿಯಾಗಿದೆ. ಈ ಹೊತ್ತಿನವರೆಗೂ ಆ ಪ್ರತಿಭಟನೆಯ ಕಾವು ಅಸ್ತ್ರದಂತೆ ಇದೆ. ಆದರೆ ಆಂದೋಲನ ಮುಂದಕ್ಕೊಯ್ಯುವ ಮನಸುಗಳು..?! ಯಾರೋ ಬಾಗಿಲು ಬಡಿದ ಶಬ್ದ. ಮಹಾಂತೇಶ ನಿಂತಿದ್ದ. ಇಷ್ಟಗಲದ ನಿಷ್ಕಲ್ಮಷ ನಗೆ ಚೆಲ್ಲಿ, ಒಡನೆಯೇ 'ಅಕ್ಕ ಈ ಬಾರಿ ಕತಿ' ಬರೀಲಾಕ ಒಂದ್ ವಸ್ತು ಕುಡ್ತೀನಿ. ಪ್ರತಿ ಬಾರಿ ನಿನ್ನ ಜೊತೆಗೆ ಮಾತಾಡಿದ ಮ್ಯಾಲನಾ ಕತಿ ಬರಿಲಾಕ ಪ್ರೇರಿತ ಆಗ್ತಿದ್ದೆ. ಈಗ ನೀ ಬರಿ..." ಅಂದು ನೆಲದ ಮ್ಯಾಲೆ ನಿರಮ್ಮಳ ಕೂತನು. ಥೇಟ್ ಮಕ್ಕಳ ಮನಸಿನಂಥ ಈ ಕತೆಗಾರ ಖುಷಿ ತರುವ ಆತ್ಮೀಯ ಗಳಿಗೆಗಳಿಗೆ ಬಣ್ಣ ತುಂಬುವುದರಲ್ಲಿ ನಿಪುಣ. ಸಣ್ಣ ಗ್ಲಾಸಿನ ತುಂಬ ಬಿಸಿಯ ಚಹಾ ಸವಿಯುತ್ತ ಮಹಾಂತೇಶನ ಮಾತಿಗೆ ಕಿವಿಯಾದೆ.

ಅಕ್ಷರ ಪ್ರತಿಷ್ಠಾನದಲ್ಲಿ ಕೆಲಸ ಮಾಡಲು ಬೆಂಗಳೂರಿನ ದಲಿತ ಯುವಕನೊಬ್ಬ ಆರಿಸಿಕೊಂಡ ಊರು 'ಸೂರ್ಯನಗರಿ' ಕಲ್ಬುರ್ಗಿ! 'ಉರಿ ಬಿಸಿಲಿದ್ದರೇನಾಯ್ತು, ಶರಣರು ಹದ ಮಾಡಿದ ಈ ನೆಲದಲ್ಲಿ ಸಮಾನತೆಯ ತಂಗಾಳಿ ಬೀಸ್ತದೆ. ಜಾತಿ ಬೇಧ ಇಲ್ಲ. ಒಮ್ಮೆ ಇಲ್ಲಿಗೆ ಬಂದು ನೋಡು' ಅಂತ ಬಸವಾನುಯಾಯಿಯೊಬ್ಬರು ತುಂಬ ಅಭಿಮಾನದಿಂದ ದಲಿತ ಯುವಕನನ್ನು ಕರೆದರು. ಹಾಗೆ ಹೇಳುವುದರಲ್ಲಿ ಒಂದಿಷ್ಟು ನಂಬಬೇಕಾದ ಅಂಶಗಳೂ ಇವೆ. ಹದಿಮೂರರಿಂದ ಹದಿನೆಂಟನೆಯ ಶತಮಾನದವರೆಗೂ ಸನಾತನಿಗಳ ಕೈಯಲ್ಲಿ ಸಿಕ್ಕು ಮೌನವಾಗಿದ್ದ ವಚನ ಸಾಹಿತ್ಯದೊಳಗಿನ ಪ್ರಖರ ವೈಚಾರಿಕತೆ ಬಯಲಿಗೆ ಬಂದಿದ್ದು ಇತ್ತೀಚಿನ ದಿನ ಮಾನಗಳಲ್ಲಿ ಮಾತ್ರ. ಹೀಗಾಗಿ ಲಿಂಗಾಯುತ ಸಮಾಜದ ಕೆಲವರಾದರೂ ಪ್ರಗತಿ ಪರತೆಯತ್ತ ಮುಖ ಮಾಡಿದ್ದಿದೆ, ಸರಿ, ಬಸವಭಕ್ತ ಮತ್ತು ದಲಿತ ಯುವಕ ಇಬ್ಬರೂ ವಾಸಕ್ಕಾಗಿ ಬಾಡಿಗೆ ಮನೆ ತಲಾಶಿಗೆ ಹೊರಟರು.

ಮೊದಲ ಮನೆ ಸುಂದರ ಕಟ್ಟಡ: ಸುಸಂಸ್ಕೃತ(!) ಮನೆ ಜನ "ಶರಣು ಬರ್ರಿ" ಹೇಳಿದರು. ಗೋಡೆಯ ಮೇಲೆ, ಪೂಜೆಯಲ್ಲಿ ಮಗ್ನನಾದ ಅರೆಬಿರಿದ ಕಂಗಳ, ಸಮತೆಯ ತಪಸ್ವಿಯಂತೆ, ನೋಡಿದ ಕೂಡಲೇ ಸೆಳೆದು ಗೌರವ ಉಕ್ಕಿಸುವಂಥ ಬಸವಣ್ಣನ ಫೋಟೋ ಬಂಗಾರ ಬಣ್ಣದ ಕಟ್ಟಿನಲ್ಲಿತ್ತು. "ಬಾಬು ಎರಡು ಖೋಲಿ ಅವಾ ಅಲ್ರೀ. ಬಾಡಿಗೆದಾರರಿದ್ರ ಹೇಳ್ರೀ ಅಂದಿದ್ರೆಲ್ಲ. ಇವ್ರಿಗೆ ಬೇಕಾಗ್ಯಾವ...!" ಅಂತ ಯುವಕನ ಗೆಳೆಯ ಮನೆ ಸಿಕ್ಕೇ ಬಿಡುವ ವಿಶ್ವಾಸದಲ್ಲಿ ಹೇಳಿದರು. ಅಲ್ಲಿಯವರೆಗೂ ತುಟಿಯರಳಿಸಿ ನಗುತ ಮಾತಾಡಿದ ಮನೆಯ ಜನರ್ರು, ಯುವಕನತ್ತ ಕಣ್ಣು ಹೊರಳಿಸಿದರು. "ಹೆಸರೇನ್ರಿ...? ಯಾ ಊರು?...' ಪ್ರಶ್ನಿಸುತ ಪ್ರಶ್ನಿಸುತ ಯುವಕ ದಲಿತ ಎಂಬುದನ್ನು ಪತ್ತೆ ಹಚ್ಚಿ, ಮನಿ ಕುಡ್ತಿದ್ದೇವು. ಆದ್ರ.... ಮುಂದಿನ ತಿಂಗಳು ನೆಂಟ್ರು ಬರ್ತಾರ, ಜಾಗಾ ಸಾಕಾಗಾದಿಲ್ಲ. ಅದಕ್ಕೆ ಬಾಡಿಗೆ ಕುಡಲಾಕ ಆಗಾದಿಲ್ರೀ..." ಅಂತ ಅದ್ಭುತ ನಯವಾಗಿ ಹೇಳಿದರು. ಗೆಳೆಯನ ಮುಖ ಚಿಂತೆಯಿಂದ ಸಣ್ಣಗಾಯ್ತು. ಮಾಡುವುದೇನು?

ಬಸವ ಬಸವ ಎನ್ನುತ್ತಿದ್ದರು

"ಇನ್ನೊಬ್ರು ಗೆಳ್ಯಾರು ಹರಾ. ಅವ್ರು ಗ್ಯಾರಂಟಿ ಮನಿ ಕುಡ್ತಾರ ಮನ್ನೆ ಅವ್ರು ಬಾಡಿಗೆದಾರರು ಮನಿ ಖಾಲಿ ಮಾಡ್ಯಾರ. ಅವ್ರೇನ್ ಜಾತಿ ಪಾತಿ ಅನಾಂಗಿಲ್ಲ" ಯುವಕನಿಗೆ ಮನದಟ್ಟಾಗಿಸುತ. ಇನ್ನೊಂದು ಬಂಗಲೆಗೆ ಧಾವಿಸಿದರು. ಮನೆಯ ಮಾಲೀಕರು ಪ್ರತಿ ಮಾತಿಗೊಮ್ಮೆ 'ಬಸವ ಬಸವ' ಎನ್ನುತ್ತಿದ್ದರು. ಸ್ಟೀಲ್ ಗ್ಲಾಸಿನಲ್ಲಿ ನೀರು ತರಿಸಿದರು. ಚಹಾದೊಂದಿಗೆ ಬಿಸ್ಕಿಟ್ ಕೊಟ್ಟರು. ಅವರ ಮನೆಯಲ್ಲಿ ಫೋಟೋದಲ್ಲಿ ಬಸವಣ್ಣ ವಚನ ಬರೆವಲ್ಲಿ, ಮಗ್ನನಾಗಿದ್ದ. ಬಾಗಿಲಿನ ಚೌಕಟ್ಟಿನ ನಡುವಲ್ಲಿ ಸ್ಟಿಕ್ಕರ್ ಇತ್ತು. "ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ... ಕುಲವೆಂದೇ ತನ್ನ ತಾನರಿದವಂಗೆ" ವಚನ ಸ್ಫುಟವಾಗಿ ಬರೆದಿತ್ತು. ಸರಿ ಮನೆ. ಪಸಂದಾಯ್ತು. ತಿಂಗಳ ಬಾಡಿಗೆ ಫಿಕ್ಸಾಯ್ತು. ದೇಶಾವರಿ ನಗೆ ನಗುತ ಕೈ ಮಿಲಾಯಿಸಿ ಹೊರ ಬಂದರು. ಮನೆ ಕೊಡಿಸಿದ ಕೂಡ್ಲೆ ಗೆಳೆಯನಿಗೆ ಗೇಟು ದಾಟಿ ಆಚೆ ಬಂದರು. ಮನೆಯ ಮಾಲೀಕರು ಥಟ್ಟಂತ ಗೆಳೆಯನಿಗೆ ಕರೆದರು. ಯುವಕ ಗೇಟಾಚೆಗೆ ನಿಂತ ಗೆಳೆಯ ಮತ್ತು ಮನೆಯ ಮಾಲೀಕ ಒಂದೈದು ನಿಮಿಷ ಅದೇನೇನೋ ಮಾತಾಡಿದರು. ಗೆಳೆಯ ಮಾತು ಮುಗಿಸಿ ಈಚೆ ಬರುವಾಗ ಹುಬ್ಬುಗಳ ನಡುವಿಗೆ ಗಂಟಿತ್ತು. ಕಣ್ಣಂಗಳದಲ್ಲಿ ಅಸಹಾಯಕತೆ ಸಿಟ್ಟು ಸರಿದಾಡುತ್ತಿತ್ತು. "ಏನಾಯ್ತು"? ಅಂತ ಯುವಕ ಕೇಳೇ ಕೇಳಿದ. ಊಹುಂ ಗೆಳೆಯ ಮಾತಾಡಲಿಲ್ಲ. "ಇರ್ಲಿ ಬಿಡು. ಬ್ಯಾರೆ ಮನಿ ಹುಡಕಾಣಾ..." ಹೆಜ್ಜೆ ಬಿರುಸಾಗಿ ಹಾಕಿದ. ಯುವಕನಿಗೆ ಗೊತ್ತಾಗಿತ್ತು. ತನ್ನ ಜಾತಿ ಯಾವುದೆಂದು ಮಾಲಿಕ ಕೇಳಿರುವನೆಂದು. ಎರಡು ಮನೆಗಳು ಕೈ ತಪ್ಪಿ ಹೋದವು. ಛಲ ಬಿಡದ ತ್ರಿವಿಕ್ರಮನಂತೆ ಇಬ್ಬರು ಹುಡುಕೇ ಹುಡುಕಿದರು.

ಒಂದು ಮನೆಯಂತೂ ಇನ್ನೇನು ಎಲ್ಲ ಅಗ್ನಿ ಪರೀಕ್ಷೆ ದಾಟಿ, ಪಾಸಾಗಿ ಗೆದ್ದೆವು ಎನ್ನುವಾಗಲೇ ಮನೆಯೊಡತಿ ತುಂಬ ಶಾಂತಳಾಗಿ, ಶರಣ ಭಾಷೆಯಲ್ಲಿ "ನೋಡ್ರೀ ನಮುಗ ಜಾತಿ ಮುಖ್ಯ ಅಲ್ಲ. ಶಿವ ಮಾದಾರ ಚನ್ನನ ಮನ್ಯಾಗೇ ಅಂಬಲಿ ಉಂಡ ಮ್ಯಾಲ ಜಾತಿ ಎಲ್ಲಿಯದು...?" ಅಂದಾಗ ಖಂಡಿತ ಇಬ್ಬರಿಗೂ ಎದೆ ತುಂಬಿ ಬಂದಿತು. ಮುಂದುವರೆದು ಆ ಮಹಿಳೆ, "ನೀವು ನಾನ್‌ವೆಜ್"? ಎಂದು ಪ್ರಶ್ನಿಸಿದಳು. ವಿಶಾಲ ಮತ್ತು ಪ್ರಗತಿಪರಳಂತೆ ಮಾತಾಡಿದ್ದಕ್ಕಾಗಿ ಹಗುರಾಗಿದ್ದ ಯುವಕ ಯಥಾರ್ಥತೆಯಿಂದ "ಮನೆಯಲ್ಲಿ ಮಾಡುದಿಲ್ಲ.." ಎಂದನು. "ಅಂತೂ ನಾನ್‌ವೆಜ್ ನಡೀತದ ಅಂತಾಯ್ತು" ಅಂದ ಆ ಮಹಿಳೆ ಸಂಜಿಗೆ ಫೋನ್ ಮಾಡ್ರೀ... ಮನಿ ಕುಡ್ತೀನಿ ಇಲ್ಲಾಂತ ತಿಳಿಸ್ತೀನಿ..." ಅನ್ನ ಬೇಕಾ !? ಈಗ ಇಬ್ಬರೂ ಖರೆನೇ ಹತಾಶರಾದರು. ಕೈಮುಗಿದು ಎದ್ದು ಈಚೆ ಬಂದರು. "ಶರಣು, ಮತ್ತೆ ಬರ್ರಿ" ಅಂದ ಮಹಿಳೆ ನಗುಮೊಗದಿಂದ ಒಳಸರಿದಳು. ಇವರಿಬ್ಬರೂ ಚಿಂತಾಕ್ರಾಂತರಾಗಿ ರಸ್ತೆಗೆ ಬಂದರು. "ಅಲ್ಲಪ್ಪ, ವೆಜ್ ಅಂತ ಯಾಕೆ ಹೇಳ್ಲಿಲ್ಲ...."? ಎಂದು ಗೆಳೆಯ ಯುವಕನಿಗೆ ರೇಗಿದ.

ಮತ್ತೆ ಹುಡುಕಾಟ ಸುರು. ಕಚೇರಿಗೆ ಸಮೀಪದ ಕಾಲೋನಿಗಳು ವೀರಶೈವರ ಮನೆಗಳಿಂದ ಕೂಡಿದ್ದವು. ಇತರೆ ಜಾತಿಯವರ ಮನೆಗಳಿಗೂ ಏನಾದರೊಂದು ಸಮಸ್ಯೆ. ಕಲ್ಬುರ್ಗಿಯ ಮುಗಿಲ ಮೇಲಿನ ಸೂರ್ಯ ಮೆತ್ತಗಾಗಿ ಮರೆಯಾದ. ಬಿಸಿಲಿಗೆ ಬಸವಳಿದ ಇಬ್ಬರು ಸಮಸ್ಯೆಗೆ ಪರಿಹಾರ ಹುಡುಕಲು ಒಂದು ಕಡೆ ಠಿಕಾಣಾ ಹಾಕಿದರು. ಗೆಳೆಯ ಕಡೆಗೂ ಯಾರ್‍ಯಾರಿಗೋ ಫೋನಾಯಿಸಿ ಸಲಹೆ ಪಡೆದು, ಗೆದ್ದಂತೆ ಮುಖವರಳಿಸಿ "ದೋಸ್ತ, ಕಛೇರಿ ಸಮೀಪ ಮತ್ತ ಎಲ್ಲೆಂದ್ರ ಅಲ್ಲಿ ಅನುಕೂಲದ ಮನಿ ಬೇಕಂದ್ರ, ನೀ ಲಿಂಗದೀಕ್ಷಾ ಯಾಕ ತಗೋಬಾರದು?" ಅಂದನು. "ಆದ್ರ ನಾನ್‌ವೆಜ್ ಇದ್ದಿನಲ್ಲ..."? ಅನುಮಾನಿಸಿದ ದಲಿತ ಯುವಕ. "ಬಿಟ್ರಾಯ್ತು" ಅಂದ ಗೆಳೆಯ. "ತಿಂದೀವಿ ಅಂತ ಡಂಗುರ ಯಾಕ ಸಾರಬೇಕು?" ನಗುತ ಹೇಳಿದನು. ಬಹಳ ಹೊತ್ತು ಆಲೋಚನೆ ಮಾಡಿದ ಯುವಕ ಚಹಾದ ಕೊನೆ ಗುಟುಕು ಹೀರಿ, 'ಈ ಊರಲ್ಲಿ ಭೀಮನಗರ ಎಲ್ಲ್ಯೇದ'? ಕೇಳಿದ.

"... ಮಹಾಂತೇಶ ಮಾತು ಮುಗಿಸಿದ್ದ. ನನ್ನ ಕಣ್ಣಲ್ಲಿ ಹನಿಯಾಡುತ್ತಿತ್ತು. ಕಳೆದ ವರ್ಷ ಇಬ್ಬರು ಪ್ರೇಮಿಗಳ ವಿವಾಹದ ಸಮಯದಲ್ಲೂ ಮದುವೆಗೆ ಬಾರದ ಹುಡುಗಿಯ ತಂದೆ" ಲಿಂಗದೀಕ್ಷಾ ಮಾಡಿ ಮಡಿ ಮಾಡಸ್ರೀ. ಇಲ್ಲಂದ್ರ ಇಲ್ಲ..." ಅಂತ ಹೇಳಿದ ಮಾತು ನೆನಪಾಯ್ತು. ಇದೆಂಥ ಬ್ಲಾಕ್ ಮೇಲ್? "ಕಾಯಕದಲಿ ನಿರತನಾದಡೆ ಗುರುಲಿಂಗ ಜಂಗಮ" ದ ಹಂಗು ಹರೆದ ಬಸವಣ್ಣ ಇನ್ನಷ್ಟು ವರ್ಷ ನೀ ಬದುಕಬೇಕಿತ್ತು. ಎರೆದರೆ ನೆನೆಯದ ಮರೆದರೆ ಬಾಡದ ಹುರುಳಿಲ್ಲದ ಲಿಂಗಾರ್ಚನೆಯ ಬಗ್ಗೆ ನೀ ಸ್ಪಷ್ಟೀಕರಿಸುತ್ತಿದ್ದೆ. ಕುಲವೊಂದೇ ತನ್ನ ತಾನರಿದವಂಗೆ ಲಿಂಗ ದೀಕ್ಷೆ ಬೇಕೇ? ಅಲ್ಲಮನ ಸಿದ್ಧಾಂತ ಬಸವನ ವೈಚಾರಿಕತೆ ಧರ್ಮದ ಚೌಕಟ್ಟಿನಲ್ಲಿ ಲಾಂಛನಗಳ ನೆರಳಲ್ಲಿ ಬಂಧಿಸಿಡ ಹೊರಟ ನೂತನ ಪಾಳೇಗಾರಿ ವ್ಯಾಪಾರಿಗಳ ಬಣ್ಣ ಬಯಲಾಗಿಸದಿದ್ದರೆ ಹೇಗೆ?.....

ಅಧಿಕಾರ ಹಸ್ತಾಂತರ ಮಾಡಬೇಡಿ

ಪುಟ 8 ರಿಂದ

ಮೂಲಕ ಮೇಲ್ಜಾತಿ ಮೇಲ್ವರ್ಗಗಳಿಗೆ ಸ್ಪಷ್ಟ ಸಂದೇಶವನ್ನು ನೀಡಿದ್ದಾರೆ. ಗೋ ಸಮ್ಮೇಳನಕ್ಕಾಗಿ ರಾಜ್ಯದ ಬೊಕ್ಕಸದಿಂದ ಕೋಟಿಗಟ್ಟಲೆ ರೂ. ವ್ಯಯ ಮಾಡುವ ಮೂಲಕ ಅದನ್ನು ಮಾಡಿದ್ದಾರೆ. ಈ ಸಂದೇಶದ ಸುಳಿವು ಪಡೆದು ಪುಳಕಿತರಾಗಿರುವ ಮಠಾಧಿಪತಿಗಳು 'ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಲೇಬೇಕು ಯಡಿಯೂರಪ್ಪ ಮುಖ್ಯಮಂತ್ರಿ ಆಗಲೇಬೇಕು' ಎಂದು ಕೂಗು ಹಾಕುತ್ತಿದ್ದಾರೆ. ಯಡಿಯೂರಪ್ಪ ಮುಖ್ಯಮಂತ್ರಿ ಆಗುವುದರಿಂದ ಬಡ ಲಿಂಗಾಯಿತರು ಉದ್ಧಾರ ಆಗುತ್ತಾರೆ ಎಂದು ಯಾರೂ ಭ್ರಮೆ ಇಟ್ಟುಕೊಳ್ಳಬೇಕಾಗಿಲ್ಲ. ಜಾತಿಯನ್ನು ಏಣಿಯಾಗಿ ಬಳಕೆ ಮಾಡಿಕೊಳ್ಳುವ ಪುಡಾರಿಗಳಲ್ಲಿ ಇವರೂ ಸೇರಿಕೊಂಡಿದ್ದಾರೆ ಎಂಬುದನ್ನು ರಾಜ್ಯದ ಸಾಮಾನ್ಯ ಲಿಂಗಾಯುತರು ಅರ್ಥ ಮಾಡಿಕೊಂಡರೆ ಅದು ಅವರಿಗೆ ಶ್ರೇಯಸ್ಕರ. ಬಸವಾದಿ ಶರಣರ ಕನಸುಗಳು ನನಸಾಗಬೇಕಾದರೆ ಇಂತಹ ಗೋಮುಖ ವ್ಯಾಘ್ರರಿಗೆ ತಕ್ಕ ಪಾಠ ಕಲಿಸಬೇಕಾಗಿದೆ.

ಭ್ರಷ್ಟ ಜನರ ಪಕ್ಷ :

ಬಿಜೆಪಿ ಎಂದರೆ ಭ್ರಷ್ಟ ಜನರ ಪಕ್ಷ ಎಂದು ಸಾಕಷ್ಟು ಸಾಬೀತಾಗಿದೆ. ಇವರ ಅಧ್ಯಕ್ಷರು ಲಂಚದ ನೋಟಿನ ಕಂತೆಗಳನ್ನು ಬಾಚಿ ಕೊಳ್ಳುತ್ತಿದ್ದುದನ್ನು ಇಡೀ ದೇಶದ ಜನ ನೋಡಿದ್ದಾರೆ. ಇವರ ಸಂಸತ್ ಸದಸ್ಯರು ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದು ತಮ್ಮ ಸಂಸತ್ ಸದಸ್ಯತ್ವವನ್ನು ಕಳೆದುಕೊಂಡಿದ್ದಾರೆ. ಪತ್ನಿಯ ಹೆಸರಿನಲ್ಲಿ ಮಹಿಳೆಯೊಬ್ಬರನ್ನು ಅಕ್ರಮ ಸಾಗಾಣಿಕೆ ಮಾಡಿ ವಿದೇಶಕ್ಕೆ ಕರೆದೊಯ್ದು ಬಿಜೆಪಿ ಸಂಸದ ಸಿಕ್ಕಿಬಿದ್ದಿದ್ದಾನೆ. ಇವು ನೀರಿನ ಮೇಲೆ ಕಾಣುವ ಕೆಲವು ತುಣುಕುಗಳು. ನೀರಿನ ಆಳದಲ್ಲಿ ಕಮಲದ ಕೆಳಗಿನ ಕೆಸರು ಎಷ್ಟಿರಬಹುದು?

ಕರ್ನಾಟಕದಲ್ಲಿ ಕಳೆದ 19 ತಿಂಗಳುಗಳಿಂದ ಬಿಜೆಪಿಯ ಮಂತ್ರಿಗಳು, ಶಾಸಕರು ಹಗಲು ರಾತ್ರಿ ಎನ್ನದೆ 'ದುಡಿಯುತ್ತಿದ್ದಾರೆ'! ರಾಜ್ಯದ ಅಭಿವೃದ್ಧಿ ಹೆಸರಿನಲ್ಲಿ ತಮ್ಮ ಸ್ವಂತ ಅಭಿವೃದ್ಧಿ ಮಾಡುತ್ತಿದ್ದಾರೆ! 'ದುಡ್ಡು ಮಾಡಿ' ಎಂಬುದೊಂದೇ ಅವರಿಗೆ ಕೊಟ್ಟಿರುವ ಜವಾಬ್ದಾರಿ. ಚುನಾವಣೆ ಯಾವ ಗಳಿಗೆಯಲ್ಲಾದರೂ ಬಂದು ಬಿಡಬಹುದು. ಚುನಾವಣೆಗೆ ಬೇಕು, ಚುನಾವಣೆಯ ನಂತರ ಏನಾಗುವುದೋ ಹೇಳಲಾಗದು. ಗಾಳಿ ಬೀಸುವಾಗ ತೂರಿಕೊಳ್ಳಬೇಕು. ಇದು ಈಗ ಅವರ ಮನದಲ್ಲಿನ ವಿಚಾರ. ಇಂತಹವರ ಕೈಯಲ್ಲಿ ಅಧಿಕಾರ.

ಜೆಡಿ(ಎಸ್) ಯೋಚಿಸಬೇಕು

ಜೆಡಿ(ಎಸ್) ಆತ್ಮ ವಿಮರ್ಶೆ ಮಾಡಿಕೊಳ್ಳುತ್ತಿದ್ದಂತೆ ಕಾಣುತ್ತದೆ. ಅದು ನಿಜವೆನ್ನುವುದಾದರೆ ನಾಡಿನ ಹಿತ ಬಯಸುವವರೆಲ್ಲರ ಬೆಂಬಲ ಅದಕ್ಕೆ ಸಿಗಲಿದೆ. ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವ ಬದಲಾಗಿ ತಟಸ್ಥ ನಿಲುಮೆಯನ್ನು ಅದು ತೆಗೆದುಕೊಂಡದ್ದು, ಅಷ್ಟರ ಮಟ್ಟಿಗೆ ಒಂದು ಸರಿಯಾದ ಹೆಜ್ಜೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿಯೂ ಅದು ಸ್ವತಂತ್ರವಾಗಿ ಸ್ಪರ್ಧಿಸಲು ಯೋಚಿಸುತ್ತಿರುವುದು ಒಳ್ಳೆಯ ನಿರ್ಧಾರವೇ./ ಬಿಜೆಪಿ ಅಭ್ಯರ್ಥಿಗಳ ವಿರುದ್ಧ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿ ಗೆಲ್ಲಿಸಲು ಅದು ಪ್ರಾಮಾಣಿಕ ಪ್ರಯತ್ನ ಮಾಡುವ ಮೂಲಕ ತಾನು ಇದುವರೆಗೆ ಬಿಜೆಪಿಯೊಂದಿಗೆ ಕೈ ಜೋಡಿಸಿದ ತಪ್ಪಿಗೆ ಪ್ರಾಯಶ್ಚಿತ ಮಾಡಬೇಕು. ಅದರಂತೆಯೇ ಅಕ್ಟೋಬರ್ 3 ರಂದು ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡುವ ಬದಲು ಪರ್ಯಾಯ ದಾರಿಯನ್ನು ಅದು ಕಂಡುಕೊಳ್ಳಬೇಕು.

ಮಾತುಕೊಟ್ಟ ತಪ್ಪಿಗೆ, ಬಿಜೆಪಿಗೆ ಅಧಿಕಾರ ಹಸ್ತಾಂತರ ಮಾಡಲೇಬೇಕೆಂಬ ಕಟ್ಟುಪಾಡಿಗೆ ಜೆಡಿ(ಎಸ್) ಒಳಗಾಗಬೇಕಾಗಿಲ್ಲ. ಇದು ಪುಣ್ಯಕೋಟಿಯ ಕಥೆಯಲ್ಲ, ಬಿಜೆಪಿ ಪಶ್ಚಾತ್ತಾಪಪಟ್ಟು ಪರಿವರ್ತನೆಯಾಗುವ ಹೆಬ್ಬುಲಿ ಅಲ್ಲ. ದುಷ್ಟರಿಗೆ ಕೊಟ್ಟ ಮಾತನ್ನು ಪಾಲಿಸಲೇ ಬೇಕಾಗಿಲ್ಲ ಜೆಡಿ(ಎಸ್) ಯೋಚಿಸಲಿ.

ಉಡುಪಿ ಹಿಂದುತ್ವವಾದಿಗಳಿಂದ ಬಾಲಕಿಯ ಮಾನಹರಣ !

ಉಡುಪಿಯ ಪ್ರೌಢಶಾಲೆಯೊಂದರ 9ನೇ ತರಗತಿಯ ವಿದ್ಯಾರ್ಥಿನಿಯೊಬ್ಬಳನ್ನು ಅಪಹರಿಸಿ ಕಾರಿನಲ್ಲಿ ಮಂಗಳೂರಿಗೆ ಒಯ್ದು ಅತ್ಯಾಚಾರ ನಡೆಸಿ, ಗೃಹ ಬಂಧನದಲ್ಲಿರಿಸಿ ಜೀವ ಬೆದರಿಕೆಯೊಡ್ಡಿದ್ದ 'ಹಿಂದೂ ಧರ್ಮ ರಕ್ಷಕ'ರನ್ನೂ ಉಡುಪಿಯ ಸರ್ಕಲ್ ಇನ್ಸ್‌ಪೆಕ್ಟರ್ ವಿಶ್ವನಾಥ ಬಂಧಿಸಿದ್ದಾರೆ. ಕಿನ್ನಿಮೂಲ್ಕಿಯ ಉಮೇಶ್ ಶೆಣೈ, ಅವನ ಸಹಚರ ಬಾಲು ಮತ್ತು ಶ್ರೀರಾಮ ಸೇನೆಯ ಜಿಲ್ಲಾ ಸಂಚಾಲಕ ಜಿತೇಶ್ ಹಾಗೂ ಆತನ ಪತ್ನಿ ರೇಷ್ಮಾ ಎಂಬುವರನ್ನು ಈ ಸಂಬಂಧ ಬಂಧಿಸಲಾಗಿದೆ.

ಆಗಸ್ಟ್ 10ರಂದು ಸಂಜೆ 4.30ಕ್ಕೆ ಮನೆಗೆ ಹೋಗಲೆಂದು ಬಸ್‌ಸ್ಟ್ಯಾಂಡ್‌ಗೆ ತೆರಳುತ್ತಿದ್ದ ಅಪ್ರಾಪ್ತ ವಯಸ್ಸಿನ ಹುಡುಗಿಯನ್ನು ಉಮೇಶ್ ಶೆಣೈ ಪರಿಚಿತನಂತೆ ಮಾತನಾಡಿಸಿ "ನನಗೆ ನಿನ್ನ ಮನೆಯವರ ಪರಿಚಯವಿದೆ, ಮನೆಗೆ ಬಿಡುತ್ತೇನೆ" ಎಂದು ಪುಸಲಾಯಿಸಿ ತನ್ನ ಕಾರು ಹತ್ತಿಸಿ ಬಾಲು ಎಂಬುವನ ಸಹಾಯದಿಂದ ಮಂಗಳೂರಿಗೆ ಕರೆದೊಯ್ದು ಹೋಟೇಲ್ ಕೊಠಡಿಯೊಂದರಲ್ಲಿ ಕೂಡಿ ಹಾಕಿ ಅತ್ಯಾಚಾರ ನಡೆಸಿದ್ದಾನೆ. ಹೆದರಬೇಡ, ನಿನ್ನನ್ನು ಮದುವೆಯಾಗುತ್ತೇನೆ. ಬೊಬ್ಬೆ ಹೊಡೆದರೆ ಜೀವ ಸಹಿತ ಬಿಡುವುದಿಲ್ಲ ವೆಂದು ಉಮೇಶ ಶೆಣೈ ಹುಡುಗಿಯನ್ನು ಬೆದರಿಸಿದ್ದನಂತೆ! ಮರುದಿನ ಆಕೆಯನ್ನು ಉಡುಪಿಯ ಇಂದ್ರಾಳಿಯಲ್ಲಿರುವ ಜಿತೇಶ್ ಹಾಗೂ ಆತನ ಪತ್ನಿ ರೇಷ್ಮಾ ಎಂಬಾಕೆಯ ಸಹಾಯದಿಂದ ಅವರ ಮನೆಯಲ್ಲಿ ಇರಿಸಿ ಈ ವಿಷಯದಲ್ಲಿ ಬಾಯಿ ಬಿಟ್ಟರೆ ನಿನ್ನನ್ನು ಮತ್ತು ನಿನ್ನ ಮನೆಯವರನ್ನು ಜೀವ ಸಹಿತ ಬಿಡುವುದಿಲ್ಲವೆಂದು ಈ ಮೂವರು ಬೆದರಿಕೆ ಹಾಕಿದ್ದಾರೆ.

ವಿದ್ಯಾರ್ಥಿನಿ ನಾಪತ್ತೆಯಾದ ಬಗ್ಗೆ ಮಲ್ಪೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆಗಸ್ಟ್ 13 ರ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾದ ಬಳಿಕ ಉಮೇಶ್‌ಶೆಣೈ ಆಕೆಯನ್ನು ತನ್ನ ಕಾರಿನಲ್ಲಿ ಕರೆದೊಯ್ದು ಸರ್ವಿಸ್ ಬಸ್ ನಿಲ್ದಾಣದಲ್ಲಿ ಬಿಟ್ಟು ಹೋಗಿದ್ದಾನೆ.

ದೌರ್ಜನ್ಯಕ್ಕೊಳಗಾಗಿರುವ ಈ ಹುಡುಗಿಯು ಬಡ ಹಿಂದೂ ಕುಟುಂಬವೊಂದಕ್ಕೆ ಸೇರಿದವಳಾಗಿದ್ದು, ಬಿಜೆಪಿಯ ಶಾಸಕರೊಬ್ಬರ ದೂರದ ಸಂಬಂಧಿಯೆಂದು ಹೇಳಲಾಗಿದೆ. ಶಾಸಕರ ಒತ್ತಾಯದಿಂದಲೇ ಪೋಲೀಸರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿರುತ್ತಾರೆ. ಸಂಘ ಪರಿವಾರದ ಅವಳಿ ಮಕ್ಕಳಾಗಿರುವ ಬಿಜೆಪಿ ಹಾಗೂ ಭಜರಂಗದಳ ಮತ್ತು ಅವುಗಳ ದಾಯಾದಿಯಾಗಿರುವ ಶ್ರೀರಾಮ ಸೇನೆಯ ನಡುವೆ ತಿಕ್ಕಾಟಗಳು ತೀವ್ರವಾಗುತ್ತಿದ್ದು ಬಂಧಿತರು ಹಾಗೂ ಭಜರಂಗಿಗಳ ನಡುವೆ ಈ ಹಿಂದೆಯೂ ಘರ್ಷಣೆಗಳು ನಡೆದಿವೆ. ಆರೋಪಿಗಳಲ್ಲೊಬ್ಬನಾದ ಜಿತೇಶ್ ಶ್ರೀರಾಮ ಸೇನೆಯ ಸಂಚಾಲಕನಾಗಿದ್ದಾನೆ. ಹಿಂದೂಗಳ ಉದ್ಧಾರಕ್ಕಾಗಿಯೇ ಹುಟ್ಟಿಕೊಂಡಿರುವುದಾಗಿ ಹೇಳಿಕೊಳ್ಳುವ ಈ ಹಿಂದುತ್ವವಾದಿಗಳು ಪರಸ್ಪರ ಮೇಲಾಟದಲ್ಲಿ ಬಡ ಹಿಂದೂ ಹುಡುಗಿಯರ ಮಾನಕ್ಕೆ ರಕ್ಷಣೆಯಿದೆಯೇ?

ವರದಿ: ಎ.ಎಸ್.ಆಚಾರ್ಯ

ಹಾಳುಬಿದ್ದ ತುಮಕೂರು ವಿ.ವಿ.

ಪುಟ 9 ರಿಂದ

ದೇವರಾಯನದುರ್ಗದ ಅರಣ್ಯ ಭೂಮಿಯನ್ನು ಕಂದಾಯ ಭೂಮಿ ಎಂದು ಪರಿವರ್ತಿಸಲು ಅಂದಿನ ಅರಣ್ಯಾಧಿಕಾರಿ ಶ್ರೀಕಂಠಯ್ಯನವರ ಮೇಲೆ ಪ್ರಭಾವ ಬೀರಿ ದಾಖಲೆಗಳನ್ನು ಸೃಷ್ಟಿಸಿದ್ದರು. ಇದರಿಂದ ಕುಪಿತರಾದ ಪರಿಸರ ವಾದಿಗಳು ಅರಣ್ಯ ಭೂಮಿ ರಕ್ಷಿಸುವಂತೆ ಭಾರತದ ಸರ್ವೋಚ್ಚನ್ಯಾಯಲಯಕ್ಕೆ ಮೊರೆ ಹೋದರು. ಇಷ್ಟೆಲ್ಲಾ ಆಗುವ ಹೊತ್ತಿಗೆ ಸರ್ಕಾರ ಒಬ್ಬರು ಕುಲಪತಿಗಳನ್ನು ವಿ.ವಿ. ಗೆ ನೇಮಕಾತಿ ಮಾಡುವ ಹುಡುಕಾಟದಲ್ಲಿತ್ತು. ಆಗ ದೊರತದ್ದು ಜಿಲ್ಲೆಯವರೇ ಆದ ಡಾ. ಓ. ಅನಂತರಾಮಯ್ಯ. ಇವರನ್ನು ಕುಲಪತಿಗಳನ್ನಾಗಿ ಮಾಡಿದರೆ ಕೊರಟಗೆರೆ ಕ್ಷೇತ್ರದಲ್ಲಿರುವ ಎಸ್ಸಿ ಜನಾಂಗದ ಮತ ಬ್ಯಾಂಕನ್ನು ಭದ್ರಪಡಿಸಿಕೊಳ್ಳಬಹುದೆಂಬ ದುರಾಲೋಚನೆಯಿಂದ ಚನ್ನಿಗಪ್ಪ ಮತ್ತು ಪರಮೇಶ್ವರ್ ಅಂದಿನ ಮುಖ್ಯಮಂತ್ರಿ ಧರ್ಮಸಿಂಗ್ ಮೇಲೆ ಒತ್ತಡ ತಂದು ಕುಲಪತಿಗಳ ನೇಮಕಾತಿ ಆದೇಶ ಹೊರಬರುವಂತೆ ನೋಡಿಕೊಂಡರು. ತುಮಕೂರು ವಿಶ್ವ ವಿದ್ಯಾಲಯಕ್ಕೆ ಕುಲಪತಿಗಳು ನೇಮಕವಾದ ಹೊಸದರಲ್ಲೆ ವಿಶ್ವವಿದ್ಯಾಲಯಕ್ಕೆ ಸರ್ಕಾರ ಐ.ಎಫ್.ಎಸ್.ನ ಹಿರಿಯ ಅಧಿಕಾರಿ ಸಿ.ಡಿ. ದೇವಯ್ಯ ಅವರನ್ನು ನೇಮಕ ಮಾಡಿತು. ಇಲ್ಲಿಂದ ವಿಶ್ವವಿದ್ಯಾಲಯದ ಕದರೇ ಬೇರೆಯಾಯಿತು ನೋಡಿ. ದಿನ ಬೆಳಗಾದರೆ ವಿಶ್ವವಿದ್ಯಾಲಯದಲ್ಲಿ ಮುಸುಕಿನ ಗುದ್ದಾಟ.

ಕುಲಪತಿ V/S ರಿಜಿಸ್ಟ್ರಾರ್ಸ್ :

ವಿಶ್ವವಿದ್ಯಾಲಯಕ್ಕೆ ಬಂದ ಹೊಸದರಲ್ಲಿ ಉತ್ಸಾಹದಿಂದ ಕೆಲಸ ನಿರ್ವಹಿಸುತಿದ್ದ ರಿಜಿಸ್ಟ್ರಾರ್ ಎರಡು ತಿಂಗಳು ಕಳೆಯುತ್ತಲೆ ಮಂಕು ಬಡಿದಂತಾದರು. ವಿಶ್ವವಿದ್ಯಾಲಯದ ನಿವೇಶನ ವಿವಾದ ಸುಪ್ರಿಮ್ ಕೋರ್ಟ್‌ನ ಎಂಪವರ್ ಕಮಿಟಿ ಮುಂದೆ ಇದ್ದುದರಿಂದ ಎರಡು ಮೂರು ಬಾರಿ ದೆಹಲಿಗೂ ಹೋಗಿ ಬಂದರು. ಹಲವು ಬಾರಿ ಅರಣ್ಯ ಭೂಮಿಯನ್ನು ಅಭಿವೃದ್ಧಿ ಕೆಲಸಕ್ಕೆ ಕೊಡಲು ಕಾನೂನಿನಲ್ಲಿ ಅವಶ್ಯಕವಿದೆ ಅರಣ್ಯ ಭೂಮಿಯನ್ನು ಡೀಫಾರೆಸ್ಟೇಷನ್ ಮಾಡಬಹುದು ಎಂದು ಹೇಳುತ್ತಿದ್ದ ಸಿ.ಡಿ. ದೇವಯ್ಯ ಅಕ್ರಮ ನೇಮಕಾತಿ, ಜಾತಿ ವೈಷಮ್ಯ ಸೇರಿದಂತೆ ಸ್ನಾತಕೋತ್ತರ ಕೋರ್ಸ್‌ಗಳಿಗೆ ನಡೆಯುತ್ತಿದ್ದ ಅಕ್ರಮ ಪ್ರವೇಶಗಳನ್ನು ವಿರೋಧಿಸಲು ಶುರುವಾದರು. ಅಂದಿನಿಂದಲೇ ಕುಲಪತಿ ಮತ್ತು ಸಿ.ಡಿ. ದೇವಯ್ಯ ಅವರ ನಡುವೆ ಮುಸುಕಿನ ಗುದ್ದಾಟ ಪ್ರಾರಂಭವಾಗಿದ್ದು. ಈ ಮುಸುಕಿನ ಗುದ್ದಾಟದಲ್ಲಿ ಸಿ.ಡಿ. ದೇವಯ್ಯ ಸೋತು ವಿ.ವಿ.ಯಲ್ಲಿ ಕೆಲಸ ನಿರ್ವಹಿಸಲಾಗದೆ ಬೇರೆಡೆ ವರ್ಗಾವಣೆ ಮಾಡಿಸಿಕೊಂಡರು. ಇಲ್ಲಿಂದ ಪ್ರಾರಂಭವಾದ ಆಡಳಿತದೊಳಗಿನ ಜಾತಿ ವೈಷಮ್ಯವು ಇಂದು ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳನ್ನು ಪ್ರತ್ಯೇಕಿಸುವ ಹಂತದ ವರೆಗೂ ಸಾಗಿ ವಿದ್ಯಾರ್ಥಿಗಳಲ್ಲಿ ಒಡಕನ್ನು ಉಂಟುಮಾಡಿ ಒಡೆದಾಳುವ ನೀತಿಗೆ ಪ್ರಾರಂಭದಲ್ಲೆ ಬುನಾಧಿಹಾಕಿ ಪೋಷಿಸುತ್ತಾ ಬರಲಾಗಿದೆ.

ನಂತರ ಬಂದ ಡಿ.ಎಫ್.ಎಸ್. ಅಧಿಕಾರಿಗಳಾದ ರಿಜಿಸ್ಟ್ರಾರ್ ಎ.ಕೆ. ಗರ್ಗ್, ಮೌಲ್ಯಮಾಪನ ಕುಲಸಚಿವ ನಿಜಲಿಂಗಪ್ಪ, ವಿತ್ತ ಅಧಿಕಾರಿ, ಹಾಲೇಶಪ್ಪ, ಮತ್ತೋರ್ವ ರಿಜಿಸ್ಟ್ರಾರ್ ಮೋಹನ್‌ದಾಸ್ ಕೂಡ ಇಲ್ಲಿನ ಒಳ ರಾಜಕೀಯ ಹಾಗೂ ಕಿರುಕುಳಕ್ಕೆ ತಾಳಲಾರದೆ ವರ್ಗಾವಣೆಗೊಂಡರು. ಈಗ ರಿಜಿಸ್ಟ್ರಾರ್ ಸ್ಥಾನದಲ್ಲಿ ಕುಲಪತಿಗಳ ಕೋಲೆ ಬಸವ ರಂಗನಾಥ್ ಇದ್ದಾರೆ.

ಅಕ್ರಮಗಳ ಸುತ್ತ ವಿ.ವಿ. :

ಆರ್ಥಿಕ, ಆಡಳಿತಾತ್ಮಕ ಅಕ್ರಮಗಳು ವಿ.ವಿಯಲ್ಲಿ ನಡೆದಿವೆ ಎಂದು ಈ ಹಿಂದೆ ರಿಜಿಸ್ಟ್ರಾರ್ ಆಗಿದ್ದ ಎ.ಕೆ. ಗಾರ್ಗ್‌ರವರು ಸರ್ಕಾರಕ್ಕೆ ಹಾಗೂ ರಾಜ್ಯಪಾಲರಿಗೆ ಪತ್ರ ಬರೆದು ತನಿಖೆ ಆಗುವಂತೆ ಒತ್ತಾಯಿಸಿದರು. ಇಷ್ಟೆ ಅಲ್ಲದೆ ವಿಶ್ವವಿದ್ಯಾಲಯದಲ್ಲಿ ಯಾವ ನಿರ್ಣಯವೂ ಕಾನೂನಿನ ಪ್ರಕಾರ ನಡೆಯುವುದಿಲ್ಲ ವಿ.ವಿ.ಯ ನೀತಿ ನಿಯಮಗಳನ್ನು ಕುಲಪತಿಗಳು ಧಿಕ್ಕರಿಸಿ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ ಎಂಬುದು ಇಲ್ಲಿನ ಆಡಳಿತಾಧಿಕಾರಿಗಳ ಅಂಬೋಣವಾಗಿತ್ತು. ಅದು ಅಕ್ರಮ ಪ್ರವೇಶವಾಗಿರಬಹುದು, ಅಕ್ರಮ ನೇಮಕಾತಿಯಾಗಿರಬಹುದು, ಶ್ರೀಮಂತರ ಮಕ್ಕಳಿಗೆ ಎಂ.ಇಡಿ. ಸೀಟುಗಳನ್ನು ಲಕ್ಷಾನುಗಟ್ಟಲೆ ಹಣ ಪಡೆದು ಮಾರಾಟ ಮಾಡುವ ಪದ್ಧತಿಯಿರಬಹುದು, ರಿಜಿಸ್ಟ್ರಾರ್ ರಜೆಯಲ್ಲಿರುವಾಗ ವಿ.ವಿ.ಯ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದುದ್ದು ಸೇರಿ ಈಗಾಗಲೇ 13 ರಿಂದ 15 ವರ್ಷ ಉಪನ್ಯಾಸಕ ವೃತ್ತಿ ಕೈಗೊಂಡಿರುವ ಸರ್ಕಾರಿ ಉಪನ್ಯಾಸಕರು ಸಹ ಹಣ ನೀಡಿ ವಿ.ವಿಯಲ್ಲಿ ಹೊಸದಾಗಿ ನೇಮಕಾತಿ ಪಡೆಯಬೇಕು ಎಂದು ಒತ್ತಡ ತಂದ ಆರೋಪಗಳು ಕುಲಪತಿಗಳ ಮೇಲೆ ಇವೆ.

ವಿಶ್ವ ವಿದ್ಯಾಲಯದಲ್ಲಿ ಕೋರ್ಸ್‌ಗಳ ಮಾರಾಟ

ತುಮಕೂರು ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಯಾವುದೇ ಮೂಲ ಸೌಕರ್ಯಗಳು ಇಲ್ಲದಿದ್ದರೂ ವಿಶ್ವವಿದ್ಯಾಲಯವು ಅಂತಹ ಕಾಲೇಜುಗಳಿಗೆ ವಿವಿಧ ಕೋರ್ಸ್‌ಗಳನ್ನು ತೆರೆಯಲು ಅನುಮತಿ ನೀಡಿದೆ. ಅಲ್ಲದೆ ಪದವಿ ಪೂರ್ವ ಕಾಲೇಜುಗಳಿಗೆ ಪದವಿ ಕೋರ್ಸ್‌ಗಳನ್ನು ತೆರೆಯಲು ಹಣ ಪಡೆದು ಮಾರಾಟ ಮಾಡಲಾಗಿದೆ ಎಂಬ ದಟ್ಟವಾದ ಆರೋಪಗಳು ವಿದ್ಯಾರ್ಥಿ ಸಮುದಾಯದಿಂದಲೇ ಕೇಳಿಬರುತ್ತಿವೆ. ಕಳೆದ ತಿಂಗಳು ನಡೆದ ವಿ.ವಿ. ಸಭೆಯಲ್ಲಿ ಎಂ.ಇಡಿ., ಕೋರ್ಸ್‌ಗಳನ್ನು ಖಾಸಗಿ ಕಾಲೇಜುಗಳಾದ ಶ್ರೀಕೃಷ್ಣ ಶ್ರೀದೇವಿ, ಸಿದ್ಧಾರ್ಥ ಹಾಗೂ ಸಿದ್ಧಗಂಗಾ ಕಾಲೇಜುಗಳಿಗೆ ತೆರೆಯಲು ಅನುಮತಿ ನೀಡಲಾಗಿದೆ. ಇದರ ಅಗತ್ಯವಾದರೂ ಇತ್ತೇ ಈಗಾಗಲೇ ತುಮಕೂರು ವಿಶ್ವವಿದ್ಯಾಲಯದಿಂದಲೇ ಎಂ.ಇಡಿ. ಕೋರ್ಸ್ ನಡೆಯುತ್ತಿದೆ ಎನ್ನುವ ವಿದ್ಯಾರ್ಥಿ ಸಮುದಾಯ ವಿಶ್ವವಿದ್ಯಾಲಯ ಮೂಲಸೌಕರ್ಯಗಳಿಲ್ಲದ ಕಾಲೇಜುಗಳಿಗೆ ಕೋರ್ಸ್‌ಗಳನ್ನು ಮಾರಾಟ ಮಾಡುತ್ತಿರುವ ಉದ್ದೇಶವಾದರೂ ಏನೆಂಬುದನ್ನು ಬಹಿರಂಗ ಪಡಿಸಬೇಕು. ಈಗಾಗಲೆ ಎಂ.ಇಡಿ. ಮುಗಿಸಿದವರೇ ನಿರುದ್ಯೋಗಿಗಳಾಗಿ ಉಳಿದಿರುವಾಗ, ಎಂ.ಇಡಿ ಕೋರ್ಸ್‌ಗಳನ್ನು ತೆರೆದು ಖಾಸಗಿಯವರು ಲಾಬಿ ಮಾಡಲು ವಿಶ್ವವಿದ್ಯಾಲಯ ನೇರವಾಗಿ ಸಹಕಾರ ನೀಡುತ್ತಿದೆ ಎಂದು ದೂರುತ್ತಾರೆ. ಇಷ್ಟೇ ಅಲ್ಲದೇ ಹತ್ತು ಹಲವು ಅಕ್ರಮಗಳಲ್ಲಿ ತೊಡಗಿರುವ ವಿಶ್ವವಿದ್ಯಾಲಯ ಅಭಿವೃದ್ಧಿಯಾಗುವುದಾದರು ಎಂದು ? ವಿ.ವಿ.ಯ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಿ ಎರಡು ವರ್ಷ ಕಳೆದರೂ ವಿದ್ಯಾರ್ಥಿಗಳಿಗಾಗಿ ಯಾವುದೇ ರಚನಾತ್ಮಕ ಕಾರ್ಯಕ್ರಮಗಳು ನಡೆಯುತ್ತಿಲ್ಲ, ಹೀಗಿರುವಾಗ ಅವರು ಬೌದ್ಧಿಕವಾಗಿ ಎಲ್ಲಾ ವಿಷಯಗಳಲ್ಲೂ ಪರಿಪೂರ್ಣತೆ ಸಾಧಿಸದಿದ್ದಾಗ ವಿ.ವಿ. ಅಗತ್ಯವಾದರು ತುಮಕೂರು ಜಿಲ್ಲೆಗೆ ಇದೆಯೆ ಎಂಬುದು ಸಾರ್ವಜನಿಕರ ಪ್ರಶ್ನೆ. □

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

ಕೆಲವರಿಗೆ ಗಣಿತ ಎಂದರೆ ಕಬ್ಬಿಣದ ಕಡಲೆ ಇದ್ದಂತೆ. ಅದೊಂದು ದೊಡ್ಡ ತಲೆ ನೋವು. ಆದರೆ ಇದೊಂದು ವಿಭಿನ್ನ ಪ್ರಯೋಗ. ಇಲ್ಲಿ ಗಣಿತವು ಸಂಘ ಪರಿವಾರದ ದೇಶಪ್ರೇಮಿ ಚಟುವಟಿಕೆಗಳೊಂದಿಗೆ 'ಹಾಲು ಜೇನಿ'ನಂತೆ ಬೆರೆತುಕೊಂಡಿರುವುದರಿಂದ ಅದು ಸುಲಿದ ಬಾಳೆ ಹಣ್ಣಿನಂತೆ... ನುಂಗಲು ಸುಲಭ. ಇಲ್ಲಿನ ಸರಳ ಪ್ರಶ್ನೆಗಳಿಗೆ ಉತ್ತರಿಸಲು ಯತ್ನಿಸಿ.

ಸರಳ ಗಣಿತ

ಕೊಡುಗೆ ಎಷ್ಟು : ನಮ್ಮ ಭಾರತದ 'ತೆಹಲ್ಕಾ ಟೇಪು' ಜಗದ್ವಿಖ್ಯಾತ. ರಕ್ಷಣಾ ಸಾಮಗ್ರಿಗಳ ಖರೀದಿ ಸಂಬಂಧದ ಕಮೀಷನ್‌ನಲ್ಲಿ 2001 ನೇ ಇಸವಿಯಲ್ಲಿ ಉಜ್ವಲ ರಾಷ್ಟ್ರ ಭಕ್ತರ ಸಂಘ ಅಂದರೆ ಆರ್‌ಎಸ್‌ಎಸ್ ಗೆ 100 ಕೋಟಿ ರೂ. ಕೊಡುಗೆ ಕೊಡಿಸುತ್ತಿರುವುದಾಗಿ, ಆರ್‌ಎಸ್‌ಎಸ್ ಟ್ರಸ್ಟಿ ಆರ್.ಕೆ.ಗುಪ್ತಾರೇ ಸ್ವತಃ ಹೇಳಿಕೊಂಡಿರುವುದು ಈ ಟೇಪಿನ ಒಂದು ಸಣ್ಣ ತುಣುಕು. ಈ ರೀತಿ ಸಂಘಕ್ಕೆ ಸಲ್ಲುವ ಕಮೀಷನ್‌ನ ಮೊತ್ತ ಪ್ರತಿ ವರ್ಷವು ದ್ವಿಗುಣಗೊಳ್ಳುತ್ತಾ, ಬಂದಿದ್ದರೆ, 2008ರ ಸಾಲಿಗೆ ಸಂಘಕ್ಕೆ ರಕ್ಷಣಾ ಖರೀದಿ ಸಂಬಂಧದ ಕಮೀಷನ್‌ನಿಂದ ಈ ಸಂಘ ಪರಿವಾರದ ಕಟ್ಟಾಳು ಕೊಡಿಸುವ ಕಮೀಷನ್ ಎಷ್ಟು.

ವರ್ಷಕ್ಕೆಷ್ಟು : ಸನ್ಮಾನ್ಯ ವಾಜಪೇಯಿ ಯವರು ತಮ್ಮ ಪಕ್ಷದ ಬಾಂಬೆ ಮಹಾಧಿವೇಶನದ ಸಂದರ್ಭದಲ್ಲಿ 'ಬಿಜೆಪಿಯ ಲಕ್ಷಣ' ಎಂದು ಕರೆದಿದ್ದ ಪ್ರಮೋದ್ ಮಹಾಜನ್‌ಜೀಯವರು ಉಜ್ವಲ ರಾಷ್ಟ್ರಭಕ್ತರ ಪಕ್ಷದ ಬೃಹತ್ ಚಟುವಟಿಕೆಗಳಿಗೆ ಅಗತ್ಯವಾದ ಅಗಾಧ ಪ್ರಮಾಣದ ದ್ರವ್ಯವನ್ನು ಸಂಗ್ರಹಿಸುವ ದೈತ್ಯ ಹೊಣೆಯನ್ನು ನಿಬಾಯಿಸುತ್ತಿದ್ದರು ಎಂಬುದು ಹಲವರಿಗೆ ಗೊತ್ತಿರುವ ವಿಚಾರವೇ. ಇರಲಿ.

ಒಬ್ಬ ಸಾಧಾರಣ ಶಿಕ್ಷಕನ ಮಗನಾಗಿ ಹುಟ್ಟಿ ಬೆಳೆದ ಇವರು ತಮ್ಮ ತಮ್ಮನ ಗುಂಡೇಟಿನಿಂದ ತೀರಿಕೊಳ್ಳುವಾಗ ಇವರ ಖಾಸಗಿ ಆಸ್ತಿ ಮೌಲ್ಯ ಸುಮಾರು 2000 ಕೋಟಿ ರೂ.ಗಳಾಗಿತ್ತೆಂಬುದು ಒಂದು ಸ್ಥೂಲವಾದ ಅಂದಾಜು. ಈ ಒಟ್ಟು ಗಳಿಕೆಯನ್ನು ಇದೇ ಮಹಾಜನ್‌ರ ಸುಮಾರು 25 ವರ್ಷಗಳ ರಾಜಕೀಯ ಜೀವನಕ್ಕೆ ಸಮನಾಗಿ ಹಂಚಿದರೆ ಅವರ ಪ್ರತಿವರ್ಷದ ಸರಾಸರಿ ಆಸ್ತಿ ಕಬಳಿಕೆ ಕ್ಷಮಿಸಿ ಗಳಿಕೆ ಎಷ್ಟು. ಲೆಕ್ಕ ಮಾಡಿ.

ಎಷ್ಟು ಬೀಳಬೇಕು: ತನ್ನ ಪಾಡಿಗೆ ತಾನು ತಣ್ಣಗಿದ್ದ ಒಂದು ಊರಿನಲ್ಲಿ ಕೋಮು ಚಕಮಕಿ ನಡೆದು 4 ಜನರ ಹೆಣ ಬಿತ್ತು. 20 ಅಂಗಡಿ, 10 ಮನೆ, 15 ವಾಹನಗಳು ಭಸ್ಮವಾದವು. 'ಸಂಘ'ಕ್ಕೆ ಇದೊಂದು 'ಉಜ್ವಲ ರಾಷ್ಟ್ರ ಪ್ರೇಮ'ದ ಅಭಿವ್ಯಕ್ತಿಯೂ ಆಗಿತ್ತು. ಆನಂತರದ ಚುನಾವಣೆಯಲ್ಲಿ ಆ ವಿಧಾನ ಸಭಾ ಕ್ಷೇತ್ರದಲ್ಲಿ ಉಜ್ವಲ ರಾಷ್ಟ್ರ ಭಕ್ತರ ಪಕ್ಷವು ಜಯಗಳಿಸಿತು.

ಒಂದು ಲೋಕಸಭಾ ಕ್ಷೇತ್ರದಲ್ಲಿ ಸರಾಸರಿ 8 ವಿಧಾನಸಭಾ ಕ್ಷೇತ್ರಗಳಿರುತ್ತವೆ ಎನ್ನುವುದಾದರೆ, ಈ ಕ್ಷೇತ್ರವನ್ನು ಲೋಕಸಭಾ ಚುನಾವಣೆಯಲ್ಲಿ ಉಜ್ವಲ ರಾಷ್ಟ್ರ ಭಕ್ತರ ಪಕ್ಷವು ಗೆಲ್ಲಲು ಒಟ್ಟಾರೆ ಎಷ್ಟು ಜನರನ್ನು ಗೋವಿಂದನ ಪಾದಕ್ಕೆ ಸೇರಿಸಬೇಕು. ಎಷ್ಟು ಮನೆ, ಅಂಗಡಿ, ವಾಹನಗಳನ್ನು ಅಗ್ನಿ ದೇವನಿಗೆ ಅರ್ಪಿಸಬೇಕು ತಿಳಿಸಿ.


ರಾಷ್ಟ್ರ ಭಕ್ತರ ಪಾಲೆಷ್ಟು?

ನಮ್ಮ ಕರಾವಳಿ ಜಿಲ್ಲೆಯ ಪುತ್ತೂರಿನ ಭಜರಂಗಿಗಳಾದ ನವೀನ, ಸತೀಶ, ಮಿಥುನ, ಹಿಂದೂ ಧರ್ಮವನ್ನು ಜಗತ್ತಿನಾದ್ಯಂತ ಪಸರಿಸುವ ತಮ್ಮ ಯೋಜನೆಯ ಭಾಗವಾಗಿ ತಮ್ಮೂರಿನ ಪುರಾತನ ಶಿವ ವಿಷ್ಣುವಿನ ವಿಗ್ರಹವನ್ನು ಸಾಗಿಸುವಾಗ ಪೋಲೀಸರ ಕೈಗೆ ಸಿಕ್ಕಿಕೊಂಡರಲ್ಲವೇ? ಒಂದೊಮ್ಮೆ ಈ 'ವಿಗ್ರಹ ಸಾಗಣೆ ವಿಸ್ಮಯ ಕಾರ್ಯಾಚರಣೆ' ಯಶಸ್ವಿಯಾಗಿ ವಿಗ್ರಹವು ವಿದೇಶ ತಲುಪಿದ್ದರೆ ಅದರಿಂದ ಒಂದು ಕೋಟಿ ರೂಪಾಯಿ ಸಿಗುತ್ತಿತ್ತೆಂದು ಊಹಿಸೋಣ.

ಬಂದ ಈ ಧನದಲ್ಲಿ ಶೇ.10 ರಷ್ಟನ್ನು 'ಹಿಂದೂ ಧರ್ಮ ರಕ್ಷಣೆ'ಯ ಚಟುವಟಿಕೆಗೂ, ಶೇ. 15 ರಷ್ಟನ್ನು ಉಜ್ವಲ ರಾಷ್ಟ್ರ ಪ್ರೇಮಿ ಪಕ್ಷದ ಅಭ್ಯುದಯಕ್ಕೂ, ಶೇ. 75 ರಷ್ಟನ್ನು ಮೂವರು ರಾಷ್ಟ್ರ ಭಕ್ತರೂ ಸಮನಾಗಿ ಹಂಚಿಕೊಂಡಿದ್ದಲ್ಲಿ ಪ್ರತಿಯೊಬ್ಬ ರಾಷ್ಟ್ರ ಭಕ್ತನಿಗೂ ಸಲ್ಲುತ್ತಿದ್ದ ಹಣವೆಷ್ಟು?

ಬೆಲೆ ಏರಿಕೆ ವಿರೋಧಿಸಿ, ರೇಷನ್ ವಿತರಣೆ ವ್ಯವಸ್ಥೆಯನ್ನು ಬಲಪಡಿಸಲು ಆಗ್ರಹಿಸಿ

ರಾಜ್ಯದಾದ್ಯಂತ ಪಿಕೆಟಿಂಗ್, ಧರಣಿ



ಜನರ ಸಮಸ್ಯೆಗಳನ್ನು ನಿರ್ಲಕ್ಷಿಸುತ್ತಿರುವ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ದೇಶದಾದ್ಯಂತ ಚಳುವಳಿ ನಡೆದಿದೆ.

ಸಿಪಿಐ(ಎಂ) ಕೇಂದ್ರ ಸಮಿತಿಯ ಕರೆಯಮೇರೆಗೆ ಆಗಸ್ಟ್ 16 ರಿಂದ 29ರವರೆಗೆ ದೇಶದಾದ್ಯಂತ ಪ್ರಚಾರ ಹಾಗೂ ಆಗಸ್ಟ್ 30ರಂದು ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ರೇಷನ್ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಲು, ಎಪಿಎಂಸಿ ಕಾಯ್ದೆ ತಿದ್ದುಪಡಿ ಕೈಬಿಡಬೇಕು, ಕೃಷಿ ಬಿಕ್ಕಟ್ಟು ಪರಿಹರಿಸಲು, ಅಣು ಒಪ್ಪಂದ ಮುಂತಾಗಿ ಆಗ್ರಹಿಸಿ ದೇಶದಾದ್ಯಂತ ಪಿಕೆಟಿಂಗ್ ನಡೆಸಲು ನೀಡಿದ ಕರೆ ವ್ಯಾಪಕವಾಗಿ ಯಶಸ್ವಿಯಾಗಿದೆ.

ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲೂ ಪ್ರಚಾರಾಂದೋಲನ ಮತ್ತು ಪಿಕೆಟಿಂಗ್ ನಡೆದ ವರದಿಗಳು ಬಂದಿವೆ.

ರಾಯಚೂರು ಜಿಲ್ಲೆಯಲ್ಲಿ ಸಮರಶೀಲ ಪ್ರತಿಭಟನೆ: ಜಿಲ್ಲೆಯ ದೇವದುರ್ಗದಲ್ಲಿ ಬಿಪಿಎಲ್ ರೇಷನ್ ಕಾರ್ಡ್ ನೀಡಬೇಕೆಂದು ಒತ್ತಾಯಿಸಿ ಗಿರಿಯಪ್ಪ ಮತ್ತು ತಿಪ್ಪಯ್ಯ ನಾಯಕ್ ರವರ ನೇತೃತ್ವದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರು ಬೆಳಿಗ್ಗೆ 11 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಪಿಕೆಟಿಂಗ್ ನಡೆಸಿದ್ದು ತಹಶೀಲ್ದಾರ್ ಕಛೇರಿಯಲ್ಲಿ ಯಾವುದೇ ಕೆಲಸ ನಡೆಯಲಿಲ್ಲ. ಪೋಲೀಸರ ಬೆದರಿಕೆಗೂ ಜಗ್ಗದ ಜನ ಅಲ್ಲಿಯೇ ಆಹಾರ ತಯಾರಿಸಿ ಕೊಂಡು ಪಿಕೆಟಿಂಗ್ ನಡೆಸಿದರು. ಅಧಿಕಾರಿಗಳಿಂದ ಆಶ್ವಾಸನೆ ಪಡೆದ ನಂತರವೇ ಅಲ್ಲಿಂದ ತೆರಳಿದ ಬಡ ಜನರು ಬೇಡಿಕೆ ಈಡೇರಿಸದಿದ್ದಲ್ಲಿ ತೀವ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಸಿಂಧನೂರಿನಲ್ಲಿ 800ಕ್ಕೂ ಹೆಚ್ಚು ಜನರು ಪಿಕೆಟಿಂಗ್‌ನಲ್ಲಿ ಭಾಗವಹಿಸಿದ್ದು, ಲಿಂಗಸಗೂರು, ರಾಯಚೂರು, ಹಟ್ಟಿ ಕೇಂದ್ರಗಳಲ್ಲೂ ಪ್ರತಿಭಟನೆ ನಡೆದಿದೆ. ರಾಯಚೂರಿನಲ್ಲಿ ರಾಜ್ಯಸಮಿತಿ ಸದಸ್ಯ ಮಲ್ಲಯ್ಯ ಜಾಲಹಳ್ಳಿ ಭಾಗವಹಿಸಿದ್ದರು.

ದ.ಕ. ಜಿಲ್ಲೆ: ಮಂಗಳೂರಿನಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್. ಶ್ರೀಮಾನ್, ಬಿ.ಮಾಧವ ಅವರ



ನೇತೃತ್ವದಲ್ಲಿ 300 ಕ್ಕೂ ಹೆಚ್ಚು ಸಂಗಾತಿಗಳು ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಬಂಧಿತರಾದರು. ರಾಜ್ಯ ಸಮಿತಿ ಸದಸ್ಯ ಜೆ. ಬಾಲಕೃಷ್ಣ ಶೆಟ್ಟಿ ಅವರ ನೇತೃತ್ವದಲ್ಲಿ ಒಂದು ದಿನ ವಾಹನ ಜಾಥಾ ನಡೆದಿದ್ದು ನಗರದೆಲ್ಲೆಡೆ ಸಂಚರಿಸಿ ಸಭೆಗಳನ್ನು ನಡೆಸಿ ಕರಪತ್ರ ಹಂಚಲಾಯ್ತು.

ಉಳ್ಳಾಲದ ವಲಯದ ತೂಕ್ಕೊಟ್ಟು ಗುರುಪುರ ವಲಯ, ಮೂಡಬಿದರೆ, ಭಂಟ್ವಾಳ, ಬೆಳ್ತಂಗಡಿ, ಕೇಂದ್ರಗಳಲ್ಲಿ ಪಿಕೆಟಿಂಗ್ ನಡೆದಿದ್ದು ಸುಮಾರು 2000ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು 1000ಕ್ಕೂ ಹೆಚ್ಚು ಜನರು ಬಂಧಿತರಾಗಿದ್ದರು.

ಉಡುಪಿ: ಉಡುಪಿ ಮತ್ತು ಕುಂದಾಪುರಗಳಲ್ಲಿ ಪಿಕೆಟಿಂಗ್ ನಡೆದಿದ್ದು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ ವರದಿಯಾಗಿದೆ. ಇದಕ್ಕೆ ಮೊದಲು ಮನೆಗಳಿಗೆ ತೆರಳಿ ಕರಪತ್ರ ಹಂಚಿ ವಿವರಿಸಲಾಗಿತ್ತು. ಸಾಲಿಗ್ರಾಮ, ಸಾಸ್ತಾವ, ಬ್ರಹ್ಮಾವರಗಳಲ್ಲಿ ಸಾರ್ವಜನಿಕ ಸಭೆ ನಡೆದಿದೆ.

ಬೆಂಗಳೂರು: ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ನಿತ್ಯಾನಂದಸ್ವಾಮಿ ರಾಜ್ಯ ಸಮಿತಿ ಸದಸ್ಯರಾದ ಕೆ.ಪ್ರಕಾಶ್ ನೇತೃತ್ವದಲ್ಲಿ ಕಾರ್ಯಕರ್ತರು ರಾಜಭವನ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಬಳ್ಳಾರಿ ಕೇಂದ್ರಗಳಲ್ಲಿ ಪಿಕೆಟಿಂಗ್ ನಡೆದಿದೆ.

ಗುಲ್ಬರ್ಗದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿಮಾನ್ಪಡೆ, ಕೆ.ನೀಲಾ, ನೇತೃತ್ವ ವಹಿಸಿದ್ದು, ಜಿಲ್ಲೆಯ ಶಾಪೂರ, ಸುರಪುರ, ಶಾಪೂರ ತಾಲ್ಲೂಕಿನ ವಡಗೇರ, ಮೊದಲಾದ ಪ್ರದೇಶಗಳಲ್ಲಿ ಪ್ರತಿಭಟನೆ ನಡೆದಿದೆ.

ಕೋಲಾರ ಜಿಲ್ಲೆಯ ಕೋಲಾರ, ಬಾಗೇಪಲ್ಲಿ, ಕೆಜಿಎಫ್ ಮೊದಲಾದ ಕೇಂದ್ರಗಳಲ್ಲಿ ಪಿಕೆಟಿಂಗ್, ಧರಣಿ ನಡೆದಿದೆ.

ಕೊಡಗು ಮಡಿಕೇರಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್, ಜಿಲ್ಲಾ ಕಾರ್ಯದರ್ಶಿ ಪೀಟರ್‌ಲೋಬೋ ಭಾಗವಹಿಸಿದ್ದು, ನೂರಾರು ಜನರು ಮೆರವಣಿಗೆ ನಡೆಸಿ ಅಂಚೆ ಕಛೇರಿ ಎದುರು ಪ್ರತಿಭಟನೆ ಮಾಡಿದರು.


ಹಾಸನಜಿಲ್ಲೆಯ ಸಕಲೇಶಪುರ, ಕೊಪ್ಪಳ ಜಿಲ್ಲೆಯ ಕೊಪ್ಪಳ, ಗಂಗಾವತಿ, ಗದಗ ಜಿಲ್ಲೆಯ ಗಜೇಂದ್ರಗಡ, ಮೈಸೂರು ಜಿಲ್ಲಾ ಕೇಂದ್ರ ಮೊದಲಾದೆಡೆ ಪ್ರತಿಭಟನೆಗಳು ನಡೆದಿದ್ದು ಎಲ್ಲಾ ಬಡವರಿಗೂ ಸಮರ್ಪಕ ರೇಷನ್ ನೀಡದಿದ್ದಲ್ಲಿ ಹೋರಾಟ ತೀವ್ರಗೊಳಿಸುವುದು ಎಚ್ಚರಿಸಿದರು.



ಅಮಾನುಷ ಆ್ಯಸಿಡ್ ಧಾಳಿ

ಮೈಸೂರಿನಲ್ಲಿ ಗಂಡನಿಂದ ಆ್ಯಸಿಡ್ ಧಾಳಿಗೆ ತುತ್ತಾದ ನತದೃಷ್ಟ ಯುವತಿ ಫಾತಿಮಾಳು ಕೊನೆಯುಸಿರೆಳೆದಿದ್ದಾರೆ. ಗಂಡನ ದುಶ್ಚಟ. ಹಿಂಸೆ, ನರಕಯಾತನೆಗಳ ನಡುವೆಯೂ 'ಪತಿಯೇ ಪರದೈವ' ಎಂದು ಹೇಗೋ ಕಾಲ ನೂಕುತ್ತಿದ್ದ ಫಾತಿಮಾಳನ್ನು ಬದುಕಲು ಬಿಡಲಿಲ್ಲ. ಗಂಡನೆಂಬುವವನ ದುಷ್ಟತನ, ಎಷ್ಟೆಂದರೆ ಆ್ಯಸಿಡ್‌ನ್ನು ಮುಖ ಮೈಮೇಲೆ ಸುರಿದಿದ್ದಲ್ಲದೇ, ಅದನ್ನು ಬಲತ್ಕಾರದಿಂದ ಕುಡಿಸಿದ್ದಾನೆ. ಇದು ಅಮಾನುಷ, ವಿಕೃತತೆ ಕ್ರೌರ್ಯದ ಪರಮಾವಧಿ. ಇಂತಹ ಪ್ರಕರಣಗಳು ವಿಸ್ತರಣೆಯಾಗುತ್ತಿರುವುದು ಅತ್ಯಂತ ಗಾಬರಿ ಹುಟ್ಟಿಸುವ ಸಂಗತಿಯಾಗಿದೆ. ಹಣವೇ ಪ್ರಧಾನವಾಗಿ ಗಂಡು ಹೆಣ್ಣಿನ ವೈಯಕ್ತಿಕ ಹಾಗೂ ಕೌಟುಂಬಿಕ ಸಂಬಂಧಗಳು ವ್ಯವಹಾರದ ಮಟ್ಟಕ್ಕೆ ಇಳಿದಿದೆ.

ಮುಖ್ಯವಾಗಿ ಹೆಣ್ಣು ಸಮಾಜದಲ್ಲಿ ಎರಡನೇಯ ದರ್ಜೆ ನಾಗರೀಕಳು ಗಂಡನ ಗುಲಾಮಗಳು, ಸ್ವಾತಂತ್ರ್ಯಕ್ಕೆ ಅನರ್ಹ ಎಂಬ ಊಳಿಗಮಾನ್ಯ ವ್ಯವಸ್ಥೆಯ ಮೌಲ್ಯಗಳೇ ಇಂದೂ 'ಆಧುನಿಕ' ಯುಗದಲ್ಲಿಯೂ ಮುಂದುವರಿದಿದೆ. ಹೀಗಿರುವಾಗ ಈ ಆ್ಯಸಿಡ್ ಧಾಳಿಗರು ಹೆಣ್ತನವನ್ನೇ ನಾಶ ಮಾಡುವ, ರೂಪ ಕುರೂಪಗೊಳಿಸಿ, ಜೀವನ ಪರ್ಯಂತ ನರಳುವಂತೆ ಮಾಡಿ ಸೇಡುತೀರಿಸಿಕೊಳ್ಳುವ, ಕೃತ್ಯಗಳಿವು. ಹೆಣ್ಣನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಲು ಬಳಸುವ ಅಸ್ತ್ರಗಳು.




ಇಂತಹ ನೀಚ ಕೃತ್ಯವೆಸಗಿದ ಫಾತಿಮಾಳ ಗಂಡನ ಮೇಲೆ ವರದಕ್ಷಿಣೆ ಮೊಕದ್ದಮೆ ಮಾತ್ರ ಹೂಡಲಾಗಿದೆ ಎಂಬುದು ಆ್ಯಸಿಡ್ ಪ್ರಕರಣದ ಘೋರತೆಯನ್ನು ಗೌಣಗೊಳಿಸುತ್ತದೆ. ಇದು ಅಷ್ಟು ಮಾತ್ರವಲ್ಲ, ಒಂದು ಅತ್ಯಾಚಾರದಂತಹ ಒಂದು ಕೊಲೆ ಪ್ರಕರಣಕ್ಕೆ ಸಮನಾದ ಆಗಿದೆ. ಅಂತಹ ಕೃತ್ಯ ಎಸಗಿದವರಿಗೆ ಇನ್ನೂ ಕಠಿಣವಾದ ಶಿಕ್ಷೆ ವಿಧಿಸಬೇಕು.

ಇಂತಹ ಘಟನೆಗಳಿಗೆ ಕಡಿವಾಣ ಹಾಕಲು ಮುಖ್ಯವಾಗಿ ಸಾಮಾಜಿಕ ಮೌಲ್ಯಗಳು ಬದಲಾಗಬೇಕು. ಮಹಿಳೆಯರ ಸರ್ವ ರೀತಿಯ ಸಬಲೀಕರಣ ಆಗಬೇಕು. ಜೊತೆಗೆ ಆ್ಯಸಿಡ್ ಸುಲಭದಲ್ಲಿ ಸಿಗದಂತೆ ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ಅನುಸರಿಸಬೇಕು. ಹಿಂದೆ ಹಸೀನಾ (1999)ರಿಂದ ಮೊದಲ್ಗೊಂಡು ಇತ್ತೀಚಿನ ಸವಿತಾ... ಪ್ರಕರಣಗಳು ನ್ಯಾಯ ಮತ್ತು ಬದುಕುವ ಹಕ್ಕನ್ನು ಆಗ್ರಹಿಸುತ್ತಲೇ ಇವೆ. ಹಾಗೆಯೇ ಸಮಾಜದೊಳಗಿನ ಹೀನ, ಕ್ರೌರ್ಯದ ಸ್ಥಿತಿಯನ್ನೂ.

ವಂಚಿಸುವ ತಂತ್ರ

ನಾಜಿಗಳ ತತ್ವವನು ನೆಚ್ಚಿದವರಿಂದು
ನೆತ್ತರನು ಹರಿಸುತ್ತ ಬರುತಿಹರು ಮುಂದು
ಇಂದವರು ಬಸವಣ್ಣ ಗಾಂಧೀಜಿ ಚಿತ್ರ
ಬಳಸುವುದ ಕಂಡಿರಾ ಎಂಥ ವಿಚಿತ್ರ!

- ವಿಡಂಬಾರಿ



- ವಿಶ್ವಬ್ಯಾಂಕ್ ಪ್ರಕಟಿಸಿರುವ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇಕಡಾ 45 ರಷ್ಟು ಮಕ್ಕಳು ಪೌಷ್ಟಿಕಾಂಶ ಕೊರತೆಯಿಂದ ನರಳುತ್ತಿದ್ದಾರೆ
- ಹುಟ್ಟುವ 1000 ಮಕ್ಕಳಲ್ಲಿ 60 ಮಕ್ಕಳು ಸಾಯುತ್ತಾರೆ. ಇದು ಬಾಂಗ್ಲಾದೇಶದ ಪರಿಸ್ಥಿತಿಗಿಂತ ಹೀನವಾದ ಪರಿಸ್ಥಿತಿ.
- ಅಕ್ಷರಸ್ಥರ ಸಂಖ್ಯೆ ಶೇ.65 ರಷ್ಟು ಇದೆ ಎಂದು ಲೆಕ್ಕ ಮಾಡಲಾಡಲಾಗಿದೆ. ಇದು ಸಹಾರಾ ಮರುಭೂಮಿಗೆ ಹೊಂದಿಕೊಂಡಿರುವ ಆಫ್ರಿಕದ ದೇಶಗಳಿಗಿಂತ ಕೆಟ್ಟ ಪರಿಸ್ಥಿತಿಯಾಗಿದೆ.

ಸಂಗ್ರಹ : **ಶ್ರೀನಿವಾಸ್,** ಕೆಪಿಆರ್‌ಎಸ್

ರಾಜ್ಯಾದ್ಯಂತ ಜನಮನ ಸೆಳೆದ
ಸ್ವಾತಂತ್ರ್ಯ ಸಂಗ್ರಾಮ ಸಂರಕ್ಷಣಾ ಜಾಥಾ

1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷಾಚರಣೆ, ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಚಿಲುಮೆ ಭಗತ್‌ಸಿಂಗ್‌ರ ಜನ್ಮಶತಮಾನೋತ್ಸವ, ದೇಶದ ಸ್ವಾತಂತ್ರ್ಯಕ್ಕೆ 60ರ ಸಂಭ್ರಮ ಈ ತ್ರಿವಳಿ ಕಾರ್ಯಕ್ರಮಗಳನ್ನು ನಾಡಿನೆಲ್ಲೆಡೆ ಆಚರಿಸುವ ಮೂಲಕ ಯುವಜನರಲ್ಲಿ ದೇಶ ಪ್ರೇಮವನ್ನು ಮೂಡಿಸಬೇಕೆಂಬ ಡಿವೈಎಫ್‌ಐ ಕೇಂದ್ರ ಸಮಿತಿಯ ತೀರ್ಮಾನದ ಮೇರೆಗೆ ಕರ್ನಾಟಕದಲ್ಲಿ 2 ಜಾಥಾಗಳನ್ನು ನಡೆಸಿ ಲಕ್ಷಾಂತರ ಯುವ ಮನಸ್ಸುಗಳನ್ನು ಗೆಲ್ಲುವ ಮೂಲಕ ರಾಜ್ಯದೆಲ್ಲಡೆ ಜಾಥಾವು ಭಾರಿ ಯಶಸ್ಸನ್ನು ಕಂಡಿದೆ. ನಿರೀಕ್ಷೆಗೂ ಮೀರಿ ಜನತೆಯ ಸ್ಪಂದನ, ಜಾಥಾ ಸಂಚರಿಸಿದ್ದ ಎಲ್ಲಾ ಕಡೆಗಳಲ್ಲಿ ಭವ್ಯ ಸ್ವಾಗತ, ವಿದ್ಯಾರ್ಥಿ ಯುವಜನ-ರೈತ-ಕಾರ್ಮಿಕ-ಮಹಿಳೆಯರ ನ್ನೊಳಗೊಂಡಂತೆ ಎಲ್ಲಾ ವಿಭಾಗದ ಜನತೆಯಿಂದಲೂ ಕಾರ್ಯಕ್ರಮ ಯಶಸ್ವಿಗೆ ಸಂಪೂರ್ಣ ಸಹಕಾರ ದೊರೆತಿರುವುದು ರಾಜ್ಯದಲ್ಲಿ



ಬಸವಕಲ್ಯಾಣದಿಂದ ಹೊರಟ ಒಂದು ಜಾಥಾ - ಹೊಸಪೇಟೆ ತಲುಪಿದಾಗ ಸ್ವಾಗತಸಭೆಯಲ್ಲಿ ಡಾ. ವಿಜಯ್ ಪೂಣಚ್ಚ ಮಾತನಾಡುತ್ತಿರುವುದು

ಪ್ರಜಾಸತ್ತಾತ್ಮಕ ಯುವಜನ ಚಳುವಳಿಯ ಬೆಳವಣಿಗೆಗೆ ದಿಕ್ಸೂಚಿಯಾಗಿದೆ.

ದಕ್ಷಿಣ ಕರ್ನಾಟಕದಾದ್ಯಂತ ಸಂಚರಿಸಿದ ಜಾಥಾವು ಆಗಸ್ಟ್ 8 ರಂದು ತನ್ನ ತಾಯ್ನಾಡಿನ ವಿಮೋಚನೆಗಾಗಿ ಪೋರ್ಚುಗೀಸರ ವಿರುದ್ಧ ವೀರ ಮರಣವನ್ನಪ್ಪಿದ ವೀರವನಿತೆ ಅಬ್ಬಕ್ಕ ರಾಣಿಯ ತಾಯ್ನೆಲವಾದ ಮಂಗಳೂರಿನ ಉಳ್ಳಾಲದಲ್ಲಿ ಹಿರಿಯ ಸಾಹಿತಿಗಳೂ, ಜಾನಪದ ವಿದ್ವಾಂಸರಾದ ಡಾ: ಅಮೃತ ಸೋಮೇಶ್ವರರವರು ಅಬ್ಬಕ್ಕ ರಾಣಿಯ ಪ್ರತಿಮೆಗೆ ಹಾರಾರ್ಪಣೆ ಮಾಡಿ, ರಾಷ್ಟ್ರ ಧ್ವಜವನ್ನು ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ರವರಿಗೆ ಹಸ್ತಾಂತರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಕೇಂದ್ರ ಸಮಿತಿ ನಾಯಕರಾದ ವಿ.ವಿ.ರಮೇಶನ್ ಡಿವೈಎಫ್‌ಐ ಧ್ವಜವನ್ನು ಜಾಥಾ ತಂಡದ ನಾಯಕರೂ, ಡಿವೈಎಫ್‌ಐ ರಾಜ್ಯಾಧ್ಯಕ್ಷರಾದ ಸುನಿಲ್‌ಕುಮಾರ್ ಬಜಾಲ್‌ಗೆ ಹಸ್ತಾಂತರಿಸುವ ಮೂಲಕ ಜಾಥಾಕ್ಕೆ ಶುಭ ಕೋರಿದರು. ಈ ಕಾರ್ಯಕ್ರಮದ ಬಳಿಕ ನಡೆದ ಮೆರವಣಿಗೆಯು ನೋಡುಗರ ಕಣ್ಮನ ಸೆಳೆಯುವಂತಿತ್ತು. ಬಳಿಕ ತೊಕ್ಕೊಟುನಲ್ಲಿ ಜಾಥಾದ ಉದ್ಘಾಟನಾ ಸಮಾರಂಭ ಏರ್ಪಟ್ಟಿತ್ತು.

ಎಲ್ಲಾ ಕಡೆಗಳಲ್ಲೂ ಜಾಥಾದ ಸ್ವಾಗತಕ್ಕೆ ಸ್ವಾಗತ ಸಮಿತಿಗಳನ್ನು ರಚಿಸುವ ಮೂಲಕ ಎಲ್ಲಾ ವಿಭಾಗದ ಜನರನ್ನು ಪಾಲ್ಗೊಳ್ಳುವಂತೆ ಮಾಡಲಾಗಿತ್ತು. ಎಲ್ಲಾ ಜಿಲ್ಲೆಗಳಲ್ಲೂ ಪೂರ್ವಭಾವಿಯಾಗಿಯೇ ಜಾಥಾಕ್ಕೆ ಮಾಧ್ಯಮಗಳಲ್ಲಿ ಭಾರೀ ಪ್ರಚಾರ ಬಂದಿದ್ದರಿಂದ ಜನತೆ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸಿದ್ದರು. ಇದರಿಂದಾಗಿ ಹೆಚ್ಚಿನ ಕಡೆಗಳಲ್ಲಿ ಸ್ಥಳೀಯ ಶಾಸಕರು, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಸದಸ್ಯರುಗಳು ಪಾಲ್ಗೊಳ್ಳ ಬೇಕಾಗಿ ಬಂತು. ಹಾಸನದ ಕೊಣನ್ನೂರು ಹಾಗೂ ಕೊಡಗಿನ ಕುಶಾಲನಗರದಲ್ಲಿ ಭಜರಂಗದಳದ ಸದಸ್ಯರು ಸಮೇತ ಪ್ರತ್ಯಕ್ಷವಾಗಿ ಭಾಗವಹಿಸಿ ಜಾಥಾಕ್ಕೆ ಶುಭಾಶಯ ಕೋರಿದರು. ಅಂದರೆ ಸಮಾಜದಲ್ಲಿ ವಿಷ ಕಾರುತ್ತಿರುವ ಕೋಮುವಾದಿ ಶಕ್ತಿಗಳೂ ಕೂಡ ಜಾಥಾ ಕಾರ್ಯಕ್ರಮಕ್ಕೆ ವಿರೋಧ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಜಾಥಾದ ಯಶಸ್ವಿಯಿಂದ ಕಂಗೆಟ್ಟ ಭಜರಂಗದಳ -ವಿಹೆಚ್‌ಪಿಗಳು ಕರಾವಳಿ ಜಿಲ್ಲೆಗಳಲ್ಲಿ 'ಮಾರೋಫರಂಗಿ ಕೋ' ಕಾರ್ಯಕ್ರಮವನ್ನು ಆಗಸ್ಟ್ 14ರ ರಾತ್ರಿ 12 ಗಂಟೆಗೆ ಹಮ್ಮಿಕೊಂಡು ಜನತೆಯಿಂದ ಛೀಮಾರಿ ಗೊಳಗಾದರು. ಶತಶತಮಾನ ಗಳಿಂದ ಶೋಷಣೆಗೆ ಒಳಗಾದ ಆದಿವಾಸಿ ಯುವಜನತೆಯೂ ಕೂಡ ಕೊಡಗಿನಲ್ಲಿ ಜಾಥಾದ ಸ್ವಾಗತ ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವುದು ಬಹಳ


ಮಂಗಳೂರು ಜಾಥಾ ತಂಡ

ಸ್ಫೂರ್ತಿಯುತವಾಗಿತ್ತು. ಕುಂದಾಪುರ, ಮಂಗಳೂರು, ಹಾಸನ, ಮಳವಳ್ಳಿಗಳಲ್ಲಿ ನಡೆಸಿದ ದ್ವಿಚಕ್ರವಾಹನ ರ್‍ಯಾಲಿಗಳು ನಗರದ ಜನತೆಯ ಗಮನ ಸೆಳೆದವು. ಮೈಸೂರಿನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ದಂಡೇ ಜಾಥಾವನ್ನು ಸ್ವಾಗತಿಸಲು ಕಾದು ನಿಂತಿತ್ತು. ಮಂಡ್ಯ ಹಾಗೂ ದೊಡ್ಡಬಳ್ಳಾಪುರಗಳಲ್ಲಿ ಸಾವಿರಕ್ಕೂ ಮಿಕ್ಕಿದ ವಿದ್ಯಾರ್ಥಿ ಯುವ ಜನರು ಜಾಥಾ ಕಾರ್ಯಕ್ರಮದಲ್ಲಿ


ರಾಯಚೂರಿನಲ್ಲಿ ಕಲಾತಂಡದ ಪ್ರದರ್ಶನ

ಭಾಗವಹಿಸಿದ್ದು ವಿಶೇಷವಾಗಿತ್ತು. ಬೆಂಗಳೂರಿನ ಹೊಸ ಕೋಟೆಯಲ್ಲಿ 6 ಗಂಟೆಗೆ ಬರಬೇಕಾಗಿದ್ದ ಜಾಥಾವು ರಾತ್ರಿ 9.30ಕ್ಕೆ ಹೋದಾಗಲೂ ನೂರಾರು ಯುವಜನರು ನಿರಾಶರಾಗದೆ ಬಹಳ ಯಶಸ್ವಿಯಾಗಿ ಕಾರ್ಯಕ್ರಮ ನಡೆಸಿದರು. 8 ದಿವಸಗಳ ಕಾಲ ನಡೆದ ಜಾಥಾದಲ್ಲಿ ಕೊಡಗು ಜಿಲ್ಲೆಯ ಕಾರ್ಯಕ್ರಮವು ಮರೆಯಲಾಗದ ಘಟನೆಯಾಗಿ ಮಾರ್ಪಾಟಾಯಿತು. ಅಂದು ಬೆಳಿಗ್ಗೆ 9 ಗಂಟೆಗೆ ಕುಶಾಲನಗರದಲ್ಲಿ ಜಾಥಾ ಸ್ವಾಗತಕ್ಕೆಂದು 8 ಜೀಪು ಹಾಗೂ 30 ಬೈಕ್‌ಗಳಲ್ಲಿ ನೂರಾರು ಯುವಕ-ಯುವತಿಯರು ಕಾದು ನಿಂತಿದ್ದರು. ಅಲ್ಲಿಂದ ರಾತ್ರಿ 8 ಗಂಟೆಗೆ ಮೂರ್ನಾಡುನಲ್ಲಿ ಜಾಥಾ ಕಾರ್ಯಕ್ರಮ ಮುಗಿಯುವವರೆಗೂ ಜಾಥಾ ತಂಡದೊಂದಿಗೆ ಬೆಂಗಾವಲಾಗಿ ನಿಂತಿದ್ದರು. ಆದಿವಾಸಿ ಜನತೆಯ ಬ್ಯಾಂಡ್, ವಾದ್ಯದ ನಿನಾದದೊಂದಿಗೆ ಶುಂಠಿ ಕೊಪ್ಪ ಸಿದ್ದಾಪುರ, ವಿರಾಜಪೇಟೆ, ಮೂರ್ನಾಡುಗಳಲ್ಲಿ ಭಾರೀ ಮೆರವಣಿಗೆಗಳೇ ನಡೆದವು.

ಜಾಥಾ ತಂಡದಲ್ಲಿದ್ದ ಕಲಾವಿದರು 'ಸ್ವಾತಂತ್ರ್ಯ ಗಾಥಾ' ಎಂಬ ಬೀದಿ ನಾಟಕವನ್ನು ಏರ್ಪಡಿಸಿ, ನೆರೆದ ಪ್ರೇಕ್ಷಕರಲ್ಲಿ ಉತ್ಸಾಹವನ್ನೇ ತುಂಬಿದರು. 30 ನಿಮಿಷದ ನಾಟಕದಲ್ಲಿ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳು, ಟಿಪ್ಪುಸುಲ್ತಾನ್‌ನ ಪಾತ್ರ, ಡಂಕೆಲ್ ಪ್ರಸ್ತಾಪ, ಅದರಿಂದ ಉಂಟಾಗುವ ಕೃಷಿ ಬಿಕ್ಕಟ್ಟು, ರೈತರ ಪರಿಸ್ಥಿತಿ, ಸ್ವಾತಂತ್ರ್ಯ ಹೋರಾಟದಲ್ಲಿ ಭಗತ್‌ಸಿಂಗ್ ಪಾತ್ರ, ಸಾಮ್ರಾಜ್ಯಶಾಹಿಗಳ ಕಪಿಮುಷ್ಠಿಯಲ್ಲಿರುವ ಭಾರತ ಇವೆಲ್ಲವನ್ನು ತೋರಿಸಿರುವುದು ಮಾತ್ರವಲ್ಲದೆ ಪಾತ್ರಗಳಿಗೆ ಜೀವ ತುಂಬಿರುವ ಕಲಾವಿದರ ಪ್ರತಿಭೆಯನ್ನು ನೋಡುಗರು ಕೊಂಡಾಡಿದರು. ಸಮುದಾಯ ಕಾರ್ಯದರ್ಶಿ ವೈವಿ‌ರಾಂದಾಸ್‌ರವರ ಕಲ್ಪನೆಯಿಂದ, ಕಲಾವಿದರ ಸಹಕಾರದಿಂದ ಮೂಡಿಬಂದ 'ಸ್ವಾತಂತ್ರ್ಯ ಗಾಥಾ' ಎಂಬ ಬೀದಿ ನಾಟಕಕ್ಕೆ ರಾಂದಾಸ್‌ರವರೇ ನಿರ್ದೇಶನ ನೀಡಿ ನಾಟಕಕ್ಕೆ ಜೀವಕಳೆ ತಂದರು. ಈ ನಾಟಕಕ್ಕೆ ಈಗಾಗಲೇ ದ.ಕ. ಉಡುಪಿ ಮಾತ್ರವಲ್ಲದೆ ನೆರೆಯ ಕೇರಳದ ಮಂಜೇಶ್ವರದಲ್ಲೂ ಬೇಡಿಕೆ ಬಂದಿರುವುದು ಕಲಾವಿದರಲ್ಲಿ ಸಂತಸ ಮೂಡಿಸಿದೆ.

ವರದಿ: **ಸುನಿಲ್‌ಕುಮಾರ್ ಬಜಾಲ್**

ನಾಗರಿಕ ಬಂಡಾಯ..........

ಪುಟ 4 ರಿಂದ

ಪಾಲ್ಗೊಳ್ಳುತ್ತಿದ್ದರು. ಅವರ ಪಾಲ್ಗೊಳ್ಳುವಿಕೆಯನ್ನು ಹಾಗೆಯೇ ಮುಂದುವರಿಸಿಕೊಂಡು ಹೋಗಲು ಅವರಿಗೆ ಬಂಡಾಯಗಾರರ ಆಳ್ವಿಕೆ ಈ ರೀತಿಯ ಭರವಸೆಗಳನ್ನು ನೀಡುತ್ತಿತ್ತು. ಬಂಡಾಯಗಾರ ಸಿಪಾಯಿಗಳು ತೀರಾ ಸಾಮಾನ್ಯ ವರ್ಗಗಳಿಂದ ಬಂದವರಾಗಿದ್ದರು. ಹಳೆಯ ಮಹಾರಾಜರ, ನವಾಬರ ಬಗ್ಗೆ ಅವರಿಗೆ ಯಾವುದೇ ಸಹಾನುಭೂತಿ ಇರಲಿಲ್ಲ. ಅವರೆಲ್ಲರೂ ಆಧುನಿಕ ಸೈನ್ಯ ಪದ್ಧತಿಯಲ್ಲಿ ತರಬೇತಿ ಪಡೆದವರಾಗಿದ್ದರು. ಹಾಗಾಗಿ ಅತ್ಯಂತ ಒರಟಾದ ಸಂಸದೀಯ ರಾಜಶಾಹಿ ಪ್ರಭುತ್ವ ಮಾದರಿಯನ್ನು ಜಾರಿಗೆ ತರಲು ಪ್ರಯತ್ನಿಸಿದರು. ಆದರೆ ಈ ಸಮಿತಿಯ ಆಳ್ವಿಕೆ ಬಹಳ ಬೇಗನೆ ಅವಸಾನ ಹೊಂದಿದ್ದರಿಂದ ಯಾವುದೇ ಮಹತ್ತರ ಐತಿಹಾಸಿಕ ಪರಿಣಾಮವನ್ನುಂಟು ಮಾಡಲಿಲ್ಲ. ತುರ್ತು ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದ ಹಲವಾರು ಸಂದರ್ಭಗಳಲ್ಲಿ ಈ ಸಮಿತಿ ಸೇರಿ ಚರ್ಚಿಸಿ ತೀರ್ಮಾನಿಸುವುದೇ ಒಂದು ಸವಾಲಾಗಿ ಬಂಡಾಯದ ವಿಫಲತೆಗೆ ಅದು ತನ್ನ ಪಾಲಿನ ಕೊಡುಗೆಯನ್ನು ನೀಡಿತೆನ್ನುವುದು ಒಂದು ಐತಿಹಾಸಿಕ ವಿಪರ್ಯಾಸ.

ಬಂಡಾಯಕ್ಕೆ ಸಾರ್ವಜನಿಕರ ಬೆಂಬಲ

ಸೈನಿಕರು ಬಂಡೆದ್ದ ಕಡೆಗಳಲ್ಲೆಲ್ಲಾ ಸಾರ್ವಜನಿಕರು ಬಂಡಾಯಗಾರರ ಬೆಂಬಲಕ್ಕೆ ನಿಂತರು. ಅವರಿಗೆ ಅಗತ್ಯ ವಸ್ತುಗಳನ್ನೊದಗಿಸುವುದು, ಅವರಿಗೆ ಅಗತ್ಯ ಮಾಹಿತಿ ನೀಡುವುದು. ಬ್ರಿಟಿಷ್ ಸೈನ್ಯದ ಚಲನವಲನಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಬಂಡಾಯಗಾರರು ತಮ್ಮ ರಣತಂತ್ರ ರೂಪಿಸಲು ಸಹಾಯ ಮಾಡುತ್ತಿದ್ದರು. ತಮ್ಮೆಲ್ಲಾ ಸಂಕಷ್ಟಗಳಿಗೆ ತಮ್ಮೆಲ್ಲರ ನಿರುದ್ಯೋಗಕ್ಕೆ ಬ್ರಿಟಿಷರ ಆಳ್ವಿಕೆಯೇ ಕಾರಣವೆಂದು ಭಾವಿಸಿದ್ದರಿಂದ, ಅವರ ವಿರುದ್ಧ ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಡುತ್ತಿದ್ದ ಸೈನಿಕರಿಗೆ ನಾಗರೀಕರಿಗೆ ಅಪಾರ ಬೆಂಬಲ ವ್ಯಾಪಕವಾಗಿ ವ್ಯಕ್ತವಾಯಿತು. ಇದಲ್ಲದೆ ನಾಗರೀಕರು ಬ್ರಿಟಿಷ್ ಪಡೆಗಳಿಗೆ ಇಂತಹ ನೆರವು ನೀಡಲು ವಿನ್ಸೆಂಟ್ ಸ್ಮಿತ್ ಎಂಬ ಇತಿಹಾಸಕಾರರ ಪ್ರಕಾರ ಭಾರತದ ಜನಸಾಮಾನ್ಯರಲ್ಲಿ ಅತೃಪ್ತಿ ಮತ್ತು ಅಸಮಾಧಾನ ಅತ್ಯಂತ ವ್ಯಾಪಕವಾಗಿತ್ತು. ಇದು ಎಷ್ಟು ತೀವ್ರವಾಗಿತ್ತೆಂದರೆ ಹಲವಾರು ಸ್ಥಳಗಳಲ್ಲಿ ಸೈನಿಕರು ಬಂಡಾಯ ಏಳುವುದಕ್ಕಿಂತಲೂ ಮುಂಚಿತವಾಗಿಯೇ ಜನಸಾಮಾನ್ಯರು ಬಂಡೆದ್ದರು. ಸೈನಿಕರು ಆನಂತರ ಅವರನ್ನು ಬೆಂಬಲಿಸಿದ ಉದಾಹರಣೆಗಳಿವೆ. ಇಂಗ್ಲೀಷರು ತಮ್ಮ ದಳಗಳಿಗೆ ಸರಬರಾಜನ್ನು ಸಾರಿಗೆ ಸಾಧನಗಳನ್ನು ಪಡೆದುಕೊಳ್ಳಲು ಭಾರಿ ತೊಂದರೆಗಳನ್ನು ಎದುರಿಸಬೇಕಾಯಿತು ಎಂಬುದೇ ಇಂಗ್ಲೀಷರ ಬಗೆಗೆ ಭಾರತದ ಜನಸಾಮಾನ್ಯರು ಹೊಂದಿದ್ದ ಹಗೆತನಕ್ಕೆ ಸಾಕ್ಷಿಗಳಾಗಿವೆ.

ಇತ್ತೀಚೆಗಿನ ವರ್ಷಗಳಲ್ಲಿ 1857ರ ಹೋರಾಟ ಗಳಲ್ಲಿ ಅವಗಣನೆಗೆ ಗುರಿಯಾದ ಜನವರ್ಗಗಳು ಭಾಗವಹಿಸಿ ನಡೆಸಿದ ಹೋರಾಟಗಳ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ. ಸ್ಥಳೀಯ ಪ್ರದೇಶಗಳಲ್ಲಿ ಈ ಬಂಡಾಯ ಪಡೆದುಕೊಂಡ ಜನ ಬೆಂಬಲವನ್ನು ಅಧ್ಯಯನ ಮಾಡಲಾಗುತ್ತಿದೆ. ಅಸಂಖ್ಯಾತ ಕೆಳಜಾತಿಗಳು ಹಿಂದುಳಿದ ಜಾತಿಗಳು ಜನ ಈ ಹೋರಾಟಗಳಲ್ಲಿ ಬಹಳ ಪ್ರಮುಖ ಪಾತ್ರವಹಿಸಿರುವುದು ಕಂಡು ಬರುತ್ತದೆ. ಹೆಚ್ಚು ಅಧ್ಯಯನಗಳು ನಡೆದಂತೆಲ್ಲಾ ಜನಸಾಮಾನ್ಯರು ಈ ಬಂಡಾಯದಲ್ಲಿ ಪಾಲ್ಗೊಂಡ ಬಗ್ಗೆ ಹೆಚ್ಚು ಹೆಚ್ಚು ಮಾಹಿತಿಗಳು ದೊರಕಬಹುದಾಗಿದೆ: ಕರ್ಮನ್ ಬಿ ಧರ್ಮನ್ ಬಿ, ಜಲಕರ್ ಬಾಯ್ ಮುಂತಾದ ಅಸಂಖ್ಯಾತ ಕೆಳಜಾತಿ ಮಹಿಳೆಯರು ಈ ಹೋರಾಟಗಳಲ್ಲಿ ಪ್ರಮುಖವಾಗಿ ಭಾಗವಹಿಸಿದ್ದಾರೆ. ಇತ್ತೀಚಿನ ಕೆಲವು ಸಬ್ ಆಲ್ಟ್ರನ್ (ಅವಗಣನೆಗೆ ಗುರಿಯಾದ ವಿಷಯಗಳು) ಅಧ್ಯಯನಗಳಿಂದ ಈ ವಿಷಯ ಹೊರಹೊಮ್ಮಿದೆ.

ರಾಜಕೀಯ ಪ್ರಣಾಳಿಕೆ

ಜನಪ್ರಿಯ ಬಂಡಾಯ ಮುಖಂಡನಾದ ಫೈರೂಜ್ ಷಾ 1857ರ ಆಗಸ್ಟ್ 25 ರಂದು ಹೊರಡಿಸಿದ ಘೋಷಣಾ ಪತ್ರ ಅತ್ಯಾಶ್ಚರ್ಯಕರ ವಾಗಿ ಆಧುನಿಕ ರಾಜಕೀಯ ಪಕ್ಷವೊಂದರ ಪ್ರಣಾಳಿಕೆಯಂತೆ ಕಂಡು ಬರುತ್ತದೆ. ಇಂಗ್ಲೀಷರ ಅವಗಢಗಳಿಂದ ನಿರುದ್ಯೋಗಿಗಳಾಗಿರುವ ನೇಕಾರರು ಮತ್ತಿತರ ಕಸುಬುದಾರರಿಗೆ ಉದ್ಯೋಗ ನೀಡುವ ವಿಶೇಷ ಭರವಸೆಯನ್ನು ಅದು ನೀಡುತ್ತದೆ. ಆಗ ಬ್ರಿಟಿಷರ ಏಜೆಂಟ್‌ನಾಗಿದ್ದ ಸೈಯದ್ ಅಹಮದ್ ಖಾನ್ ಬಂಡಾಯದ ಸಮಕಾಲೀನ ಸ್ಮರಣೆಗಳನ್ನು 'ಸರ್ಕಾಶಿ-ಇ-ಜಿಲಾ ಬಿಜನೂರ್' ಎಂಬ ಗ್ರಂಥದಲ್ಲಿ ನಿರೂಪಿಸಿದ್ದಾನೆ. ಬಿಜನೂರ್‌ನ ಬಂಡಾಯದ ಮುಖಂಡ ಮಹಮ್ಮದ್ ಖಾನ್‌ನ ನೇತೃತ್ವದ ಸಿಪಾಯಿಗಳು ಮತ್ತು ವೃತ್ತಿಪರ ಸೈನಿಕರು, ಎಂದೂ ಕತ್ತಿಯನ್ನು ಹಿಡಿದಿರದ ನೂಲು ಮತ್ತು ಹತ್ತಿಯನ್ನಷ್ಟೇ ನಿಭಾಯಿಸುತ್ತಿದ್ದ ಹತ್ತಿ ಹಿಂಜುವವರು ಮತ್ತು ನೇಕಾರರಿಂದ ಎಂತಹ ಬೆಂಬಲವನ್ನು ಪಡೆದರೆಂಬುದನ್ನು ವಿವರಿಸುತ್ತಾನೆ.

ಶರತ್‌ಚಂದ್ರ

ಜೋಳ ಅಮೆರಿಕನ್ನರ ಹೊಸ 'ಪೆಟ್ರೋಲ್' ಮೆಕ್ಸಿಕನ್ನರಿಗೆ ಜೋಳದ ರೊಟ್ಟಿ ತುಟ್ಟಿ

ಮೆಕ್ಸಿಕೊದಲ್ಲಿ ಜೋಳದ ಬೆಲೆ ಗಗನಕ್ಕೇರಿದೆ. ಈ ವರ್ಷದಲ್ಲಿ ಜೋಳದ ಬೆಲೆ ಶೇಕಡಾ 50 ರಷ್ಟು ಹೆಚ್ಚಿದೆ. ಜೋಳದ ಲಭ್ಯತೆ ಸಹ ಕಡಿಮೆಯಾಗಿದೆ. ಹೆಚ್ಚಿನ ಜೋಳ ಅಮೆರಿಕಕ್ಕೆ ರಫ್ತಾಗುತ್ತದೆ. ಟೋರ್ಟಿಲಾ (ಮೆಕ್ಸಿಕೊ ಮಾದರಿಯ ಜೋಳದ ರೊಟ್ಟಿ) ಮೆಕ್ಸಿಕನ್ನರ ಮುಖ್ಯ ಆಹಾರವಾಗಿದ್ದು ಇದರಿಂದ ದೇಶದಾದ್ಯಂತ ಹಾಹಾಕಾರ ಎದ್ದಿದೆ. ಟೋರ್ಟಿಲಾ ಬೆಲೆ ದುಬಾರಿಯಾಗಿ ಗಿರಾಕಿಗಳಿಲ್ಲದೆ ಟೋರ್ಟಿಲಾ ಅಂಗಡಿಗಳು ಮುಚ್ಚುತ್ತಿವೆ. ಜೋಳದ ಬೆಲೆ ಏರಿಕೆ ವಿರುದ್ಧ ಭಾರೀ ಪ್ರತಿಭಟನಾ ಪ್ರದರ್ಶನಗಳಾಗಿವೆ.

ಜಾರ್ಜ್ ಬುಶ್ ಈ ವರ್ಷದ ಆರಂಭದಲ್ಲಿ ಈಥಾನೋಲ್ ನಂತಹ ಇಂಧನಗಳು ಪೆಟ್ರೋಲ್ ಗೆ ಬದಲಿಯನ್ನಾಗಿಸುವ ಭಾರೀ ಕಾರ್ಯಕ್ರಮ



ಘೋಷಿಸಿದರು. 2017ರ ಹೊತ್ತಿಗೆ 160 ಶತಕೋಟಿ ಲೀಟರುಗಳಷ್ಟು ಇಂತಹ ಇಂಧನಗಳನ್ನು ಉತ್ಪಾದಿಸಲಾಗುವುದು ಎಂದರು. ಈ ಕಾರ್ಯಕ್ರಮ - ಪುನಃ ಬೆಳೆಯಬಹುದಾದ ಜೋಳ, ಕಬ್ಬಿನಂತಹ ಜೈವಿಕ ವಸ್ತುಗಳನ್ನು ಬಳಸಿ, ಪೆಟ್ರೋಲಿನಂತಹ ಮುಗಿದು ಹೋಗುತ್ತಿರುವ ಇಂಧನಗಳಿಗೆ ಶಾಶ್ವತ ಬದಲಿ ಒದಗಿಸುವುದರಿಂದ - ಅತ್ಯಂತ 'ಪರಿಸರ ಸ್ನೇಹಿ' ಎಂದೆಲ್ಲ ಕೊಚ್ಚಿಕೊಳ್ಳಲಾಗಿತ್ತು.



ಆದರೆ ಆಗಲೇ ಫಿಡೆಲ್ ಕ್ಯಾಸ್ಟ್ರೋ ಇದು ಬಡ ದೇಶಗಳ ಆಹಾರ ಭದ್ರತೆಗೆ ಮಾರಕವಾಗಲಿದೆ ಎಂದು ಎಚ್ಚರಿಸಿದ್ದರು. ಮೆಕ್ಸಿಕೊದ ಜೋಳದ ಬಿಕ್ಕಟ್ಟು ಕ್ಯಾಸ್ಟ್ರೋ ಎಚ್ಚರಿಕೆ ಎಷ್ಟು ನಿಜ ಎಂದು ತೋರಿಸಿದೆ. ಬುಶ್ ಘೋಷಣೆಯ ಸ್ವಲ್ಪ ಸಮಯದಲ್ಲೇ ಚಿಕಾಗೋ ಶೇರು ಮಾರುಕಟ್ಟೆಯಲ್ಲಿ ಜೋಳದ 'ಮುಂಬರುವ' ಬೆಲೆ ಮೇಲೆ ವ್ಯಾಪಾರ (ಜೂಜಾಟ ಎಂದರೆ ಹೆಚ್ಚು ಸರಿಯಾದೀತು) ಆರಂಭವಾಯಿತು. ಅಲ್ಲೂ ಜೋಳದ 'ಮುಂಬರುವ' ಬೆಲೆ ಏರುತ್ತಾ ಹೋಯಿತು. ಬಡಜನರ ಆಹಾರ ಜೂಜಾಟದ ವಸ್ತು ಆಗಿಬಿಟ್ಟಿದೆ.

ಜೋಳದ ಬೆಲೆ ಬಿಕ್ಕಟ್ಟಿನ ವಿರುದ್ಧ ತೀವ್ರ ಪ್ರತಿಭಟನೆಯಿಂದ ಮೆಕ್ಸಿಕೊ ಸರ್ಕಾರ ಬೆಲೆ ಮೇಲೆ ಮಿತಿ ಹೇರಿದೆ. ಜೋಳದ ಬೆಳೆ ಹೆಚ್ಚು ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ. ಹತ್ತು ಲಕ್ಷ ಹೆಕ್ಟೇರ್ ಹೆಚ್ಚು ಜಮೀನಿನಲ್ಲಿ ಈ ವರ್ಷ ಜೋಳ ಬೆಳೆಯಲಾಯಿತು ಎಂದು ಸರ್ಕಾರ ಹೇಳಿಕೊಂಡಿದೆ.

ಆದರೆ ಟೋರ್ಟಿಲಾ ಅಭಾವ ಹಾಗೆ ಮುಂದುವರಿದಿದೆ. ಬಹುಶಃ ಹೆಚ್ಚು ಬೆಳೆದ ಜೋಳ ಸಹ ರಫ್ತಾಗುತ್ತಿರಬೇಕು. ಮಾತ್ರವಲ್ಲ ಹತ್ತು ಲಕ್ಷ ಹೆಕ್ಟೇರ್ ಜೋಳದ ಬೆಳೆ ಹೆಚ್ಚಳ, ಅಷ್ಟರ ಮಟ್ಟಿಗೆ ಬೀನ್ಸ್ ಬೆಳೆ ಕಡಿಮೆಯಾಗಲು ಕಾರಣವಾಗಿದೆ. ಆ ಕಾರಣದಿಂದ ಬೀನ್ಸ್ ಬೆಲೆ ವಿಪರೀತವಾಗಿ ಏರಿದೆ. ಪುನಃ ಬಡಜನರ ಹೊಟ್ಟೆಯ ಮೇಲೆ ಪೆಟ್ಟು.

ಇದು ಸಾಲದು ಎಂಬಂತೆ ಅಮೆರಿಕ, ಬ್ರೆಜಿಲ್ ನಂತೆ ಜೈವಿಕ-ಇಂಧನ ಈಥನೋಲ್‌ನ್ನು ಪೆಟ್ರೋಲಿಗೆ ಬದಲಿ ಇಂಧನ ಮಾಡುವ ಬಗ್ಗೆ ಮೆಕ್ಸಿಕೊ ಸರ್ಕಾರ ಆಸಕ್ತಿ ವಹಿಸಿದೆ. ಮೆಕ್ಸಿಕೊದ ಕುಂದುತ್ತಿರುವ ಪೆಟ್ರೋಲ್ ಸಂಪನ್ಮೂಲಗಳೂ ಇದಕ್ಕೆ ಒಂದು ಕಾರಣ. ಇದರ ಒಟ್ಟು ಪರಿಣಾಮ - ಆಹಾರ ಬೆಳೆಗಳನ್ನು ಆಹಾರದಿಂದ ಇಂಧನದತ್ತ ತಿರುಗಿಸಿ, ಅದರ ಬೆಲೆ ಏರಿಸುವುದು ; ಆಹಾರ ಬಳಕೆ ಲಭ್ಯತೆ ಕಡಿಮೆ ಮಾಡಿ ಆಹಾರ ಭದ್ರತೆ ಸಮಸ್ಯೆ ಇನ್ನಷ್ಟು ಉಲ್ಬಣಗೊಳಿಸುವುದು.

ಅಫ್ಘಾನಿಸ್ತಾನದ 'ಒಳ್ಳೆ ಯುದ್ಧ' ಜನತೆಗೆ ಎಷ್ಟು ಒಳ್ಳೆಯದು ?

ಇರಾಕ್ 'ಕೆಟ್ಟ ಯುದ್ಧ'. ಅಫ್ಘಾನಿಸ್ತಾನ 'ಒಳ್ಳೆ ಯುದ್ಧ' - ಇದು ಪಾಶ್ಚಿಮಾತ್ಯ ದೇಶಗಳ ಜನತೆಯ ಸಾಮಾನ್ಯ ಅಭಿಪ್ರಾಯ. ಅಫ್ಘಾನಿಸ್ತಾನದಿಂದ ಅಮೆರಿಕನ್ ಸೈನ್ಯ ಕಾಲ್ತೆಗೆಯಬೇಕು ಎಂಬ ಒತ್ತಾಯ ಅಷ್ಟು ಜೋರಾಗಿ ಇಲ್ಲ. ಎರಡೂ ಯುದ್ಧಗಳನ್ನೂ ಅಮೆರಿಕನ್ ಸರ್ಕಾರ 'ಭಯೋತ್ಪಾದನೆಯ ವಿರುದ್ಧ ಯುದ್ಧ' ಎಂದು ಹೇಳುತ್ತದೆ. ಆದರೆ ನಿಜವಾಗಿಯೂ ಜಾಗತಿಕ ಅಧಿಪತ್ಯ ಸಾಧಿಸುವ ಅಮೆರಿಕದ ಪ್ರಯತ್ನದ ಭಾಗ. ಆ ಎರಡೂ ದೇಶಗಳ ಕೆಲವು ಸಮಸ್ಯೆಗಳು ಮತ್ತು ಅದರ ಅತಿರಂಜಿತ 'ಅಂತರ್ರಾಷ್ಟ್ರೀಯ ಅಪಾಯ'ಗಳನ್ನು ನೆಪ ಮಾಡಿಕೊಂಡು, ಅಮೆರಿಕ ಮಾಡಿದ ಕಾನೂನುಬಾಹಿರ ಅತಿಕ್ರಮಣ. ಎರಡೂ ದೇಶಗಳಲ್ಲಿ ಯುದ್ಧದಿಂದ ಯಾವುದೆ ಸಮಸ್ಯೆ ಬಗೆಹರಿದಿಲ್ಲ. ಅದು ಉದ್ದೇಶವೂ ಆಗಿರಲಿಲ್ಲ ಎಂಬುದು ಬೇರೆ ಮಾತು. ಅಫ್ಘಾನಿಸ್ತಾನದ ಯುದ್ಧ ಸಹ ಇರಾಕ್‌ನ ಹಾಗೆ ಅಲ್ಲಿನ ಜನತೆಯ ನಿಜವಾದ ಸಮಸ್ಯೆಗಳನ್ನು ಉಲ್ಬಣಗೊಳಿಸಿದೆ. ಅದೂ ಇರಾಕ್ ಯುದ್ಧದಷ್ಟೇ ದೊಡ್ಡ ದುರಂತ ತಂದಿದೆ. ಈ ನಿಜ ಸಂಗತಿಯನ್ನು ಮರೆಮಾಚುವುದು ಅಮೆರಿಕ-ಬ್ರಿಟಿಷ್ ಸರ್ಕಾರಗಳಿಗೆ ಹೆಚ್ಚೆಚ್ಚು ಕಷ್ಟವಾಗುತ್ತಿದೆ.

'ಒಂದೂ ಗುಂಡು ಹಾರಿಸದೆ' ಅಲ್-ಖೈದಾ-ತಾಲಿಬಾನ್ ಭಯೋತ್ಪಾದಕರನ್ನು ಸೋಲಿಸಿ, ಕಾನೂನು-ವ್ಯವಸ್ಥೆ ಮತ್ತು ಶಾಂತಿ ಸ್ಥಾಪಿಸಲಾಗುವುದು ಎಂದು ಅಮೆರಿಕ-ಬ್ರಿಟಿಷ್ ಪಡೆಗಳು ಅಫ್ಘಾನಿಸ್ತಾನ ಪ್ರವೇಶಿಸಿದ್ದವು. ಪೂರಾ ಆರು ವರ್ಷಗಳ ಮತ್ತು ಇಪ್ಪತ್ತು ಲಕ್ಷ ಸುತ್ತಿನ ಗುಂಡಿನ ಮಳೆಯ ನಂತರವೂ, ತಾಲಿಬಾನ್ ವಿರುದ್ಧ ಪೂರ್ಣ ಪ್ರಮಾಣದ ಯುದ್ಧದಲ್ಲಿ ತೊಡಗಿವೆ. ಅಮೆರಿಕ-ಬ್ರಿಟಿಷ್ ಪಡೆಗಳಲ್ಲಿ ಕಡಿತ ಮಾಡುವ ಬಗ್ಗೆ ಸುದ್ದಿಯೇ ಇಲ್ಲ. ಬದಲಾಗಿ ಬಹಳ ವರ್ಷಗಳ ಕಾಲ ಅಲ್ಲಿ ಠಿಕಾಣಿ ಹೂಡುವ ಅನಿವಾರ್ಯತೆ ಇದೆ. ಬ್ರಿಟಿಷ್ ಕಮಾಂಡರ್ ಒಬ್ಬ ಅಫ್ಘಾನಿಸ್ತಾನದಲ್ಲಿ ಪಡೆಗಳು ಐರ್ಲೆಂಡ್‌ನಲ್ಲಿ ಇದ್ದುದಕ್ಕಿಂತ (ಸುಮಾರು 38 ವರ್ಷಗಳು) ದೀರ್ಘವಾಗಿರುವ ಅಂದರೆ ಸುಮಾರು 4-5 ದಶಕಗಳು ಇರಬೇಕಾದೀತು ಎಂದಿದ್ದಾನೆ.

ಅಫ್ಘಾನ್ ಜನತೆಯ ಸ್ಥಿತಿ ಹಿಂದಿಗಿಂತಲೂ ಗಂಭೀರವಾಗಿದೆ. ದೇಶದ ದಕ್ಷಿಣ ಭಾಗದಲ್ಲಿ 80 ಸಾವಿರಕ್ಕಿಂತಲೂ ಹೆಚ್ಚು ನಿರಾಶ್ರಿತರಾಗಿದ್ದಾರೆ ಎಂದು ರೆಡ್ ಕ್ರಾಸ್ ವರದಿ ಮಾಡಿದೆ. ಜೂನ್ ತಿಂಗಳೊಂದರಲ್ಲೇ 200ಕ್ಕೂ ಹೆಚ್ಚು ನಾಗರಿಕರು ಅಮೆರಿಕನ್ ಮತ್ತು ನಾಟೋ ಪಡೆಗಳ ದಾಳಿಗಳಲ್ಲಿ ಸತ್ತಿದ್ದಾರೆ. ನಾಟೋ ಪಡೆಗಳು ನಾಗರಿಕ ಪ್ರದೇಶಗಳ ಮೇಲೆ ಬೇಕಾಬಿಟ್ಟಿ ಬಾಂಬ್ ದಾಳಿ ಮಾಡುವುದೇ ಇದಕ್ಕೆ ಮೂಲ ಕಾರಣ. ಕಳೆದ ವರ್ಷದ ಸಾವು-ನೋವುಗಳಿಗಿಂತ ಇದು ಇಮ್ಮಡಿ. ಅಂದರೆ ಪರಿಸ್ಥಿತಿ ಬಿಗಡಾಯಿಸುತ್ತಿದೆ ಎಂದರ್ಥ. ಇದು ತಾಲಿಬಾನ್ ದಾಳಿಗಳಲ್ಲಿ ಸತ್ತ ನಾಗರಿಕರ ಸಂಖ್ಯೆಗಿಂತ ಹೆಚ್ಚು. ನಾಟೋದ ಬೇಕಾಬಿಟ್ಟಿ ಬಾಂಬ್ ದಾಳಿ ತಾಲಿಬಾನ್‌ಗೆ ಇರುವ ಜನ ಬೆಂಬಲವನ್ನು ಹೆಚ್ಚಿಸುತ್ತಿದೆ.

ವಿಶ್ವ ಟ್ರೇಡ್ ಸೆಂಟರ್ ಮೇಲೆ ಸೆಪ್ಟೆಂಬರ್ 11 ರ ಅಮಾನುಷ ದಾಳಿಯ ಹಿಂದಿತ್ತು ಎನ್ನಲಾದ ಅಲ್-ಖೈದಾದ ಅಫ್ಘಾನ್ ಕೇಂದ್ರ ಕಚೇರಿ ಮತ್ತು ಮುಖ್ಯ ನೆಲೆಗಳನ್ನು ನಾಶ ಮಾಡುವುದು - ಅಫ್ಘಾನಿಸ್ತಾನದ ಮೇಲೆ ದಾಳಿಯ ಮೂಲ ಘೋಷಿತ ಉದ್ದೇಶ ಆಗಿತ್ತು, ಇದು ಬುಶ್ ಸೇರಿದಂತೆ ಎಲ್ಲರಿಗೂ ಮರೆತು ಹೋಗಿದೆ. ಈ ನಿಟ್ಟಿನಲ್ಲಿ ಏನೇನೂ ಪ್ರಗತಿ ಆಗಿಲ್ಲ. ಒಸಾಮಾ ಬಿನ್ ಲಾಡೆನ್ ಸೇರಿದಂತೆ ಅಲ್-ಖೈದಾದ ಕೇಂದ್ರೀಯ ನಾಯಕತ್ವ ಇನ್ನೂ ಅಫ್ಘಾನಿಸ್ತಾನ-ಪಾಕಿಸ್ತಾನಿ ಗಡಿ ಪ್ರದೇಶದಿಂದ ಸಕ್ರಿಯವಾಗಿದೆ. ಯಾವುದೇ ರೀತಿಯಲ್ಲಿ ಅದರ ಶಕ್ತಿ ಆ ದೇಶದಲ್ಲಿ ಅಥವಾ ಅಂತರ್ರಾಷ್ಟ್ರೀಯವಾಗಿ ಕುಂದಿಲ್ಲ. ಬದಲಾಗಿ ಇರಾಕ್ ಸೇರಿದಂತೆ ಹಲವು ಹೊಸ ದೇಶಗಳಲ್ಲಿ ಅದು ವೇಗವಾಗಿ ಬೆಳೆದಿದೆ.

80ರ ದಶಕದಲ್ಲಿ 'ಸೌರ್ ಕ್ರಾಂತಿ' ಯ ನಂತರ ಅಫ್ಘಾನಿಸ್ತಾನದ ಎಡ ಒಲವಿನ ಪ್ರಗತಿಪರ ಜಾತ್ಯತೀತ ಸರ್ಕಾರ ಅಧಿಕಾರಕ್ಕೆ ಬಂತು. ಆ ಸರ್ಕಾರವನ್ನು ಹಿಂಸಾತ್ಮಕವಾಗಿ ಉರುಳಿಸಲು ಅಮೆರಿಕದ ಸಿ.ಐ.ಎ ಹುಟ್ಟು ಹಾಕಿದ ಇಸ್ಲಾಮಿಕ್ ಮೂಲಭೂತವಾದಿ ಕೂಟದ ಶನಿ ಸಂತಾನದ ವಾರಸುದಾರರೇ ಅಲ್-ಖೈದಾ ಮತ್ತು ತಾಲಿಬಾನ್. ಒಸಾಮಾ ಬಿನ್ ಲಾಡೆನ್‌ಗೆ ಸಿ.ಐ.ಎ ನೇರ ಕುಮ್ಮಕ್ಕು, ತರಬೇತಿ, ಸಂಪನ್ಮೂಲ ನೀಡಿ ಈ ಕೂಟ ಕಟ್ಟಿತು. ಸೆಪ್ಟೆಂಬರ್ 11 ರ ಅಮಾನುಷ ದಾಳಿ ಅಮೆರಿಕನ್ ಬೇಹುಗಾರಿಕೆ ಪಡೆಗಳಿಗೆ ಗೊತ್ತಿದ್ದ ಆಂತರಿಕ ಪಿತೂರಿ ಎಂದು ಬಲವಾದ ಗುಮಾನಿ ಇರುವ ಹಿನ್ನೆಲೆಯಲ್ಲಿ ಇದೇನು ಆಶ್ಚರ್ಯದ ಸಂಗತಿ ಅಲ್ಲ.

ಸಾಮಾಜಿಕವಾಗಿಯೂ ಅಫಘಾನಿಸ್ತಾನ ಹಲವು ದಶಕಗಳಷ್ಟು ಹಿಂದೆ ಹೋಗಿದೆ. 80ರ ದಶಕದಲ್ಲಿ ಸೀಮಿತ ರೀತಿಯಲ್ಲಿ ಆದರೂ ಆದ ಭೂಸುಧಾರಣೆ, ಮಹಿಳೆಯರ ಶಿಕ್ಷಣ-ಸ್ಥಾನಮಾನಗಳಲ್ಲಿ ಆದ ಪ್ರಗತಿ ಪೂರ್ಣವಾಗಿ ನಾಶವಾಗಿದೆ. ಆಗ ಸ್ಕೂಲ್ ಶಿಕ್ಷಕರು ಮತ್ತು ಸರಕಾರಿ ಸಿಬ್ಬಂದಿಯಲ್ಲಿ ಅರ್ಧದಷ್ಟು ಮಹಿಳೆಯರು ಇದ್ದರು. ಮಹಿಳೆಯರ ಮೇಲೆ ತಾಲಿಬಾನ್ ಆಡಳಿತದಲ್ಲಿ ಇದ್ದ ಮಧ್ಯಕಾಲೀನ ದಬ್ಬಾಳಿಕೆ ಅಧಿಕೃತವಾಗಿ ಹಿಂತೆಗೆದುಕೊಳ್ಳಲಾಗಿದೆ. ಆದರೆ ಇಡೀ ದೇಶದ ಕಾನೂನು-ವ್ಯವಸ್ಥೆ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂದರೆ ಮಹಿಳೆಯರು ಸುರಕ್ಷಿತವಾಗಿ ಮನೆಯಿಂದ ಹೊರಗೆ ಹೋಗುವಂತಿಲ್ಲ. ಇನ್ನು ಅವರ ಸ್ಥಾನಮಾನ ಉತ್ತಮಗೊಳ್ಳುವುದು ದೂರ ಉಳಿಯಿತು. ○

ಚಂಡಮಾರುತ ಪೀಡಿತರಿಗೆ ಪುನರ್ವಸತಿ ನೀಡಲಾಗದ ಸೂಪರ್ ಪವರ್

ಬುಶ್ ಮತ್ತು ಅವರ ಬಲಪಂಥೀಯ ಸರಕಾರ ಇರಾಕ್ ಬಿಟ್ಟರೆ ಅತ್ಯಂತ ಅಪಖ್ಯಾತಿಗೆ ಒಳಗಾದ್ದು 'ಕಟ್ರಿನಾ ಚಂಡಮಾರುತ' ಪೀಡಿತರ ಪುನರ್ವಸತಿಯಲ್ಲಿ ತೋರಿಸಿದ ನಿರ್ಲಕ್ಷ ಮತ್ತು ಅದಕ್ಷತೆಯಿಂದ. ಇತ್ತೀಚೆಗೆ 'ಕಟ್ರಿನಾ'ದ ಎರಡನೇ ವಾರ್ಷಿಕದ ಸಂದರ್ಭದಲ್ಲಿ ಇದು ಇನ್ನಷ್ಟು ಜೋರಾಗಿ ಕೇಳಿಬಂತು. 'ಕಟ್ರಿನಾ' ಚಂಡಮಾರುತದ ಕೆಂಗಣ್ಣಿಗೆ ಗುರಿಯಾದ್ದು ನ್ಯೂ ಒರ್ಲಿನ್ಸ್ ಎಂಬ ಪ್ರಸಿದ್ಧ ನಗರ. ಎರಡು ವರ್ಷಗಳ ನಂತರ ಸಹ ಇನ್ನೂ ಎರಡುವರೆ ಲಕ್ಷ ಜನಕ್ಕೆ ನ್ಯೂ ಒರ್ಲಿನ್ಸ್‌ನ ತಮ್ಮ ಮನೆಗೆ ಮರಳಲು ಆಗಿಲ್ಲ. ಇದರಲ್ಲಿ ಹೆಚ್ಚಿನವರು ಟೆಂಟ್ ಮತ್ತು ಕ್ಯಾರವಾನ್‌ಗಳಲ್ಲಿ ವಾಸವಾಗಿದ್ದಾರೆ, ಒಂದು ಲಕ್ಷಕ್ಕೂ ಹೆಚ್ಚು ಜನ ನೆರೆ ಪ್ರಾಂತ್ಯಗಳಿಗೆ ವಲಸೆ ಹೋಗಿದ್ದು, ವಾಪಸಾಗಲು ಕಾಯುತ್ತಿದ್ದಾರೆ. ನಗರದ ಪುನರ್ನಿರ್ಮಾಣ ಕೆಲಸ ಆಮೆ ವೇಗದಿಂದ ಸಾಗಿದೆ. ಮನೆ ಪುನರ್ನಿರ್ಮಾಣಕ್ಕೆ ಸಹಾಯಧನಕ್ಕೆ ಕಾಯುತ್ತಿರುವ 1.7 ಲಕ್ಷ ಜನರಲ್ಲಿ ಕಾಲು ಭಾಗಕ್ಕೂ ಅದು ಸಿಕ್ಕಿಲ್ಲ.




ಇನ್ಶೂರೆನ್ಸ್ ಕಂಪನಿಗಳೂ ತಾರತಮ್ಯ ಮಾಡುತ್ತಿವೆ. ಸರಕಾರ ಸಾಕಷ್ಟು ಸಂಪನ್ಮೂಲವನ್ನು ಪುನರ್ವಸತಿಗೆ ತೆಗೆದಿಟ್ಟಿಲ್ಲ ಎಂಬ ಗುರುತರ ಆಪಾದನೆ ಕೇಳಿ ಬಂದಿದೆ. ಇರಾಕ್ ಯುದ್ಧಕ್ಕೆ ನೀರಿನಂತೆ ಖರ್ಚು ಮಾಡುವ ಸೂಪರ್ ಪವರ್‌ಗೆ ಸಂಕಷ್ಟದಲ್ಲಿರುವ ತನ್ನ ನಾಗರಿಕರಿಗೆ ಸಹಾಯ ಮಾಡಲು ಸಂಪನ್ಮೂಲಗಳಿಲ್ಲ ಎಂಬ ಮಾತು ವ್ಯಾಪಕವಾಗಿ ಕೇಳಿ ಬರುತ್ತಿದೆ.

ಪುನರ್ವಸತಿ ಸಿಗದವರಲ್ಲಿ ದೊಡ್ಡ ಪಾಲು ಕರಿಯರು ಎಂಬುದು ಆಕಸ್ಮಿಕವಲ್ಲ ಎಂದು ಎಲ್ಲರಿಗೂ ಅರಿವಾಗಹತ್ತಿದೆ. ನ್ಯೂ ಒರ್ಲಿನ್ಸ್ ನ ಕರಿಯ ಕಾಲೋನಿಗಳಲ್ಲಿ ಕೆಲಸವೇ ಆರಂಭವಾಗಿಲ್ಲ. ಆದರೆ ಬಿಳಿಯ ಕಾಲೋನಿಗಳ ನಿರ್ಮಾಣ ಮುಗಿದಿದೆ. ಇಲ್ಲವೇ ಕೆಲಸ ಭರದಿಂದ ಸಾಗುತ್ತಿದೆ. ಕರಿಯರು ಪುನರ್ನಿರ್ಮಾಣವಾದ ನ್ಯೂ ಒರ್ಲಿನ್ಸ್ ಗೆ ಬರುವುದೇ ಬೇಡ ಎಂಬ ಪಿತೂರಿ ಇದೆಯೆನೋ ಎಂದು ಹಲವರಿಗೆ ಅನ್ನಿಸಹತ್ತಿದೆ. ಸ್ವಾಭಾವಿಕವಾಗಿಯೇ ಇದ್ದ ಮನೆಗಳ ಬಾಡಿಗೆ ಗಗನಕ್ಕೆ ಏರಿದೆ. ಇನ್ನೊಂದು ಇಂತಹ ಚಂಡಮಾರುತ ಬಂದರೆ ತಡೆದುಕೊಳ್ಳಬಹುದಾದ ವಿನ್ಯಾಸ ಮಾಡುವ ಪ್ರಯತ್ನದಿಂದ ಈ ವಿಳಂಬ ಎಂಬ ಸರಕಾರದ ಸಮಜಾಯಿಷಿ ನಂಬುವವರು ಬಹಳ ಇಲ್ಲ. ನ್ಯೂ ಒರ್ಲಿನ್ಸ್ ಕರಿಯ ಸಂಗೀತಗಾರರ ತವರೂರು ಎಂದು ಪ್ರಸಿದ್ಧವಾದ ನಗರ. ಸುಮಾರು ಇಂತಹ ಸಂಗೀತಗಾರರಲ್ಲಿ ಬರಿಯ 1800 ಜನ ನಗರದಲ್ಲಿ ಉಳಿದಿದ್ದಾರೆ. ನಗರದ ಆರ್ಥಿಕ ವ್ಯವಸ್ಥೆ ಮುರಿದು ಬಿದ್ದಿದ್ದು, ಅಪರಾಧದ ಪ್ರಮಾಣ ವಿಪರೀತವಾಗಿ (ಶೇ.33ರಷ್ಟು) ಹೆಚ್ಚಿದೆ. ರಾಜಧಾನಿಯಾಗಿದ್ದ ನ್ಯೂ ಒರ್ಲಿನ್ಸ್ ಅಪರಾಧಗಳ ರಾಜಧಾನಿ ಆಗುವ ಅಪಖ್ಯಾತಿ ಗಳಿಸುವ ಹಾದಿಯಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಅಮೆರಿಕದ ಮುಖ್ಯಧಾರೆಯ ಮಾಧ್ಯಮಗಳಲ್ಲಿ ಮೊದಲ ಬಾರಿಗೆ 'ಕಟ್ರಿನಾ ಪುನರ್ವಸತಿ' ಯಲ್ಲಿ ವರ್ಗ ಮತ್ತು ವರ್ಣದ ಆಧಾರದ ಮೇಲೆ ಸರಕಾರ ತಾರತಮ್ಯ ತೋರುತ್ತಿದೆ ಎಂಬ ಮಾತು ಗಟ್ಟಿಯಾಗಿ ಕೇಳಿ ಬರುತ್ತಿದೆ. ○

ಸಿಂಧನೂರಿನಲ್ಲಿ ಕೃಷಿಕೂಲಿಕಾರರಿಗೆ ಪಂಗನಾಮ

ರಾಯಚೂರು ಜಿಲ್ಲೆಯ ಸಿಂಧನೂರು ಾಲ್ಲೂಕಿನ ಸಾಲಗುಂದಾ ಗ್ರಾಮ ಪಂಚಾಯತ್ ಾಲೂಕಿನ ಅತಿದೊಡ್ಡ ಗ್ರಾಮ. ಈ ಗ್ರಾಮ ಂಪೂರ್ಣ ನೀರಾವರಿ ಪ್ರದೇಶ. ಮುಸ್ಲಿಂ ಮುದಾಯ ಬಹುಸಂಖ್ಯಾತರಾದರೂ ಾಜಕೀಯವಾಗಿ, ಆರ್ಥಿಕವಾಗಿ ಗೌಡ ಮುದಾಯ ಬಲಾಢ್ಯ. ಇನ್ನುಳಿದಂತೆ ಂಗಾಮಸ್ತರು, ಲಿಂಗಾಯತ, ಕುರುಬ, ಾಲ್ಮಿಕಿ ಮತ್ತು ದಲಿತ ಸಮುದಾಯದವರು ದ್ದಾರೆ. ಈ ಗ್ರಾಮಕ್ಕೆ ಸರಕಾರಿ ಯೋಜನೆಗಳು ಡವರ ಪಾಲಿಗೆ ನಿಲುಕದವಾಗಿವೆ. ಗ್ರಾಮೀಣ ುದ್ಯೋಗ ಖಾತ್ರಿಯೋಜನೆಯನ್ನು ್ರಮಪಂಚಾಯತ್ ಅಧ್ಯಕ್ಷರು ಮತ್ತು ಾರ್ಯದರ್ಶಿ ತಮ್ಮ ಜೇಬು ತುಂಬಿಸಿಕೊಳ್ಳುವ ಂಥೆಯಾಗಿಸಿ ಕೊಂಡಿದ್ದಾರೆ. ಬೇನಾಮಿ ೆಸರನ್ನು ಸೂಚಿಸಿ, ಅವರಿಗೆ ಬರುವ ಹಣವನ್ನು ತಾವೇ ನುಂಗುತ್ತಿದ್ದಾರೆ. ಮೇಲಧಿಕಾರಿಗಳಿಗೂ ಇದರಲ್ಲಿ ಪಾಲು ಇದೆ ಮತ್ತು ಇವರೆಲ್ಲರಿಗೂ ಸ್ಥಳೀಯ ಶಾಸಕರ ಕೃಪಾ ಕಟಾಕ್ಷವಿದೆ.



ಇಂದಿರಾ ಆವಾಸ್ ಯೋಜನೆ - ವಸತಿಹೀನರಿಗೆ ವಂಚನೆ

2005-06 ರ ಸಾಲಿನಲ್ಲಿ ಬಡವರಿಗಾಗಿ ಇಂದಿರಾ ಆವಾಸ್ ಯೋಜನೆಯಲ್ಲಿ ಸರ್ಕಾರದಿಂದ 32 ಮನೆಗಳು ಮಂಜೂರಾದವು. ಪ್ರತಿಯೊಬ್ಬ ಫಲಾನುಭವಿಗೂ 25,000 ರೂ. ನಂತೆ ಸರ್ಕಾರದಿಂದ 8 ಲಕ್ಷ ರೂಪಾಯಿಗಳು ಬಿಡುಗಡೆಯಾಗಿತ್ತು. ಪ್ರಗತಿ ಗ್ರಾಮೀಣ ಬ್ಯಾಂಕ್‌ನಲ್ಲಿ ಖಾತೆ ತೆಗೆದು ಅದರ ಮೂಲಕ ಮೂರು ಕಂತುಗಳಲ್ಲಿ ಫಲಾನುಭವಿಗಳಿಗೆ ಹಣ ನೀಡುವುದೆಂದು ಸರ್ಕಾರ ಆದೇಶಿಸಿತ್ತು. ಆದರೆ ಗ್ರಾಮಪಂಚಾಯತ್‌ನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸರ್ಕಾರಿ ಆದೇಶಗಳನ್ನು ಧಿಕ್ಕರಿಸಿ, ಒಂದು ಕಂತನ್ನು ಮಾತ್ರ ನೀಡಿ ಉಳಿದ ಎರಡು ಕಂತಿನ ಸುಮಾರು 5 ಲಕ್ಷ ರೂಪಾಯಿಗಳನ್ನು ಗುಳುಂ ಮಾಡಿದ್ದಾರೆ.

ಅರ್ಧಕ್ಕೆ ನಿಂತ ಮನೆಗಳು - ಮಳೆ ಬಂದರೇ ದೇವರೇ ಗತಿ!

ತಮಗೆ ಮನೆ ಮಂಜೂರಾಗಿದೆಯೆಂಬ ಖುಷಿಯಲ್ಲಿ ಫಲಾನುಭವಿಗಳು ತಾವು ವಾಸಿಸುತ್ತಿದ್ದ ಗುಡಿಸಲುಗಳನ್ನು ಕಿತ್ತೆಸೆದು ಮನೆ ಕಟ್ಟಲು ಶುರು ಮಾಡಿದರು. ಎರಡು, ಮೂರನೇ ಕಂತಿನ ಹಣ ಬರುವುದೆಂಬ ನಿರೀಕ್ಷೆಯಲ್ಲಿ ಕಾದುಕೂತರು. ಎಲ್ಲಿ ಬರುತ್ತದೆ ಹಣ? ಗ್ರಾಮಪಂಚಾಯತ್‌ನ ಅಧ್ಯಕ್ಷೆ ಯಲ್ಲಮ್ಮ ಮತ್ತು ಕಾರ್ಯದರ್ಶಿ ದೊಡ್ಡಬಸವ ಎಂಬ ಭಕಾಸುರರ ಹೊಟ್ಟೆಗೆ ಹಣ ಜಮಾ ಆಗಿತ್ತು. ಮನೆಗಳು ಅರ್ಧಕ್ಕೆ ನಿಂತವು, ಬಡಜನ ಬೀದಿಪಾಲಾದರು. ಮಳೆ ಬಂದಾಗ ಮಕ್ಕಳು ಮರಿಗಳೊಂದಿಗೆ ದೇವಸ್ಥಾನದಲ್ಲಿ ಆಶ್ರಯ ಪಡೆಯಬೇಕಾದ ಸ್ಥಿತಿ ಬಂದೊದಗಿದೆ ಅವರಿಗೆ.

ಬಡವರ ಕೂಗು ಕೇಳದ ಶಾಸಕ

ಇಷ್ಟೆಲ್ಲಾ ಅವಗಢಗಳು ನಡೆದಿದ್ದು, ಬಡಜನತೆ ಬೀದಿ ಪಾಲಾಗಿದ್ದರೂ ಶಾಸಕ



ಬಾದರ್ಲಿ ಹಂಪನಗೌಡ ಇತ್ತ ಕಡೆ ತಲೆ ಹಾಕಿಲ್ಲ. ತನಗೂ ಇದಕ್ಕೂ ಸಂಬಂಧವೇ ಇಲ್ಲದವರಂತೆ, ಜಾಣಕುರುಡು ಪ್ರದರ್ಶಿಸುತ್ತಿದ್ದಾರೆ. ಅವ್ಯವಾಹರ ನಡೆಸಿ, ಲಕ್ಷಾಂತರ ರೂಪಾಯಿ ನುಂಗಿಹಾಕಿರುವ ವ್ಯಕ್ತಿಗಳಿಗೆ ಆಶೀರ್ವಾದ ನೀಡುತ್ತಿರುವುದು ನಾಚಿಕೆಗೇಡಿನ ಸಂಗತಿ.

ಹೋರಾಟಕ್ಕಿಳಿದ ಕೂಲಿಕಾರರು

ಶಾಸಕರು ಸೇರಿದಂತೆ, ಅಧಿಕಾರಿಗಳು ತಮ್ಮ ಕೂಗನ್ನು ಕೇಳದೆ ನಡುಬೀದಿಯಲ್ಲಿ ನಿಲ್ಲಿಸಿದ ಸ್ಥಿತಿಯಿಂದ ಬೇಸತ್ತ ಕೂಲಿಕಾರರು ಬೇರೆ ದಾರಿ ಕಾಣದೆ ಹೋರಾಟಕ್ಕೆ ಇಳಿದಿದ್ದಾರೆ. ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಆಗಸ್ಟ್ 6 ರಂದು ಸಾಲಗುಂದ ಗ್ರಾಮಪಂಚಾಯತ್ ಕಛೇರಿಮುಂದೆ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಆರಂಭಿಸಿದರು. ಅರ್ಧಕ್ಕೆ ನಿಂತ ಮನೆಗಳನ್ನು ಪೂರ್ಣಗೊಳಿಸಬೇಕು, ಬಡ ಕೂಲಿಕಾರರ ದುಡ್ಡನ್ನು ನುಂಗಿ ಹಾಕಿದವರಿಗೆ ತಕ್ಕ ಶಿಕ್ಷೆಯಾಗಬೇಕೆಂದು ಒತ್ತಾಯಿಸಿದರು. ಸುಮಾರು ಇಪ್ಪತ್ತು ದಿನಗಳವರೆಗೂ ಧರಣಿ ಕುಳಿತ ಇವರತ್ತ ಶಾಸಕರಾಗಲೀ, ಯಾವೊಬ್ಬ ಅಧಿಕಾರಿಯಾಗಲೂ ತಲೆ ಹಾಕದೆ, ಇವರ ಕಷ್ಟ ಸುಖ ವಿಚಾರಿಸದೆ ನಿರ್ಲಕ್ಷ್ಯ ತೋರಿದ್ದಾರೆ. ಧಿಕ್ಕಾರವಿರಲಿ ಇಂತಹ ಜನಪ್ರತಿನಿಧಿಗಳಿಗೆ.

ತಮ್ಮ ಬೇಡಿಕೆ ಈಡೇರುವವರೆಗೂ ಧರಣಿ ಕೈ ಬಿಡುವುದಿಲ್ಲವೆಂದು ನಿಶ್ಚಯಿಸಿರುವ ಕೂಲಿಕಾರರು ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಡಿ.ಹುಸೇನಪ್ಪ, ನಾರಾಯಣ ಕಿಲ್ಲದೆ, ಅಪ್ಪಣ್ಣ ಕಾಂಬಳೆ, ನರಸಿಂಹ ಮುಂತಾದವರ ನೇತೃತ್ವದಲ್ಲಿ ಪ್ರತಿಭಟನೆ ಮುಂದುವರೆಸಿದ್ದಾರೆ.

ತೇಲಿ ಬಂದುವೆಲ್ಲಿಂದ

ತೇಲಿ ಬಂದುವೆಲ್ಲಿಂದ ಇಷ್ಟೊಂದು ಮೋಡಗಳು
ರಸ್ತೆಯುದ್ದಕು ಹರಿದು ಬಂದವು ಎದೆಯ
ಹಾಡುಗಳು

★

ಹಕ್ಕಿ ಗೂಡು ಗೂಡುಗಳ ಹೊಕ್ಕು
ಹಾಡುಗಳ ಹೆಕ್ಕಿ ತಂದವರಿಲ್ಲಿ ಇದ್ದೀರಿ, ಇಲ್ಲೇ
ಇದ್ದೀರಿ
ನಾ ಕವಿತೆ ಬರೆಯುವುದೇನು ಮಹಾ
ಕವಿತೆಯನ್ನೇ ಬದುಕಿದವರು ಇಲ್ಲಿ ಇದ್ದೀರಿ ಇಲ್ಲೇ
ಇದ್ದೀರಿ

★

ನಮ್ಮೊಳಗಣ 'ವಿಷ ನಾಗರ'ದ ಹಲ್ಲ
ಕೀಳ ಬಂದವರು ನೀವು
ನೆಲ...ದ ನಾಲಗೆಯ ಹಾಸಿ
...ತ್ತಿ ಬೀಜಾಸುರನ ನುಂಗಲೆಳೆಸಿದವರು

★

ನಿಮ್ಮ ಬೆವರಲಿ ಮಿಂದ
ವರ್ತಮಾನಗಳೆಲ್ಲ
ನಾಳೆಗಳ ಕನಸಾಗಿ ಚಿಗುರಿ
ಸಂಘರ್ಷದ ಬೀಜ ಬಿತ್ತಿದ್ದೀರಿ
ಸ್ವಾಭಿಮಾನದ ಶ್ವೇತ ಪತಾಕೆಯನೆತ್ತಿದ್ದೀರಿ.

★

ನೀವು ಎಡವಿದವರ ಓಡಿ ಬಂದೆತ್ತುವ ತಾಯಿ
ನೀವು ವರ್ಗ ಹೋರಾಟಗಳ ರಣರಂಗದಲಿ
ಭಲದ ಭುಜ ಕೊಡುವ ಸಂಗಾತಿ
ನಿಮಗೆ ಕೆಂಪು ವಂದನೆ
ನಿಮಗೆ ಕೆಂಪು ವಂದನೆ

ಸಿದ್ಧಲಿಂಗಯ್ಯ (ಮಾನ್ವಿ)
(ಜನವಾದಿ ಮಹಿಳಾ 6ನೇ ರಾಜ್ಯ ಸಮ್ಮೇಳನದ ಬೃಹತ್ ಮಹಿಳಾ ಸಮೂಹದ ಸ್ಫೂರ್ತಿಯನ್ನು ಸ್ಮರಿಸಿ)



ಬಡವರ ಬದುಕಿದರೆ ನಮಗೇನು ಲಾಭ ?


ಈ ಪ್ರಶ್ನೆಅಸಂಬದ್ಧವೆನಿಸಬಹುದಲ್ಲವೇ? ಇಂತಹ ಪ್ರಶ್ನೆಗಳನ್ನು ನೇರವಾಗಿ ಕೇಳದೇ ಇದ್ದರೂ ಪರೋಕ್ಷವಾಗಿ ಕೇಳುವವರಿದ್ದಾರೆ. ಉದಾರೀಕರಣ, ಖಾಸಗೀಕರಣದ ಈ ದಿನಗಳಲ್ಲಿ ಪ್ರತಿಯೊಂದು ಬೆಳವಣಿಗೆಯನ್ನು 'ಅದರಿಂದ ನಮಗೇನು ಲಾಭ' ಎಂಬ ದೃಷ್ಟಿಯಿಂದಲೇ ನೋಡಲಾಗುತ್ತದೆ. ಇದು ಬಂಡವಾಳಶಾಹಿಯ ದೃಷ್ಟಿಕೋನ. ಇಂತಹ ಪ್ರಶ್ನೆಯನ್ನು ನೋವಾರ್ಟಿಸ್ ಎಂಬ ಬಹುರಾಷ್ಟ್ರೀಯ ಕಂಪನಿ (ಬ.ಕ.) ಹೀಗೆ ಕೇಳಿದೆ ಎಂಬುದನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ.

ನೋವಾರ್ಟಿಸ್ ಎಂಬುದು ಬಹುರಾಷ್ಟ್ರೀಯ ಔಷಧಿ ಕಂಪನಿ. ಈ ಕಂಪನಿ ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆ ನೀಡುವ ಔಷಧಿಯೊಂದಕ್ಕೆ ಪೇಟೆಂಟ್ ಅರ್ಜಿ ಸಲ್ಲಿಸಿತ್ತು. ಗ್ಲಿವೆಕೂ ಎಂಬ ರಕ್ತ ಕ್ಯಾನ್ಸರಿನ ಈ ಔಷಧಿಯನ್ನು ತಾನು ಅಭಿವೃದ್ಧಿಪಡಿಸಿರುವುದಾಗಿ ಅದು ಹೇಳಿಕೊಂಡಿತ್ತು. ಆದರೆ ನೋವಾರ್ಟಿಸ್‌ಗೆ ಪೇಟೆಂಟ್ ದೊರೆಯಲಿಲ್ಲ. ಪೇಟೆಂಟ್ ಅರ್ಜಿ ತಿರಸ್ಕೃತವಾದುದರ ವಿರುದ್ಧ ನೋವಾರ್ಟಿಸ್ ಮದ್ರಾಸ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿಯನ್ನು ಮದ್ರಾಸ್ ಹೈಕೋರ್ಟ್ ತಿರಸ್ಕರಿಸಿತು.

ಮದ್ರಾಸ್ ಹೈಕೋರ್ಟ್ ಈ ಮೇಲ್ಮನವಿ ಎತ್ತಿಹಿಡಿದಿದ್ದರೆ ನೋವಾರ್ಟಿಸ್‌ಗೆ ಪೇಟೆಂಟ್ ದೊರೆತು ಅದು ಈ ಔಷಧಿಯ ಮೇಲೆ ಹಕ್ಕು ಸ್ವಾಮ್ಯ ಪಡೆಯುತ್ತಿತ್ತು. ಹೀಗೆ ಹಕ್ಕು ದೊರೆತ ಮೇಲೆ ಈ ಔಷಧದ ಬೆಲೆಯನ್ನು ನೋವಾರ್ಟಿಸ್ ನಿರ್ಧರಿಸುತ್ತಿತ್ತು. ಹೀಗೆ ನೋವಾರ್ಟಿಸ್ ಬಡವರಿಗೆ ಈ ಔಷಧಿ ದೊರೆಯದಂತೆ ಮಾಡಬಹುದಾಗಿತ್ತು. ಇಂತಹ ಒಂದು ಕೋರ್ಟ್ ಆದೇಶ ಬಂದರೆ ಜಗತ್ತಿನಾದ್ಯಂತ ಇನ್ನೂ ಇಂತಹ ಹಲವು ಮೇಲ್ಮನವಿಗಳಿಗೆ ಅವಕಾಶವಾಗುತ್ತಿತ್ತು. ಔಷಧಿಗಳ ಬೆಲೆ ಗಗನಕ್ಕೇರಲು ಇನ್ನೊಂದು ಅವಕಾಶವಾಗುತ್ತಿತ್ತು. ಆ ಮೂಲ ಬಹುರಾಷ್ಟ್ರೀಯ ಕಂಪನಿಗಳು ಲಾಭವನ್ನು ಬಾಚಿಕೊಳ್ಳುತ್ತಿದ್ದರು.

ಈ ಕಾರಣದಿಂದಲೇ ಮದ್ರಾಸ್ ಹೈಕೋರ್ಟಿನ ಈ ತೀರ್ಮಾನ ಬಹಳ ಮುಖ್ಯವಾಗಿರುವುದು. ನೋವಾರ್ಟಿಸ್ ನಂತಹ ಕಂಪನಿಗಳು ಇನ್ನೂ ಇಂತಹ ಪ್ರಯತ್ನಗಳನ್ನು ಮಾಡುತ್ತಲೇ ಇರುತ್ತವೆ. ಯಾಕೆಂದರೆ ಲಾಭಕೋರತನ ಅವುಗಳ ಹುಟ್ಟುಗುಣ. ಈ ಹುಟ್ಟುಗುಣ ಸುಟ್ಟರೂ ಹೋಗುವಂತಹದ್ದಲ್ಲ.

ಸದ್ಯಕ್ಕೆ ಕ್ಯಾನ್ಸರ್ ರೋಗಿಗಳಿಗೆ ಸ್ವಲ್ಪ ನೆಮ್ಮದಿ ದೊರೆತಿದೆ. ಈ ನೆಮ್ಮದಿ ಎಷ್ಟು ದಿನಗಳದ್ದೋ ತಿಳಿಯದು. ಯಾಕೆಂದರೆ ನೋವಾರ್ಟಿಸ್‌ನಂತಹ ಕಂಪನಿಗಳು ದಿನನಿತ್ಯ ಕೇಳುವ ಒಂದು ಪ್ರಶ್ನೆ "ಬಡವರು ಬದುಕಿದರೆ ನಮಗೇನು ಲಾಭ?" ಈ ಪ್ರಶ್ನೆಗೆ ಬಂಡವಾಳಶಾಹಿ ವ್ಯವಸ್ಥೆಯನ್ನೇ ಬದಲಿಸುವ ನಿರ್ಧಾರದೊಂದಿಗೆ ಇಡೀ ಮಾನವ ಸಮುದಾಯ ಉತ್ತರ ನೀಡಬೇಕಿದೆ.



ದೇಶ ಪ್ರೇಮದ ಜನೋತ್ಸವ

ದೇಶಪ್ರೇಮದ ಪಂಜು ಹಿಡಿದು ಜನರನ್ನು ಜಾಗೃತಗೊಳಿಸುತ್ತಾ ಯುವಜನರ ತಂಡ ಚಿಂತನೆಯ ಕಿಡಿ ಹೊತ್ತಿಸಿತು.

'ದಿ ಸ್ಪಿರಿಟ್ ಆಫ್ ಭಗತ್‌ಸಿಂಗ್' ಬೀದಿ ನಾಟಕ ಕೋಲಾರ ಜಿಲ್ಲೆಯ ಜನತೆಯ ಹೃದಯ ಮುಟ್ಟುವಲ್ಲಿ ಯಶಸ್ವಿಯಾಗಿದೆ. ಆಧುನಿಕ ಚಲನ ಚಿತ್ರಗೀತೆಗಳ ರೂಪಕಗಳಿಂದ ಬಿಚ್ಚಿಕೊಳ್ಳುವ ನಾಟಕ ನೋಡನೋಡುತ್ತಿದ್ದಂತೆ ಪ್ರೇಕ್ಷಕರನ್ನು ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದೊಳಕ್ಕೆ ಕರೆದೊಯ್ಯುತ್ತದೆ. ಇಂದಿನ ಮಾಧ್ಯಮಗಳು ಯುವಜನತೆಯನ್ನು ಹೇಗೆ ದಿಕ್ಕು ತಪ್ಪಿಸುತ್ತವೆ. ಅವರು ಎದುರಿಸುತ್ತಿರುವ ನೈಜ ಸಮಸ್ಯೆಗಳ ಕುರಿತು ಚಿಂತಿಸುವಂತೆ ಮಾಡದೆ ಹೇಗೆ ಭ್ರಮಾಲೋಕಕ್ಕೆ ಕೊಂಡೊಯ್ಯುತ್ತವೆ ಎಂಬುದನ್ನು ವಿವರಿಸುತ್ತಾ ದೇಶಪ್ರೇಮದತ್ತ ಅವರ ಮನಸ್ಸನ್ನು ಸೆಳೆಯುತ್ತದೆ. ಲಾಲಾ ಲಜಪತರಾಯ್ ಮೇಲೆ ನಡೆದ ಲಾಠಿ ಚಾರ್ಜ್ ಮತ್ತು ಅವರ ಸಾವಿಗೆ ಪ್ರತೀಕಾರವಾಗಿ ಇಂಗ್ಲಿಷ್ ಪೊಲೀಸ್ ಅಧಿಕಾರಿಯನ್ನು ಹತ್ಯೆ ಮಾಡುವ ಭಗತ್‌ಸಿಂಗ್ ಮತ್ತು ಅವರ ಸ್ನೇಹಿತರ ದೇಶಪ್ರೇಮ ಮತ್ತು ತ್ಯಾಗಮಯ ಚರಿತ್ರೆಯಿಂದ ಆರಂಭಗೊಂಡು ವಿವಿಧ ಹಂತಗಳಲ್ಲಿ ಭಗತ್‌ಸಿಂಗ್ ಬೆಳೆದ ಬಗೆಯನ್ನು ನಟನೆ ಮೂಲಕ ಪರಿಣಾಮಕಾರಿಯಾಗಿ ಪ್ರದರ್ಶಿಸಿ ನೋಡುಗರನ್ನು ಸ್ತಂಭೀಭೂತರಾಗಿಸುತ್ತದೆ. ಹುತಾತ್ಮ ಭಗತ್‌ಸಿಂಗ್‌ರನ್ನು ಗಲ್ಲಿಗೇರಿಸುವ ಅಂತಿಮ ದೃಶ್ಯ ಬರುತ್ತಿದ್ದಂತೆ ನೋಡುಗರ ಕಣ್ಣಲ್ಲಿ ಕಣ್ಣೀರು ಹನಿಗೂಡಿರುತ್ತದೆ. ಸೂಜಿ ಬಿದ್ದರೂ ಕೇಳುವಷ್ಟು ನಿಶ್ಶಬ್ದವಾಗುತ್ತದೆ ಅಲ್ಲಿನ ಪ್ರದೇಶ. ಜನತೆ ಯಾವುದೊ ಲೋಕದಲ್ಲಿ ಲೀನರಾದಂತೆ ಕಾಣುತ್ತಾರೆ.

ದೇಶಪ್ರೇಮವನ್ನು ಹೊತ್ತುಕೊಂಡು ಜಿಲ್ಲೆಯ ಹಳ್ಳಿಹಳ್ಳಿಗಳಲ್ಲಿ ಸಂಚರಿಸುತ್ತಿರುವ ದೇಶಪ್ರೇಮಿ ಜನೋತ್ಸವ ಜಾಥಾ ಜನತೆಯ ಮೇಲೆ ವಿಶೇಷ ಪರಿಣಾಮ ಬೀರಿದೆ. ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು, ಹುತಾತ್ಮ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳ ತ್ಯಾಗ ಬಲಿದಾನಗಳನ್ನು ಎಲ್ಲರ ಮನಗಳಲ್ಲಿ ಅಚ್ಚೊತ್ತುತ್ತದೆ. ಜನತೆಯ ನಡುವಿನಿಂದ ಬಂದಿದ್ದೇವೆ, ಮತ್ತೆ ಜನರ ಬಳಿಗೆ ಹೋಗುತ್ತಿದ್ದೇವೆ ಎಂದು ಸಾರುತ್ತಿದೆ.



ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150 ವರ್ಷ ಮತ್ತು ಹುತಾತ್ಮ ಭಗತ್‌ಸಿಂಗ್‌ರ ಜನ್ಮ ಶತಾಬ್ಧಿ ಅಂಗವಾಗಿ ದೇಶಪ್ರೇಮಿ ಜನೋತ್ಸವ ಜಾಥಾವನ್ನು ಜಿಲ್ಲೆಯಾದ್ಯಂತ ಯಶಸ್ವಿಯಾಗಿ ನಡೆಸಲು ರಚಿಸಲಾದ ಆಚರಣಾ ಸಮಿತಿ ಜಿ.ವಿ.ಶ್ರೀರಾಮರೆಡ್ಡಿ ಸಂಚಾಲಕತ್ವದಲ್ಲಿ, ಚಿನ್ನರಾಯ, ವಿ.ಗೀತಾ ಮತ್ತು ಎಂ.ಪಿ.ಮುನಿವೆಂಕಟಪ್ಪ ಸಹ ಸಂಚಾಲಕತ್ವದಲ್ಲಿ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಮೂರು ತಿಂಗಳಿನಿಂದ ಅಹೋರಾತ್ರಿ ಶ್ರಮಿಸುತ್ತಿದೆ. ಗುಡಿಬಂಡೆ ತಾಲೂಕಿನ ಎಲ್ಲೋಡುನಲ್ಲಿ ತರಬೇತಿ ಪಡೆದ ಕಲಾವಿದರು ಜಿಲ್ಲೆಯ ಜನತೆಯ ಮನಗಳಲ್ಲಿ ಸ್ಫೂರ್ತಿಯನ್ನು ತುಂಬುತ್ತಾ ಸಾಗಿದ್ದಾರೆ. ಸಮುದಾಯದ ತಂಡದ ಕಲಾವಿದರಾದ ಚೊಕ್ಕಲಿಂಗಂ, ಓಬಳರಾಜು, ಎ.ವಿ.ವೆಂಕಟರಾಮ್, ಎಲ್.ರಾಮಚಂದ್ರ ಮತ್ತು ಚಿನ್ನರಾಯಪ್ಪ ಯಶಸ್ವಿಯಾಗಿ ನಾಟಕ ನಿರ್ದೇಶನ ನೀಡಿದ್ದಾರೆ. ಜಿಲ್ಲೆಯಾದ್ಯಂತ ಎಲ್ಲ ಸಾಮೂಹಿಕ ಸಂಘಟನೆಗಳ ಮುಖಂಡರು ಜಾಥಾ ಯಶಸ್ವಿಗೆ ಅಗತ್ಯ ಸಿದ್ಧತೆಗಳನ್ನು ನಡೆಸಿ ಆಧಾರ ಕಂಬಗಳಾಗಿ ದುಡಿಯುತ್ತಿದ್ದಾರೆ.

ಆಗಸ್ಟ್ 15ರಂದು ಎರಡನೇ ಜಲಿಯನ್ ವಾಲಾಬಾಗ್ ಎಂದು ಪ್ರಖ್ಯಾತವಾಗಿರುವ ಗೌರಿಬಿದನೂರಿನ ವಿದುರಾಶ್ವತ್ಥದಲ್ಲಿ ಮತ್ತು ಕೆಜಿಎಫ್‌ನ ಹುತಾತ್ಮ ಮೈದಾನದಲ್ಲಿ ಜಾಥಾಗಳು ಉದ್ಘಾಟನೆಗೊಂಡವು. ವಿದುರಾಶ್ವತ್ಥದಲ್ಲಿ ಜಾಥಾವನ್ನು ಜನಪದ ಕಲಾವಿದ ಜನ್ನಿ ಉದ್ಘಾಟಿಸಿದರು. ಜಿ.ವಿ.ಶ್ರೀರಾಮರೆಡ್ಡಿ, ವೆಂಕಟಸ್ವಾಮಿ ರೆಡ್ಡಿ, ವಿದ್ಯಾರ್ಥಿ ಮುಖಂಡರಾದ ಎಂ.ಪಿ.ಮುನಿ ವೆಂಕಟಪ್ಪ, ಡಿವೈಎಫ್‌ಐ ಮುಖಂಡರಾದ ಚಿನ್ನರಾಯಪ್ಪ, ಸಿ.ಸಿ.ಅಶ್ವತ್ ರೈತಮುಖಂಡರಾದ ಗಂಗಿರೆಡ್ಡಿ, ಸಿದ್ದಗಂಗಪ್ಪ ಮತ್ತಿತರರು ಹಾಜರಿದ್ದರು. ಕೆಜಿಎಫ್ ಜಾಥಾವನ್ನು ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ನವೀನ್ ಕುಮಾರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಅರ್ಜುನನ್, ಸವರಿದಾಸ್, ಆನಂದ್‌ರಾಜ್, ಡಿವೈಎಫ್‌ಐ ಮುಖಂಡರಾದ ತಂಗರಾಜ್, ನಿಕ್ಸನ್ ಹಾಗೂ ಡಾ.ಸಿ.ಕೃಷ್ಣ ಕುಮಾರ್ ಹಾಗೂ ಜೇಮ್ಸ್ ಪಾಲ್ ಉಪಸ್ಥಿತರಿದ್ದರು.

ಬೆಂಗಳೂರು ಮತ್ತಿತರ ಕಡೆಗಳಿಂದ ಹಲವು ರೀತಿಯ ಕಾನೂನು ಬಾಹಿರ ಕೃತ್ಯಗಳಿಂದ ಹಣ ಲೂಟಿ ಮಾಡಿರುವ ಕೆಲವರು ಕೋಲಾರ ಜಿಲ್ಲೆಗೆ ಕಾಲಿಟ್ಟಿದ್ದಾರೆ. ಬಾಗೇಪಲ್ಲಿಯಲ್ಲಿ ಉಚಿತ ಸಾಮೂಹಿಕ ವಿವಾಹಗಳು ನಡೆಸಲು, ದೇವಾಲಯಗಳ ಅಭಿವೃದ್ಧಿಗೆ ಹಣ ನೀಡುವುದು ನಡೆಸುತ್ತಿದ್ದಾರೆ. ಸರ್ಕಾರಿ ಭೂಮಿ ಕಬಳಿಸಿ ಕೋಟ್ಯಾಂತರ ಹಣ ಲೂಟಿ ಮಾಡಿರುವವನೊಬ್ಬ ಕೋಲಾರದಲ್ಲಿ ಸ್ತ್ರೀಶಕ್ತಿ ಸಂಘಗಳಿಗೆ ಹಣ, ಹಲವರಿಗೆ ಹಲವಾರು ರೀತಿಯ ಆಮಿಷಗಳು ಒಡ್... ಕೆಲಸಗಳನ್ನು ಮುಂದುವರೆಸಿದ್ದಾನೆ. ಬೆಂಗಳೂರಿ... ಬಾರ್‌ಗಳನ್ನು ನಡೆಸುವವನೊಬ್ಬ ಶಿಡ್ಲಘಟ್ಟ... ಇಂತಹದೇ ಕಾರ್ಯಗಳಲ್ಲಿ ಮಗ್ನನಾಗಿದ್ದಾ... ಮತ್ತೊಂದೆಡೆ ಸಣ್ಣ ಮಟ್ಟ ಪುಡಾರಿ ರಾಜಕಾರಣಿ... ತಾಲೂಕು ಪಂಚಾಯಿತಿ ಗ್ರಾಮ ಪಂಚಾಯಿತಿ ... ಉಪಾಧ್ಯಕ್ಷ ಸ್ಥಾನಗಳನ್ನು ತಮಗೆ ಅನುಕೂಲ... ವಂತೆ ಮೀಸಲಾತಿ ಮಾಡಿಸಿಕೊಳ್ಳ... ಮಗ್ನರಾಗಿದ್ದಾರೆ. ನಗರ, ಪಟ್ಟಣ ಪ್ರದೇಶದ ... ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮಗ್ನರಾಗಿದ್ದಾ...

ಆದರೆ ಡಿವೈಎಫ್‌ಐ, ಎಸ್‌ಎಫ್‌ಐ ... ಜೆಎಂಎಸ್ ಸಂಘಟನೆಗಳ ಕಾರ್ಯಕರ್ತರು ... ಪ್ರೇಮಿ ಸಂದೇಶ ಹರಡಲು ಹಳ್ಳಿ ಹಳ್ಳಿ ಸುತ್ತುತ್ತಿ... ಜಿಲ್ಲೆಯಲ್ಲಿ ಎಂತಹ ಪಿತೂರಿಗಳನ್ನು ನಡೆಸಿ ಕೋ... ಗಲಭೆಗಳನ್ನು ಸೃಷ್ಟಿಸಿ ತಮ್ಮ ಬೇಳೆ ಬೇ... ಕೊಳ್ಳಬೇಕೆಂದು ಸಂಘಪರಿವಾರ ದವರು ಹೊ... ಹಾಕುತ್ತಿದ್ದಾರೆ.

ಇದುವರೆಗೂ ಗೌರಿಬಿದನೂರಿನ ... ಗುಡಿಬಂಡೆಯ 100, ಬಂಗಾರಪೇಟೆಯ 50ಕ್ಕೂ... ಕಡೆಗಳಲ್ಲಿ ಮುಳಬಾಗಿಲಿನಲ್ಲಿ 23, ಮಾಲೂ... 25 ಗ್ರಾಮಗಳು ಮತ್ತು ಕೆಜಿಎಫ್‌ನಲ್ಲಿ 7 ಸ್ಥಳ... ನಾಟಕ ಪ್ರದರ್ಶನ, ರೂಪಕ ಹಾಡುಗಳ ಕಾರ್ಯ... ನೀಡಲಾಗಿದೆ. ಕೋಲಾರದಲ್ಲಿ ಸುಮಾರು ... ಗ್ರಾಮಗಳು, ಹತ್ತು ಶಾಲಾಕಾಲೇಜುಗಳಲ್ಲಿ ಕಾರ್ಯ... ನೀಡಲಾಗಿದೆ.

ಚಳಿ, ಗಾಳಿ ಮಳೆ ಅನಾರೋಗ್ಯ ಎ... ಕಲಾವಿದರು ಜಾಥಾದಲ್ಲಿ ತಮ್ಮ... ತೊಡಗಿಸಿಕೊಂಡಿದ್ದಾರೆ.

ಸತತ ಮೂರು ತಿಂಗಳ ಕಾಲ ಜ... ನಡೆಸುವುದು ಹೇಗೆಂಬ ಕುರಿತು ಆರಂಭ... ಹಲವರಲ್ಲಿ ಆತಂಕ ಮೂಡಿತ್ತು. ಜ... ಮುನ್ನಡೆಯುತ್ತಿದ್ದಂತೆ ಕಂಡಿರುವ ಯಶಸ್ಸು ... ಮುಖದಲ್ಲಿ ಮಂದಹಾಸ ಮೂಡಿಸಿದೆ. ಕೇರಳ... ಬಂದಿದ್ದ ಕಲಾವಿದರು ಸತತ ಮೂರು ದಿನ ... ರಾತ್ರಿ ಕೆಲಸ ಮಾಡಿ ಜಾಥಾದ ನಾಲ್ಕು ವಾಹನ... ಆಕರ್ಷಕವಾಗಿ ಅಲಂಕರಿಸಿದ್ದಾರೆ. ಭಗತ್... ಸೇರಿದಂತೆ ಸ್ವಾತಂತ್ರ್ಯ ಸಂಗ್ರಾಮದ ಭಾವಚಿತ್ರ... ಗಾಡಿಗಳ ಮೇಲೆ ಆಕರ್ಷಕವಾಗಿ ಚಿತ್ರಿಸಲಾಗಿ...

\- ಮುರುಳಿ...

'ಒಂದು ಜಗತ್ತು ಒಂದು ಕನಸಿನ' ಬೀಜಿಂಗ್ ಒಲಂಪಿಕ್...

2004ರಲ್ಲಿ ಗ್ರೀಕ್‌ನ ಅಥೆನ್ಸ್‌ನಲ್ಲಿ ಒಲಿಂಪಿಕ್ಸ್ ನಡೆಯುವುದಕ್ಕೆ ಮುನ್ನ ಈ ಜಾಗತಿಕ ಕೂಟ ಅಲ್ಲಿ ನಡೆಯುವುದೇ ಎಂಬ ಅನುಮಾನಗಳು ಮೂಡಿದ್ದವು. ಏಕೆಂದರೆ ಕ್ರೀಡಾ ಕೂಟ ಉದ್ಘಾಟನೆ ದಿನಾಂಕದಂದೂ ಸಹ ಅಲ್ಲಿ ನಿರ್ಮಾಣ ಕಾರ್ಯಗಳು ನಡೆಯುತ್ತಲೇ ಇದ್ದವು. ಗ್ರೀಸ್ ಹಣದ ಮುಗ್ಗಟ್ಟು ಅನುಭವಿಸುತ್ತಿದೆ ಎಂದು ಆ ಸಂದರ್ಭದಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ ಅಧ್ಯಕ್ಷ ಜುಹಾನ್ ಆಂಟೋನಿಯೊ ಸಮರಾಂಚ್ ನೋವಿನಿಂದ ಉತ್ತರಿಸಿದ್ದರು. ಸಾಮ್ರಾಜ್ಯಶಾಹಿ ಆಕ್ರಮಣ ಇತಿಹಾಸ ಹೊಂದಿರುವ ಸುದೀರ್ಘವಾಗಿರುವ ದೇಶವಾಗಿದ್ದ ಗ್ರೀಸ್, ಜಗತ್ತಿನ ಹಲವಾರು ದೇಶಗಳನ್ನು ತನ್ನ ವಸಾಹತು ದೇಶಗಳನ್ನಾಗಿ ಮಾಡಿಕೊಂಡು ಸಂಪತ್ತನ್ನು ಲೂಟಿ ಮಾಡಿತ್ತು. ಹಾಗಿದ್ದರೂ ಜಾಗತಿಕ ಕ್ರೀಡೆಗಳನ್ನು ನಡೆಸುವ ತಾಕತ್ತು ಅದಕ್ಕೆ ಇರಲಿಲ್ಲ.

ಒಲಿಂಪಿಕ್ಸ್ ಕ್ರೀಡೆಗಳನ್ನು ನಡೆಸಲು ಬೀಜಿಂಗ್ ಇಂದೇ ಸಿದ್ಧವಾಗಿದೆ ಎಂದು ಸಮರಾಂಚ್ ಅದೇ ಸಂದರ್ಭದಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಯೊಂದಕ್ಕೆ ಹೆಮ್ಮೆಯಿಂದ ಉತ್ತರಿಸಿದ್ದರು.

2008ರಲ್ಲಿ ಬೀಜಿಂಗ್‌ನಲ್ಲಿ ನಡೆಯುವ ಒಲಿಂಪಿಕ್ಸ್ ಕ್ರೀಡೆಗಳಿಗೆ ಆತಿಥ್ಯ ನೀಡಲು ಚೀನಾ ಸರ್ಕಾರ ಸರ್ವಸಜ್ಜಿತವಾಗಿದೆ. ಇದಕ್ಕೆ ಪೂರ್ವಭಾವಿಯಾಗಿಯೇ 2005ರಲ್ಲಿ ಹಿರಿಯರ ಒಲಿಂಪಿಕ್ಸ್, 2006ರಲ್ಲಿ ಅಂತಾರಾಷ್ಟ್ರೀಯ ಮಹಿಳೆಯರ ಸಾಫ್ಟ್‌ಬಾಲ್ ಸ್ಪರ್ಧೆಗಳನ್ನು ನಡೆಸಿ ತನ್ನ ಸಾಮರ್ಥ್ಯ ಸಾಬೀತುಗೊಳಿಸಿದೆ.

ವಿಶ್ವದ ಕ್ರೀಡಾಪಟುಗಳನ್ನು, ಕ್ರೀಡಾ ಪ್ರೇಮಿಗಳನ್ನು, ರಾಯಭಾರಿಗಳು ಮತ್ತಿತರ ಅಧಿಕಾರಿಗಳನ್ನು ಸ್ವಾಗತಿಸಲು ಇಡೀ ಚೀನಾ ದೇಶವೇ ತುದಿಗಾಲಲ್ಲಿ ನಿಂತಿದೆ. ಕ್ರೀಡಾಕೂಟದ ಸಂದರ್ಭದಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಿ ಎಂದು ಲಕ್ಷಾಂತರ ಮಂದಿ ಯುವಕ ಯುವತಿಯರು ಮನವಿಗಳನ್ನು ಸಲ್ಲಿಸಿ ಕಾದಿದ್ದಾರೆ. 2002ರಿಂದ 2006ರ ವರೆಗೆ ಇದುವರೆಗೂ 283.8ಶತಕೋಟಿ ಯುಆನ್(ಚೀನಾ ಕರೆನ್ಸಿ) ಅನ್ನು ಮೂಲ ಸೌಕರ್ಯ ಅಭಿವೃದ್ಧಿಗೆ ತೊಡಗಿಸಲಾಗಿದೆ. ಕ್ರೀಡಾಕೂಟದ ಸಂದರ್ಭದಲ್ಲಿ ಆಗಮಿಸುವವರು ಊಟ ವಸತಿಗಾಗಿ ಪರದಾಡಬಾರದೆಂದು 110 ಪಂಚತಾರಾ ಹೊಟೇಲ್‌ಗಳನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ. 200 ಎಕರೆ ಪ್ರದೇಶದಲ್ಲಿ ಕ್ರೀಡಾ ಗ್ರಾಮವನ್ನು ನಿರ್ಮಾಣ ಮಾಡಲಾಗಿದೆ.

'ಒಂದು ಜಗತ್ತು ಒಂದು ಕನಸು' ಎಂಬ ಮಹತ್ವಾಕಾಂಕ್ಷೆಯ ಶಿರೋನಾಮೆಯಡಿ ಈ ಜಾಗತಿಕ ಕ್ರೀಡಾಕೂಟವನ್ನು ಸಂಘಟಿಸಲಾಗುತ್ತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ಬಂಡವಾಳ ಶಾಹಿ ವ್ಯವಸ್ಥೆ ಜಗತ್ತಿನಲ್ಲಿ ತುಂಬಿತುಳುಕುತ್ತಿರುವ ಹಸಿವು, ಬಡತನವನ್ನು ನಿರ್ಮೂಲನೆ ಮಾಡುವುದಿರಲಿ ಸುಧಾರಣೆ ಮಾಡಲೂ ಸಾಧ್ಯವಾಗಿಲ್ಲ.


ಒಂದು ವರ್ಷದ ಕ್ಷಣಗಣನೆ ಆರಂಭವಾದಾಗಿನ ಸಂತಸದ ಸಮಾರಂಭ, ಬೀಜಿಂಗ್

2005ರಲ್ಲಿ ಅಮೆರಿಕದ ಪಶ್ಚಿಮ ಕರಾವಳಿಯಲ್ಲಿ ಕಾಣಿಸಿಕೊಂಡ ಕಟ್ರೀನಾ ಮತ್ತಿತರ ಚಂಡಮಾರುತದಲ್ಲಿ ನಿರಾಶ್ರಿತರಾದವರಿಗೆ ಆ ದೇಶ ಇನ್ನೂ ಪರಿಹಾರ ಒದಗಿಸಿಲ್ಲ. ಈ ದುರಂತದಲ್ಲಿ ನೂರಾರು ಮಂದಿ ಮೃತಪಟ್ಟು ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾರೆ. ಪ್ರಪಂಚದಲ್ಲೇ ಬೃಹತ್ ಆರ್ಥಿಕ ದೇಶವಾಗಿರುವ ಅಮೆರಿಕ ಅಲ್ಲಿನ ಜನಕ್ಕೆ ಇನ್ನೂ ಪರಿಹಾರ ಒದಗಿಸಲು ಸಾಧ್ಯವಾಗಿಲ್ಲ ಎನ್ನುವುದು ನಾಚಿಕೆಗೇ... ಸಂಗತಿಯಾಗಿದೆ. ಇಂದು ಅಮೆರಿಕದಲ್ಲಿ ಗಂಭ... ಆರ್ಥಿಕ ಬಿಕ್ಕಟ್ಟು ತಲೆದೋರಿದೆ. ದಿನೇ ದಿ... ಆರ್ಥಿಕ ಹಿಂಜರಿತ ಕಾಣುತ್ತಿದೆ. 13ಟ್ರಿಲಿಯ... ಡಾಲರ್ ಒಟ್ಟು ಆಂತರಿಕ ಉತ್ಪನ್ನ(ಜಿಡಿ... ಹೊಂದಿರುವ ಪ್ರಪಂಚದ ಬೃ... ಆರ್ಥಿಕ ದೇಶದಲ್ಲಿ ಇಂ... ನಿರುದ್ಯೋಗ ತಾಂಡವವಾಡು... ಕಳೆದ ಜುಲೈ ಮಾಹೆಯಲ್ಲಿ 9... ಉದ್ಯೋಗಗಳು ನಾಶವಾಗಿ... ಅಮೆರಿಕದಲ್ಲಿ ಹಣ ಮಾಡಲಾಗ... ಎಂದು ಬಂಡವಾಳಶಾಹಿ... ಅಲ್ಲಿಂದ ಕಾಲು ಕೀಳುತ್ತಿದ್ದಾರೆ.

ಆದರೆ ಚೀನಾ ಹಾಗ... ಹದಿನೈದು ವರ್ಷಗಳಿಂದ... ನಿರಂತರವಾಗಿ ಶೇಕಡ 12... 15ರಷ್ಟು ಆರ್ಥಿಕ ಅಭಿ... ಸಾಧಿಸುತ್ತಿದೆ. 2025ಕ್ಕೆ ಚೀನಾ ... ಬೆಳೆಯಬಹುದಾದ ಅಂದಾಜು ಜನಸಂ... ಅನುಗುಣವಾಗಿ ಆಹಾರ ಭದ್ರತೆಗೆ ಈ... ಯೋಜನೆಗಳನ್ನು ರೂಪಿಸಲಾಗಿದೆ. ಅ... ಮಾರುಕಟ್ಟೆಯಲ್ಲಿ ಚೀನಿ ವಸ್ತು... ತುಂಬಿತುಳುಕುತ್ತಿದೆ. ಕೇವಲ ಒಂದು ಒಲಿಂ... ಕ್ರೀಡೆಯಲ್ಲ ಹಲವಾರು ಕ್ರೀಡೆಗಳನ್ನು ನಡೆ... ಶಕ್ತಿಯನ್ನು ಕಮ್ಯೂನಿಸ್ಟ್ ದೇಶ ಚೀನಾ ಹೊಂ...

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027 Editor: S.Y.GURUSHANTH